
ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಮಾರ್ಚ್ 21, 2012 ಪುಟ 20 ರೂ. 14/-



ಂಭ್ರಮ ಕ್ಷಣಿಕ


ಕಾದಿದೆ ಸಿಬಿಐ
ಕುಣಿಕೆ



ವಕೀಲರು-ಮಾಧ್ಯಮ-ಪೋಲೀಸ್
ಎರಡು ಕಥೆ ಒಂದು ವ್ಯಥೆ



'ಬ್ಯಾರಿ' ಸಿನಿಮಾ
ಕಥೆ ಕದ್ದವನಿಗೆ ಸ್ವರ್ಣ ಕಮಲ



-2012

ವಿಶೇಷಾಂಕ

'ಬ್ಯಾರಿ' ಸಿನಿಮಾ ಕಥೆ ಕದ್ದ ನಿರ್ಮಾಪಕ

'ಬ್ಯಾರಿ' ಸಿನಿಮಾಗೆ ಸ್ವರ್ಣಕಮಲ ಪ್ರಶಸ್ತಿ ಬಂದಿದೆ. ಆದರೆ ಆ ಸಿನಿಮಾವ ನಿರ್ಮಿಸಿರುವ ಚೊಕ್ಕಬೆಟ್ಟು ಅಲ್ತಾಫ್ ಹುಸೇನ್ ಆ ಸಿನಿಮಾದ ಕತೆಯನ ಖ್ಯಾತ ಕನ್ನಡ ಲೇಖಕಿ ಸಾರಾ ಅಬೂಬಕ್ಕರ್ ಅವರ 'ಚಂದ್ರಗಿರಿ ತೀರದಲ್ ಕಾದಂಬರಿಯಿಂದ ಕದ್ದಿದ್ದಾನೆ... ಈ ಪ್ರಕರಣ ಕುರಿತು ಸಾರಾ ಅವರು ಬರೆದಿರುವ ಲೇಖನ ಇಲ್ಲಿದೆ..

• ಸಂ

ಕಳೆದೊಂದು ವರ್ಷದಿಂದ ನಾನು ಒಂದು ವಿಧದ ಮಾನಸಿಕ ಹಿಂಸೆ ಮತ್ತು ನೋವನ್ನನುಭವಿಸುತ್ತಿದ್ದೇನೆ. ನಾನು ಹೆತ್ತ ನನ್ನ ಮಗುವನ್ನು (ಚಂದ್ರಗಿರಿ ತೀರದಲ್ಲಿ) ಬ್ಯಾರಿ ಸಮುದಾಯದ ಗೂಂಡಾ ಓರ್ವನು ಬಲವಂತವಾಗಿ ಅಪಹರಿಸಿ ಅದರ ಕೈಕಾಲು ತುಂಡರಿಸಿ ಕತ್ತು ತಿರುಚಿ ಇದು ತನ್ನದೇ ಮಗುವೆಂದು ಸಾರುತ್ತಾ ಅದನ್ನು ಮಾರಾಟ ಮಾಡುತ್ತಾ ಅದರ ಪ್ರಯೋಜನ ಪಡೆಯುವುದು ಹಾಗೂ ಈ ಸಮಾಜ ಬಾಂಧವರೂ ಕೂಡಾ ಆತನಿಗೆ ಸಹಕಾರ ನೀಡಿ 'ಅದು ಆತನದೇ ಮಗು' ಎನ್ನುತ್ತಿರುವುದು ಖಂಡನೀಯ.

ಕನ್ನಡಿಗರೆಲ್ಲರಿಗೂ ತಿಳಿದಿರುವಂತೆ ನನ್ನ 'ಚಂದ್ರಗಿರಿ ತೀರದಲ್ಲಿ' ಎಂಬ ಕಾದಂಬರಿಯನ್ನು ನಾನು 1981 ರ ಕೊನೆಯಲ್ಲಿ ಬರೆದುದನ್ನು 82 ರ ಪ್ರಾರಂಭದಲ್ಲಿ ಲಂಕೇಶ್ ಅವರು ತಮ್ಮ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸತೊಡಗಿದರು. ಇದು ತೀರಾ ಚಿಕ್ಕದಾಗಿದ್ದ ಕಾರಣ ಇದರ ದ್ವಿತೀಯ ಮುದ್ರಣದ ಸಂದರ್ಭದಲ್ಲಿ ಇದನ್ನು ನಾನು ಕೊಂಚ ಹಿಗ್ಗಿಸಿದೆ. ಆ ಬಳಿಕ ಈ ಕೃತಿ ಕರ್ನಾಟಕದ ಹಲವು ವಿಶ್ವ ವಿದ್ಯಾನಿಲಯಗಳಲ್ಲಿ ಪಠ್ಯಪುಸ್ತಕ ವಾಗಿದೆಯಲ್ಲದೆ ಈವರೆಗೆ ಏಳು ಮುದ್ರಣಗಳನ್ನು ಕಂಡಿದೆ. ಈ ಕೃತಿ ಮಲಯಾಳ, ತಮಿಳು, ಹಿಂದಿ, ತೆಲುಗು, ಒರಿಯಾ, ಇಂಗ್ಲಿಷ್ ಮುಂತಾದ ಹಲವಾರು ಭಾಷೆಗಳಿಗೆ ಅನುವಾದಗೊಂಡಿದೆ. ಎನ್‌ಎಫ್ ಡಿಸಿಯ ನೆರವಿನಿಂದ ತಮಿಳು ಭಾಷೆಯಲ್ಲಿ 'ಜಮಿಲಾ' ಎಂಬ ಚಲನಚಿತ್ರವಾಗಿದ್ದು ಮಹಿಳಾ ಸಮಸ್ಯೆಯ ಉತ್ತಮ ಚಿತ್ರಕತೆ ಎಂಬ ಪ್ರಶಸ್ತಿಯನ್ನೂ ಪಡೆದುಕೊಂಡಿದೆ. 2000ನೇ ಇಸವಿಯಲ್ಲಿ ಎನ್‌ಎಫ್‌ಡಿಸಿ ಈ ಚಿತ್ರಕ್ಕೆ ಅನುದಾನ ನೀಡುವ ಸಂದರ್ಭದಲ್ಲಿ ಮುಂದಿನ ಹದಿನೈದು ವರ್ಷಗಳವರೆಗೆ ನಾನು ಇದನ್ನು ಯಾವ ದೃಶ್ಯ ಮಾಧ್ಯಮದಲ್ಲೂ ಉಪಯೋಗಿಸಲು ಅನುಮತಿ ನೀಡಬಾರದೆಂಬ ಕರಾರಿಗೆ ಸಹಿ ಹಾಕಿದ್ದೇನೆ.



ಈಗ ಮಂಗಳೂರಿನಲ್ಲಿಯೇ ಬ್ಯಾರಿ ಸಮಾಜದವನೊಬ್ಬನು ನನ್ನ ಅನುಮತಿ ಇಲ್ಲದೆ ನನ್ನ ಕಾದಂಬರಿಯನ್ನು ಕದ್ದು ಅದು ತನ್ನದೇ ಕೃತಿ ಎಂದೂ, ನ್ಯಾಯಾಲಯದಲ್ಲಿ ಇರ್ಫಾನ್ ಚೊಕ್ಕಬೆಟ್ಟು ಎಂಬವನು ಬರೆದದ್ದೆಂದೂ ಸಾಧಿಸಲಾರಂಭಿಸಿದನು. ಈ ವಂಚನೆಯ ವಿರುದ್ಧ ನಾನು ನ್ಯಾಯಾಲಯದ ಮೆಟ್ಟಿಲು ಹತ್ತಿದಾಗ ನಾನು ನಂಬಿದ್ದ ಕೆಲವು ನ್ಯಾಯವಾದಿಗಳೂ ಕೂಡಾ ಈ ವಂಚಕನ ಪರವಾಗಿ ನಿಂತು ನನ್ನನ್ನು ವಂಚಿಸಿದರು.

ಮೊಕದ್ದಮೆಯನ್ನು ನ್ಯಾಯಾಲಯದಲ್ಲಿ ಸಲ್ಲಿಸಲು ಬೆಳಗ್ಗೆ ಮಧ್ಯಾಹ್ನ, ಸಂಜೆ ಎನ್ನುತ್ತಾ ಒಂದೆರಡು ವಾರ ದೂಡಿ ಕೊನೆಗೆ ಪ್ರತಿವಾದಿ ನ್ಯಾಯಾಲಯದಲ್ಲಿ ಕ್ಯಾವಿಯೆಟ್ ಸಲ್ಲಿಸಿದ ಬಳಿಕ ಈತನು ನ್ಯಾಯಾಲಯ ಪ್ರವೇಶಿಸಿದನು! ಕೊನೆಗೂ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸಬೇಕಿದ್ದ ಕೇಸನ್ನು ಕೆಳನ್ಯಾಯಾಲಯದಲ್ಲಿ, ದಿನದ ಕೊನೆಯ ನಾಲ್ಕು ಗಂಟೆಗೆ ಸಲ್ಲಿಸಿದನು. ಮರುದಿನದಿಂದ ನ್ಯಾಯಾಲಯಕ್ಕೆ ಒಂದು ತಿಂಗಳು ಬೇಸಿಗೆ ರಜೆ! ರಜೆ ಮುಗಿದ ಬಳಿಕ ಮತ್ತೊಮ್ಮೆ ಇವರ ಬಳಿ ಹೋದಾಗ ಈ ಕೇಸನ್ನು ಮುಂದುವರಿಸಲು ತನ್ನಿಂದ ಸಾಧ್ಯವಿಲ್ಲವೆಂದನು!

ಪ್ರತಿವಾದಿಯ ನ್ಯಾಯವಾದಿಗಳು ಇದು ಇರ್ಫಾನ್ ಚೊಕ್ಕಬೆಟ್ಟು ಎಂಬವನು ಬರೆದ ಕೃತಿ ಎಂದು ವಾದಿಸಿದಾಗ ನ್ಯಾಯಾಧೀಶರು ಆ ಕೃತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ಆಜ್ಞೆ ನೀಡಿದ್ದರು. ರಜೆ ಮುಗಿದ ಬಳಿಕ ಇದನ್ನು ಕೆಳ ನ್ಯಾಯಾಲಯದಿಂದ ಹಿಂದೆ ಪಡೆದು ಮೇಲಿನ ನ್ಯಾಯಾಲಯದಲ್ಲಿ ದಾಖಲಿಸಬೇಕಾಗಿತ್ತು, ನ್ಯಾಯವಾದಿಗಳನ್ನು ಮತ್ತೊಮ್ಮೆ ಬದಲಾಯಿಸಿಯೂ ಇದ್ದೆ. ಆದರೆ ನ್ಯಾಯವಾದಿಗಳ ಮೋಸ ಮತ್ತು ವಂಚನೆಯಿಂದಾಗಿ ಈ ಮೊಕದ್ದಮೆಯನ್ನು ಮುಂದುವರಿಸುವುದು ಸಾಧ್ಯವಿಲ್ಲವೆನ್ನಿಸಿತು.

ನ್ಯಾಯವಾದಿಗಳ ವಾದ ಹೇಗಿರುತ್ತದೆಂಬುದಕ್ಕೆ ಇತ್ತೀ ಲೇಖಕಿ ನಾಗವೇಣಿಗೆ ನ್ಯಾಯವಾದಿಗಳಿಂದ ಬ ನೋಟೀಸ್ ಉದಾಹರಣೆಯಾಗಿದೆ.

ಮಂಗಳೂರಿನಲ್ಲಿ ಈ ಹಿಂದೆ ಹಿರಿಯರಾಗಿದ್ದ ಕೆಲ ನ್ಯಾಯವಾದಿಗಳು ನನ್ನ ಕೆಲವು ಮೊಕದ್ದಮೆಗಳನ್ನು ನ್ಯಾ ಯುತವಾಗಿ, ಸಮರ್ಥವಾಗಿ ವಾದಿಸಿ ಗೆದ್ದು ಕೊಟ್ಟಿದ್ದ ಆದರೆ ಈಗಿನ ನ್ಯಾಯವಾದಿಗಳ ನೈತಿಕತೆ ಇಷ್ಟೊಂ ಕೆಳಮಟ್ಟಕ್ಕಿಳಿದೆಯೆಂಬ ಕಲ್ಪನೆಯೇ ನನಗಿರಲಿಲ್ಲ.

ನನ್ನ ಈ ಕೃತಿ ಸ್ವಾಮ್ಯದ ಹೋರಾಟದಲ್ಲಿ ಚಲನಚ ವಾಣಿಜ್ಯ ಮಂಡಳಿಯಲ್ಲಿ ಅಧ್ಯಕ್ಷರಾಗಿದ್ದ ನಟ ಜಯಮಾ ಮಾತ್ರ ನನಗಾದ ಅನ್ಯಾಯದ ವಿರುದ್ಧ ಹೋರಾಡಿದ

****

ಇದೇ ಸಂದರ್ಭದಲ್ಲಿ ಬ್ಯಾರಿ ಅಕಾಡೆಮಿಯ ಕುರಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಬ್ಯಾರಿಗಳೆಂ ಇಸ್ಲಾಂ ಧರ್ಮಾನುಯಾಯಿಗಳ ಒಂದು ಒಳಪಂಗಡ ಹೊರತು ಧಾರ್ಮಿಕ ನಿಯಮಗಳಲ್ಲಿ ಯಾವುದೇ ವ್ಯತ್ಯಾಸ ಇಲ್ಲ. ತಮಿಳು ಮತ್ತು ಕೊಡಗು ಭಾಷೆ ಮಿಶ್ರಿತವ ಒಂದು ಭಾಷೆಯನ್ನಾಡುವ ಇವರು ಇತ್ತೀಚಿನ ವರ್ಷಗ ತಮ್ಮ ಈ ಭಾಷೆಗೆ 'ಬ್ಯಾರಿ ಭಾಷೆ' ಎಂದು ನಾಮಕ ಮಾಡಿದ್ದಾರೆ. ತುಳು, ಕೊಂಕಣಿ, ಕೊಡಗು ಅಕಾಡೆಮಿಗ ತಮ್ಮ ಭಾಷೆಗೂ ಅಕಾಡೆಮಿ ಬೇಕೆಂಬ ಬೇಡಿಕೆಯ ಸರ್ಕಾರದ ಮುಂದಿಟ್ಟು ಬ್ಯಾರಿ ಅಕಾಡೆಮಿಯನ ಪಡೆದುಕೊಂಡರು. ಬ್ಯಾರಿ ಭಾಷೆಯಲ್ಲಿ, ಕನ್ನಡ ಲಿಪಿಯ ಬರಹವೂ ಪ್ರಾರಂಭವಾಯಿತು.

ಈ ಬರಹಗಳನ್ನು ಬ್ಯಾರಿ ಸಮುದಾಯದವರೋವ ಅಕ್ಷರ ಜೋಡಣೆ (ಟೈಪ್ ಸೆಟ್ಟಿಂಗ್) ಮಾಡಿ ಪ್ರಕಟಣೆಯ ಮಾಡಿ ಕೊಡುತ್ತಿದ್ದರು. ಆದರೆ ಯಾವಾಗ ಬ್ಯಾರಿ ಅಕಾಡೆ ಸರ್ಕಾರದಿಂದ ಲಕ್ಷಗಟ್ಟಲೆ ಅನುದಾನ ಬರತೊಡಗಿತ ಆಗ ಈ ಕೆಲಸ ಬ್ಯಾರಿಯೇತರನೊಬ್ಬನ ಪಾಲಾಗತೊಡಗಿ ಕಮಿಷನ್ ನುಂಗಲು ಇಲ್ಲಿಯೂ ಅವಕಾಶವಿರಬಹುದೇ ಈ ಜನರ ನಡುವೆ ನಾನು ಕಳೆದ 57 ವರ್ಷಗಳಿಂದ ಬದುಕುತ್ತಿದ್ದು ಇವರ ಎಲ್ಲ ರೀತಿಯ ದ್ವಂದ್ವ, ದ್ವಿಮು ನೀತಿಗಳನ್ನು ನೋಡುತ್ತಾ ಬಂದಿದ್ದೇನೆ. ನಾನು ಕಾದಂಬರಿ, ಲೇಖನಗಳನ್ನು ಬರೆಯುತ್ತಿರುವುದಕ್ಕಾಗಿ ಮೇಲೆ ಆಕ್ರಮಣ ಮಾಡಿದ್ದು ಎಲ್ಲರಿಗೂ ತಿಳಿದ ವಿಷಯ ಆಗಿದೆ. ಇಂದು ಅದೇ ಕಾದಂಬರಿಯನ್ನು ಮೂರ ದರ್ಜೆಯ ಗೂಂಡಾ ಒಬ್ಬನು, ಅದು ತನ್ನ ಸ್ವ ಕಾದಂಬರಿಯೆಂದು ನ್ಯಾಯಾಲಯದಲ್ಲಿ ಸಾಧಿಸಹೊರಟ ಆತನಿಗೆ ಸರ್ಕಾರ ನೀಡಲು ತುದಿಗಾಲಲ್ಲಿ ನಿಂತರು!

ನಾನು ಈ ಕಾದಂಬರಿ ಬರೆದ ಸಂದರ್ಭದಲ್ಲಿ ಮು ಮಹಿಳೆಯರು ಸಿನಿಮಾಕ್ಕೆ ಹೋದ ಕಾರಣಕ್ಕಾಗಿ ಅವರನ್ನು ಶಿಕ್ಷಿಸಲಾಗುತ್ತಿತ್ತು. ಬಿಜಾಪುರದ ನಾಜಿ ಭಾಂಗಿಯವರು 1982 ರಲ್ಲಿ ಸಿನಿಮಾ ಥಿಯೇಟ ಹೋದ ಕಾರಣಕ್ಕಾಗಿಯೇ ಅವರ ಮೇಲೆ ಆಕ್ರಮಣವ ಇಂದಿಗೂ ಆಕೆ ಮಾನಸಿಕ ಅಸ್ವಸ್ಥತೆಯಿಂದ ಬಳ ತ್ತಿದ್ದಾರೆಂಬುದನ್ನು ನಾನು ಈ ಹಿಂದೆಯೇ ಬರೆದಿ ಇಂದು ಬ್ಯಾರಿ ಭಾಷೆಯಲ್ಲಿ ಚಲನಚಿತ್ರ ನಿರ್ಮಾ ವಾಗಿದೆಯೆಂದು ಬ್ಯಾರಿಗಳು ಸಂತೋಷದಿಂದ ಪ ಹೇಳಿಕೆ ನೀಡುತ್ತಿದ್ದಾರೆ!

ಮಾರ್ಚ್ ಬಂದರೆ ಲಂಕೇಶ್ ಹಬ್ಬ

ಇವತ್ತು, ಮಾರ್ಚ್ 8, ಅಪ್ಪನ 77ನೇ ಹುಟ್ಟುಹಬ್ಬ. ...ಗೊಂದು ಮಿಯಾಂವ್ ಹೇಳುವ ಮೂಲಕ ಈ ...ವನ್ನು ಪ್ರಾರಂಭಿಸಿದ ನಾನು ಈ ವಿಶೇಷ ಸಂಚಿಕೆಯನ್ನು ...ಷ್ಟು ಬೇಗ ಮುಗಿಸಿ, ಇದೇ ರಾತ್ರಿ ಮಂಗಳೂರಿನ ... ಹತ್ತುವ ಒತ್ತಡದಲ್ಲಿದ್ದೇನೆ. ನಿಮಗೆಲ್ಲ ಗೊತ್ತಿರುವಂತೆ ...ಬಾರಿ ಪಿ.ಲಂಕೇಶರ ಹುಟ್ಟುಹಬ್ಬವನ್ನು ಮಂಗಳೂರಿನಲ್ಲಿ ...ರಿಸುತ್ತಿದ್ದೇವೆ.

...ನನಗಿನ್ನೂ ಚೆನ್ನಾಗಿ ನನೆಪಿದೆ. ಸರಿಯಾಗಿ ಏಳು ...ಗಳ ಹಿಂದೆ ಮಾರ್ಚ್ 8ರಂದೇ ಶಿವರಾತ್ರಿ ಹಬ್ಬವೂ ...ತ್ತು. ಅವತ್ತಿನ ಮಟಮಟ ಮಧ್ಯಾಹ್ನ ನಿಮ್ಮ ಈ ...ಕೆಯ ಉದ್ಘಾಟನಾ ಸಮಾರಂಭವನ್ನು ಬೆಂಗಳೂರಿನ ...ಎ ರಂಗಮಂದಿರದಲ್ಲಿ ಏರ್ಪಡಿಸಿದ್ದೆವು. ಹಬ್ಬ, ಸರ್ಕಾರಿ ... ಮಧ್ಯಾಹ್ನದ ಸೆಖೆ, ಹೊಟ್ಟೆತುಂಬಾ ಊಟ ಮಾಡಿ ...ಸು ಸಣ್ಣ ನಿದ್ರೆಗೆ ಜಾರುವ ಹೊತ್ತು... ಇಂತಹ ...ಯದಲ್ಲಿ ನಮ್ಮ ಕಾರ್ಯಕ್ರಮಕ್ಕೆ ಜನ ಬರುತ್ತಾರೋ ...ನೋ ಎಂಬ ಆತಂಕ ನನ್ನನ್ನು ಕಾಡುತ್ತಿತ್ತು.

ಆದರೆ ಅವತ್ತು ಎಡಿಎ ರಂಗಮಂದಿರ ಜನರಿಂದ ...ತುಳುಕುತ್ತಿತ್ತು. ಈ ಪತ್ರಿಕೆ ಉದಯವಾಗುವ ವಿಷಯ ...ಗೊಂಡು ಒಂದು ವಾರವೂ ಆಗಿರಲಿಲ್ಲ, ಆದರೂ ...ಂದು ಜನ ಬಂದು ನಮಗೆ ತಮ್ಮ ಬೆಂಬಲವನ್ನು ...ಸಿದ್ದರು. ಅವತ್ತಿನಿಂದ ಅವರೆಲ್ಲ ಈ ಪತ್ರಿಕೆಯ ...ಡಿದು ಮುನ್ನಡೆಸಿದ್ದಾರೆ...

ಅಂದಿನಿಂದ ಪಿ.ಲಂಕೇಶರ ಮತ್ತು ನಿಮ್ಮ ಈ ಪತ್ರಿಕೆಯ ...ಟ್ಟುಹಬ್ಬವನ್ನು ಬೆಂಗಳೂರಿನಲ್ಲೇ ಪ್ರತೀವರ್ಷ ಆಚರಿಸುತ್ತಾ ...ದ್ದೇವೆ. ಅದು ಜನರಿಗೂ ರೂಢಿಯಾಗಿ ಅವರು ... ಬಂದು ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ...ಯೇ ನಮ್ಮ ಪ್ರಕಾಶನದ ಪುಸ್ತಕಗಳ ಬಿಡುಗಡೆ, ...ಮು ಸೌಹಾರ್ದ ವೇದಿಕೆಯ ಚರ್ಚೆ ಇತ್ಯಾದಿಗಳಲ್ಲೂ ...ಶ್ ತಂಡ ಮತ್ತು ಓದುಗರು ಸಕ್ರಿಯವಾಗಿ ಭಾಗ ...ಸುತ್ತಿದ್ದಾರೆ. ಹೀಗಿದ್ದಾಗ ಅದ್ಯಾಕೋ ಒಮ್ಮೆ ಇನ್ನು ...ದೆ ನಮ್ಮ ಸಂಸ್ಥೆಯು ಕೆಲವು ಕಾರ್ಯಕ್ರಮಗಳನ್ನಾದರೂ ... ನಗರಗಳಲ್ಲಿ ಮಾಡಿದರೆ ಚೆನ್ನ ಅನ್ನಿಸಿತು. ಅದಕ್ಕೆ ...ಎ ಮುಖ್ಯ ಕಾರಣ ನಾವಿದ್ದಲ್ಲಿಗೆ ಜನ ಬರುವಂತೆಯೇ ... ಕೂಡ ಜನರು ಇರುವಲ್ಲಿಗೆ ಹೋದರೆ ಚೆನ್ನ ... ಆಶೆ.


...ಸಿಟ್ಟಿನಲ್ಲಿ ಕಳೆದ ವರ್ಷ ಲಂಕೇಶ್ ಮತ್ತು ರೈತ ...ಕ ಪ್ರೊ. ಎಂ.ಡಿ.ನಂಜುಂಡಸ್ವಾಮಿಯವರ ನೆನಪಿನಲ್ಲಿ ... ಕಾರ್ಯಕ್ರಮವನ್ನೇಕೆ ಶಿವಮೊಗ್ಗೆಯಲ್ಲಿ ಮಾಡಬಾರದು ...ಎ ಚಿಂತಿಸಿದೆವು. ಆದರೆ ಅದ್ಯಾಕೋ ಅದು ಕಾರ್ಯ...ಕ್ಕೆ ಬರಲೇ ಇಲ್ಲ. ಅದಾದನಂತರ ನಮ್ಮ ಪ್ರಕಾಶನದ ಒಂದೆರಡು ಪುಸ್ತಕಗಳನ್ನು ಬೇರೆ ಊರುಗಳಲ್ಲಿ ಬಿಡುಗಡೆ ಮಾಡೋಣ ಎಂದು ಅನ್ನಿಸಿದರೂ ಅದೂ ಕೂಡ ಸಾಧ್ಯವಾಗಲಿಲ್ಲ.



...ಪಿ.ಲಂಕೇಶರ 77ನೇ ಹುಟ್ಟುಹಬ್ಬದ ಅಂಗವಾಗಿ ಶಿವಮೊಗ್ಗೆಯಲ್ಲಿ ನಡೆದ 'ಲಂಕೇಶ್ ನಾಟಕೋತ್ಸವ'ದಲ್ಲಿ 'ಗುಣಮುಖ' ನಾಟಕವನ್ನಾಡಿದ ಶಿವಮೊಗ್ಗೆಯ 'ನಂ ಟೀಮ್' ...ತಂಡದ ಸದಸ್ಯರ ಜೊತೆ ಬಿ.ಚಂದ್ರೇಗೌಡ, ಚಂದ್ರಶೇಖರ ಪಾಟೀಲ, ಶಿವಮೊಗ್ಗ ರಂಗಾಯಣದ ನಿರ್ದೇಶಕ ಹೊ.ನ. ಸತ್ಯ ಮತ್ತು ಗೌರಿ ಲಂಕೇಶ್.

ಆಗ ನಮಗೆ ಎದುರಾಗಿದ್ದೇ ಲಂಕೇಶರ 77ನೇ ಹುಟ್ಟುಹಬ್ಬ ಮತ್ತು ನಮ್ಮ ಪತ್ರಿಕೆಯ 7ನೇ ವಾರ್ಷಿಕೋತ್ಸವ. ಆಗ ನಮ್ಮ ಸಂಸ್ಥೆಯ ಈ ಪ್ರಮುಖ ಕಾರ್ಯಕ್ರಮವನ್ನೇ ಏಕೆ ಬೇರೆ ನಗರದಲ್ಲಿ ಮಾಡಬಾರದು ಎಂದು ಯೋಚಿಸಿದೆವು. ನಮ್ಮ ಮೊದಲನೆ ಆಯ್ಕೆ ಲಂಕೇಶರ ಊರಾದ ಶಿವಮೊಗ್ಗೆಯಾಗಿತ್ತು. ಆದರೆ ಅಷ್ಟು ಹೊತ್ತಿಗೆ ನಮ್ಮ ಬಿ.ಚಂದ್ರೇಗೌಡರು ಮತ್ತು ಶಿವಮೊಗ್ಗೆಯ ರಂಗಾಯಣದ ನಿರ್ದೇಶಕ ಹೊ.ನ. ಸತ್ಯ ಅವರು ಶಿವಮೊಗ್ಗೆಯಲ್ಲಿ 'ಲಂಕೇಶ್ ನಾಟಕೋತ್ಸವ'ವನ್ನು ಆಚರಿಸಲು ಮುಂದಾಗಿದ್ದರು. ನಮ್ಮ ಮತ್ತು ಅವರ ಕಾರ್ಯಕ್ರಮ ಪರಸ್ಪರ ಡಿಕ್ಕಿ ಹೊಡೆದುಕೊಳ್ಳುವುದು ಬೇಡವೆಂದು ನಾವು ಮಂಗಳೂರನ್ನು ಆಯ್ಕೆ ಮಾಡಿಕೊಂಡೆವು. ನಮ್ಮ ತಂಡದ ಈ ನಿರ್ಧಾರ ಪ್ರಕಟ ಮಾಡುತ್ತಿದ್ದಂತೆ ಕಡಲ ತೀರದಲ್ಲಿರುವ ಲಂಕೇಶರ ಅಭಿಮಾನಿಗಳು ಮತ್ತು ಪತ್ರಿಕೆಯ ಓದುಗರಿಂದ ಉತ್ಸಾಹದ ಪ್ರತಿಕ್ರಿಯೆ ವ್ಯಕ್ತವಾಯಿತು. ಆದರೆ ಪ್ರತಿ ಮಾರ್ಚ್ ಬೆಂಗಳೂರಿಗೆ ಬಂದು ನಮ್ಮ ವಾರ್ಷಿಕ ಸಮಾರಂಭದಲ್ಲಿ ಭಾಗವಹಿಸುವುದನ್ನು ರೂಢಿ ಮಾಡಿಕೊಂಡಿರುವ ಕೆಲವರು ಕೊಂಚ ಬೇಸರ ಮಾಡಿಕೊಂಡರು. ಅವರೆಲ್ಲರಿಗೂ 'ಸಾರಿ. ಮುಂದಿನ ಬಾರಿ ನಿಮ್ಮೂರಿಗೆ ಅಥವಾ ನಿಮ್ಮ ಹತ್ತಿರದ ಊರಿನ ನಮ್ಮ ತಂಡ ಬರಬಹುದು!' ಎಂದು ಹೇಳಲು ಇಚ್ಛಿಸುತ್ತೇನೆ.

'ಲಂಕೇಶ್ 77' ಕಾರ್ಯಕ್ರಮಕ್ಕೆ ಇನ್ನು ಮೂರು ದಿನಗಳು ಮಾತ್ರ ಇವೆ. ನಮ್ಮ ಲಂಕೇಶ್ ತಂಡ ನಾಳೆ



'ಗುಣಮುಖ' ನಾಟಕದಲ್ಲಿ ಸಾಸ್ವೇಹಳ್ಳಿ ಸತೀಶ್ ಮತ್ತು ಇತರೆ ನಟರು.

ಮಂಗಳೂರನ್ನು ತಲುಪುತ್ತಿದೆ. ಆದರೆ ನಾವು ಅಲ್ಲಿಗೆ ಹೋಗುವ ಮುನ್ನವೇ ಮಂಗಳೂರಿನಲ್ಲಿರುವ ಹಲವಾರು ಮಿತ್ರರು ಇದು ತಮ್ಮದೇ ಕಾರ್ಯಕ್ರಮ ಎಂದು ಭಾವಿಸಿ ಸಕ್ರಿಯರಾಗಿದ್ದಾರೆ. ಸಂತ ಅಲೋಶಿಯಸ್ ಪದವಿ ಕಾಲೇಜಿನ ಸಭಾಂಗಣವನ್ನು ಮಿತ್ರ ಭೂಮಿಗೌಡ ಬುಕ್ ಮಾಡಿದ್ದಾರೆ. ಕೆ.ವಿ. ಅಶೋಕ್, ರೋನಾಲ್ಡ್ ಕೊಲಾಸೋ, ಯು.ಟಿ. ಖಾದರ್, ಸುರೇಶ್ ಭಟ್ ಬಾಕ್ರಬೈಲು, ಸಬಿಹಾ, ಪಿ.ವಿ. ಮೋಹನ್, ಮೊಹಮ್ಮದ್ ಕಕ್ಕಿಂಜೆ, ಮೊಯಿನುದ್ದೀನ್ ಬಾವಾ, ದಿನಕರ್ ಎಸ್.ಬೇಂಗ್ರೆ ತರಹದ ಸ್ನೇಹಿತರು ವಿವಿಧ ರೀತಿಯಲ್ಲಿ ನೆರವು ನೀಡುತ್ತಿದ್ದಾರೆ. ಹಾಗೆಯೇ ಇಸ್ಮತ್ ಫಜೀರ್, ಕಬೀರ್, ಇಸ್ಮಾಯಿಲ್ ಮತ್ತು ಆಸಫ್ ತರಹದ ತರುಣರು ಪಾದರಸದಂತೆ ಓಡಾಡುತ್ತಾ ಕಾರ್ಯಕ್ರಮದ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ.

ನಾವೆಲ್ಲ ಅಲ್ಲಿಗೆ ಹೋದ ನಂತರ ಇನ್ನೂ ಹೆಚ್ಚು ಮಿತ್ರರು ಬೇರೆಬೇರೆ ಕಡೆಯಿಂದ ಬಂದು ನಮ್ಮನ್ನು ಸೇರುತ್ತಿದ್ದಾರೆ. ಮಾರ್ಚ್ 11ರಂದು ನೂರಾರು ಓದುಗರು, ಸ್ನೇಹಿತರು ಹತ್ತಿರದ ಮತ್ತು ದೂರದ ಊರುಗಳಿಂದಲೂ ಬರುತ್ತಿದ್ದಾರೆ. ಅವರೆಲ್ಲರೊಂದಿಗೆ ಒಂದು ಇಡೀ ದಿನವನ್ನು ಕಳೆಯಲಿದ್ದೇವೆ.

ಮಂಗಳೂರಿನಲ್ಲಿ ಈಗ ವಿಪರೀತ ಸೆಖೆ. ಆದರೆ ಅಲ್ಲಿನ ಜನ ತೋರುತ್ತಿರುವ ಆಪ್ತತೆ ಆ ಸೆಖೆಯನ್ನು ಮರೆಸಿ ಮನಸ್ಸಿಗೆ ಮುದ ನೀಡುವಂತಹ ಬೆಚ್ಚಗಿನದ್ದು... ಅವರಿಗೆ ನಮ್ಮ ತಂಡದ ಕೃತಜ್ಞತೆಗಳು.

****

ಲಂಕೇಶರ 77 ನೇ ಹುಟ್ಟುಹಬ್ಬದ ಭಾಗವಾಗಿ ಮೊನ್ನೆ ಮಾರ್ಚ್ 6ರಂದು ಶಿವಮೊಗ್ಗೆಯಲ್ಲಿ ಮೂರು ದಿನಗಳ 'ಲಂಕೇಶ್ ನಾಟಕೋತ್ಸವ' ಪ್ರಾರಂಭವಾಯಿತು. ಅದರ ಉದ್ಘಾಟನೆಗೆ ಚಂದ್ರಶೇಖರ ಪಾಟೀಲ ಮತ್ತು ನಾನು ಹೋಗಿದ್ದೆವು. ಮೊದಲನೆ ದಿನದ ನಾಟಕ 'ಗುಣಮುಖ'. ಆನಂತರದ ಎರಡು ದಿನಗಳಿಗೆ 'ಸಂಕ್ರಾಂತಿ' ಮತ್ತು ಬಿ.ಚಂದ್ರೇಗೌಡರು ನಾಟಕವಾಗಿ ರೂಪಾಂತರಿಸಿರುವ ಲಂಕೇಶರ ಕತೆ 'ಕಲ್ಲು ಕರಗುವ ಸಮಯ'ವನ್ನು ಆಯ್ಕೆ ಮಾಡಿಕೊಂಡಿದ್ದರು.

'ಗುಣಮುಖ' ನಾಟಕವನ್ನು ಓದಿರುವವರಿಗೆ ಗೊತ್ತು: ಆ ನಾಟಕದಲ್ಲಿ ನಾದಿರ್ ಶಾ ದೈಹಿಕವಾಗಿಯೂ, ಮಾನಸಿಕವಾಗಿಯೂ ಅಸ್ವಸ್ಥಗೊಂಡಿರುತ್ತಾನೆ. ಆತನನ್ನು ಅಲಾದಿ ಖಾನ್ ಎಂಬ ಹಕೀಮ ಗುಣಮುಖನನ್ನಾಗಿಸುತ್ತಾನೆ.

ನಾಟಕದ ಈ ಒಂದು ಎಳೆಯನ್ನು ಹಿಡಿದುಕೊಂಡು ನಾನು ನನ್ನ ಭಾಷಣದಲ್ಲಿ "ಇವತ್ತು ಬಿಜೆಪಿ ಪಕ್ಷದ ದುರಾಡಳಿತದಿಂದಾಗಿ ಕರ್ನಾಟಕ ರಾಜ್ಯವು ನಾದಿರ್ ಶಾನಂತೆ ರೋಗಗ್ರಸ್ತವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದಲ್ಲಿ ಸುದ್ದಿ ಮಾಡಿರುವುದು ಯಾವ ಸಾಧನೆಗೂ ಅಲ್ಲ, ಬದಲಾಗಿ ಇಲ್ಲಿ ಆಗುತ್ತಿರುವ ಅನಿಷ್ಟ ಬೆಳವಣಿಗೆಗಳಿಂದಾಗಿ. ಭ್ರಷ್ಟಾಚಾರ, ಲೂಟಿ, ಆಪರೇಷನ್ ಕಮಲ, ಪಬ್‌ಗಳಲ್ಲಿ ಮಹಿಳೆಯರ ಮೇಲೆ ದಾಳಿ, ಶಾಸಕ ರಘುಪತಿ ಭಟ್ಟನ ಹೆಂಡತಿಯ ಸಂಶಯಾಸ್ಪದ ಸಾವು, ಅಲ್ಪಸಂಖ್ಯಾತರ ಮೇಲೆ ದಾಳಿ, ಚರ್ಚ್‌ಗಳ ಧ್ವಂಸ, ವಿಧಾನಸಭೆಯಲ್ಲಿ ಬ್ಲೂಫಿಲಂ ವೀಕ್ಷಣೆ... ಇಂತಹ ಸುದ್ದಿಗಳಿಂದ ಕರ್ನಾಟಕ ಎಲ್ಲರ ಗಮನ ಸೆಳೆದು ಕನ್ನಡಿಗರು ತಲೆತಗ್ಗಿಸಿ ನಿಲ್ಲುವಂತಾಗಿದೆ. ಕರ್ನಾಟಕವನ್ನು ಗುಣಮುಖ ಮಾಡುವ ಅವಶ್ಯಕತೆ ಇದೆ. ಅದಕ್ಕೆ 'ಗುಣಮುಖ' ನಾಟಕದಲ್ಲಿ ಬರುವ ಅಲಾವಿ ಖಾನ್ ತರಹದ ಹಕೀಮ ಬೇಕಾಗಿದ್ದಾನೆ. ಆದರೆ ಅಂತಹ ಹಕೀಮ ವಿರೋಧ ಪಕ್ಷಗಳಾದ ಕಾಂಗ್ರೆಸ್‌ನಲ್ಲಾಗಲಿ, ಜಾತ್ಯತೀತ ಜನತಾದಳದಲ್ಲಾಗಲಿ ಇಲ್ಲ. ಆದ್ದರಿಂದ ಕರ್ನಾಟಕದ ಪ್ರತಿಯೊಬ್ಬ ಪ್ರಜೆಯೂ ಅಲಾವಿ ಖಾನ್ ಆಗಿ ಈ ಬಿಜೆಪಿಗಳನ್ನು ಅಧಿಕಾರದಿಂದ ಒದ್ದೋಡಿಸಿ ಕರ್ನಾಟಕವನ್ನು ಗುಣಮುಖವಾಗಿಸಬೇಕಿದೆ" ಎಂದೆ.

ಅವತ್ತು ಮಂಗಳವಾರ. ಶಿವಮೊಗ್ಗೆಯ ಜನ ನಾಟಕ ನೋಡಲು ಸಾಕಷ್ಟು ಸಂಖ್ಯೆಯಲ್ಲಿ ಬರುತ್ತಾರೋ ಇಲ್ಲವೋ ಎಂಬ ಅಂಜಿಕೆ ನನ್ನದು. ಆದರೆ ಸಂಜೆ ಏಳು ಗಂಟೆ ಹತ್ತಿರವಾಗುತ್ತಿದ್ದಂತೆ ಜನರು ಕುವೆಂಪು ರಂಗಮಂದಿರವನ್ನು ತುಂಬಲಾರಂಭಿಸಿದರು. ನಾಟಕ ಪ್ರಾರಂಭವಾಗುವ ಹೊತ್ತಿಗೆ ರಂಗಮಂದಿರದಲ್ಲಿ ಕೆಲವೇ ಕೆಲವು ಸೀಟುಗಳು ಮಾತ್ರ ಖಾಲಿ ಉಳಿದಿದ್ದವು.

ಮಿತ್ರ ನಟರಾಜ್ ಹೊನ್ನವಳ್ಳಿ ನಿರ್ದೇಶನದಲ್ಲಿ 'ಗುಣಮುಖ' ಅದ್ಭುತವಾಗಿ ಮೂಡಿಬಂದಿತು. ನಾಟಕ ಮುಗಿಯುವವರೆಗೂ ಸಭಾಂಗಣದಲ್ಲಿದ್ದ ಯಾರೂ ಅಲ್ಲಾಡಲಿಲ್ಲ. ನಾನು ಆ ನಾಟಕವನ್ನು ಈಗಾಗಲೇ ಹಲವಾರು ಬಾರಿ ನೋಡಿದ್ದರೂ ಅವತ್ತು ಅದನ್ನು ಮತ್ತೆ ಸಂಪೂರ್ಣವಾಗಿ ನೋಡಿದೆ. ನಾಟಕ ಮುಗಿದಾಗ ರಾತ್ರಿ 9.30. ಇನ್ನು ಅರ್ಧ ಗಂಟೆಯಲ್ಲಿ ಚಂಪಾ ಮತ್ತು ನಾನು ಟ್ರೈನ್ ಹತ್ತಬೇಕಿತ್ತು. ರಂಗಮಂದಿರದಿಂದ ಓಡಿಹೋಗಿ, ಹೊಟ್ಟೆಗೆ ಒಂದಷ್ಟು ಊಟ ಹಾಕಿಕೊಂಡು, ಗಡಿಬಿಡಿಯಲ್ಲಿ ಟ್ರೈನ್ ಹತ್ತಿದೆವು...

ಅಂದಹಾಗೆ, ಕಳೆದ ಭಾನುವಾರ ಚೌಡಪ್ಪ ಎಂಬುವವರೂ ಬೆಂಗಳೂರಿನಲ್ಲಿ ಇದೇ 'ಗುಣಮುಖ' ನಾಟಕವನ್ನು ತಮ್ಮ ತಂಡದ ವತಿಯಿಂದ ಆಡಿಸಿದರು. ದುರದೃಷ್ಟವಶಾತ್ ಅವತ್ತು ನಾನು 'ಪಾಂಚಾಲಿ'ಯನ್ನು ಮುದ್ರಣಕ್ಕೆ ಸಿದ್ಧಗೊಳಿಸುವುದರಲ್ಲಿ ತಲ್ಲೀನಳಾಗಿದ್ದರಿಂದ ಚೌಡಪ್ಪನವರ ನಾಟಕವನ್ನು ನೋಡಲಾಗಲಿಲ್ಲ.

ಅದೆಲ್ಲ ಇರಲಿ, ಇನ್ನು ಕೆಲವೇ ತಾಸುಗಳಲ್ಲಿ ಮಂಗಳೂರಿನ ಟ್ರೈನ್ ಹತ್ತಬೇಕು..

ಈ ಸಂಚಿಕೆಯನ್ನು ರೂಪಿಸುತ್ತಿರುವಾಗಲೇ ಮಧ್ಯಾಹ್ನ ಜನಶ್ರೀ ಟಿವಿಯಲ್ಲಿ 'ರಾವಣ ಪ್ರತಿಭೆ' ಎಂಬ ಲಂಕೇಶರನ್ನು ಕುರಿತ ಕಾರ್ಯಕ್ರಮ ವೀಕ್ಷಿಸಿದೆ. ಇದೇ ಸಂಜೆ ಆರು ಗಂಟೆಗೆ ಲಂಕೇಶರನ್ನು ಕುರಿತು ಒಂದು ಚರ್ಚೆಯನ್ನೂ ಜನಶ್ರೀ ಪ್ರಸಾರ ಮಾಡಲಿದೆ...

ಪ್ರತಿ ವರ್ಷ ಮಾರ್ಚ್ ಬಂತೆಂದರೆ ಮುಗಿಯಿತು... ಎಲ್ಲೆಲ್ಲೂ 'ಲಂಕೇಶ್ ಹಬ್ಬ'!!! ಸಖತ್ 'ಮಿಯಾಂವ್' ಆಗಿದೆಯಲ್ಲ?!

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ನಮ್ಮ ತಂಡದಲ್ಲಿ ಒಂದು ಬದಲಾವಣೆ...

...ಮಿತ್ರ ರವಿಕುಮಾರ್ ಅವರು ಮೊನ್ನೆ ಒಂದು ಎಸ್‌ಎಂಎಸ್ ಅನ್ನು ...ಕಳುಹಿಸಿದ್ದಾರೆ. ಅದರಲ್ಲಿ "ಗೌರಿ, ನಿಮಗೆ ಯಾವಾಗ ಇದೆಲ್ಲದಕ್ಕೆ ಸಮಯ ...ಸಿಕ್ಕುತ್ತೆ? ಒಂದು ದಿನ ಶಿವಮೊಗ್ಗ, ಎರಡು ದಿನ ಬೆಂಗಳೂರಿನಲ್ಲಿ ಪತ್ರಿಕೆಯ ...ಸ, ಅದಾದ ಮರುದಿನ ಮಂಗಳೂರು... oooh! ನಿಮಗೆ ಜೆಟ್ ವಿಮಾನವೇ ...ಬೇಕು" ಎಂದು ಕೇಳಿದ್ದಾರೆ!!

ನನಗೆ ಈಗ ಜೆಟ್ ವಿಮಾನಕ್ಕಿಂತಲೂ ಅತ್ಯಗತ್ಯವಾಗಿ ಬೇಕಾಗಿರುವುದು ...ವಲ ಐವರು 'ಗೌರಿ'ಗಳು. ಯಾಕೆಂದರೆ ಒಬ್ಬಳು ಗೌರಿ ಪತ್ರಿಕೆಯನ್ನು ...ನೋಡಿಕೊಂಡರೆ, ಎರಡನೆ ಗೌರಿ ನಮ್ಮ ಲಂಕೇಶ್ ಪ್ರಕಾಶನವನ್ನು ...ನೋಡಿಕೊಳ್ಳುತ್ತಾಳೆ, ಮೂರನೆಯವಳು ಅಮ್ಮನ ತೋಟವನ್ನು ನೋಡಿಕೊಳ್ಳುವ ...ಜವಾಬ್ದಾರಿಯನ್ನು ಹೊರುತ್ತಾಳೆ. ನಾಲ್ಕನೆಯವಳು ಕರ್ನಾಟಕ ಕೋಮು ...ಸೌಹಾರ್ದ ವೇದಿಕೆ ಮತ್ತು ಇತರೆ ಜನಪರ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ...ಷ್ಟು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಬೇಕಾಗಿದ್ದಾಳೆ. ಐದನೆ ಗೌರಿ ...ಮ್ಮ, ತಂಗಿ, ಪುಟಾಣಿಗಳಾದ ಇಶಾ, ಸಮರ್ ಮತ್ತು ಸಮಯ್ ಜೊತೆ ...ಕಳೆಯಬೇಕಾಗಿದೆ...

ಹೀಗೆ ನನಗೆ ಹೆಚ್ಚುವರಿಯಾಗಿ ಐವರು 'ಗೌರಿ'ಯರು ಸಿಕ್ಕರೆ ನಾನು ಈಗ ಏಕಾಂಗಿಯಾಗಿ ಮಾಡುತ್ತಿರುವ ಇವರೆಲ್ಲರ ಕೆಲಸಗಳಿಂದ ಸ್ವಲ್ಪ ಬಿಡುವು ಪಡೆಯಬಹುದು. ಹಾಗೆ ಪಡೆದ ಬಿಡುವನ್ನು ಇನ್ನೂ ಹೆಚ್ಚು ಓದು, ಬರಹ, ಇತ್ಯಾದಿ ಕ್ರಿಯಾತ್ಮಕ ಕ್ರಿಯೆಗಳಿಗೆ ನಾನು ಉಪಯೋಗಿಸಿಕೊಳ್ಳಬಹುದು....

ಇಂತಹ ಒಂದು ಕನಸನ್ನು ನಾನು ಕಳೆದ ಕೆಲ ವರ್ಷಗಳಿಂದ ಕಾಣುತ್ತಿದ್ದೇನೆ. ಅದರಲ್ಲೂ ನಮ್ಮ ಈ ಸಂಸ್ಥೆ ಒಂದೊಂದೇ ಹೆಜ್ಜೆಯನ್ನು ಮುಂದಿಡುತ್ತಾ, ಬೆಳೆಯುತ್ತಾ ಹೋಗುತ್ತಿದ್ದಂತೆ ನಮ್ಮೆಲ್ಲರ ಮೇಲೆ, ಅದರಲ್ಲೂ ನನ್ನ ಮೇಲೆ, ಸಮಯದ ಒತ್ತಡ ತುಂಬಾ ಹೆಚ್ಚಾಗುತ್ತಿದೆ.

ಪ್ರತಿ ವಾರ ಪತ್ರಿಕೆ ಕೆಲಸ ಮುಗಿಯುತ್ತಿದ್ದಂತೆ ಗ್ರೈಡ್ ಕೆಲಸ. ಅದನ್ನು ಮುಗಿಸಿ ಮನೆಗೆ ಹೋದರೆ ಡೈನಿಂಗ್ ಟೇಬಲ್ ಮೇಲೆ ನನಗಾಗಿ ಕಾದಿರುವ ಪ್ರಕಾಶನದ ಕೆಲಸ. ಇದೆಲ್ಲದರ ಮಧ್ಯೆ ತೋಟ, ಇಶಾ, ವೇದಿಕೆ, ಬೇರೆ ಊರುಗಳಿಗೆ ಪ್ರಯಾಣ, ಮೀಟಿಂಗು, ಚರ್ಚೆ, ನನ್ನನ್ನು ಭೇಟಿ ಆಗಲು ನಮ್ಮ ಆಫೀಸಿಗೆ ಬರುವವರೊಂದಿಗೆ ಮಾತುಕತೆ....

ಇದೆಲ್ಲದರಿಂದಾಗಿ ಒಮ್ಮೊಮ್ಮೆ ನನಗೆ ಒಂದು ನೆಮ್ಮದಿಯ ಕ್ಷಣವೂ ಸಿಗದೆ ಪರದಾಡಿದ್ದೇನೆ... ಅದೆಷ್ಟೋ ಬಾರಿ ಆಯಾಸವನ್ನು ಸಹಿಸಲಾರದೆ ಕಣ್ಣೀರಿಟ್ಟಿದ್ದೇನೆ....

ನನಗೆ ಗೊತ್ತು, ನನ್ನ ಕನಸಿನ 'ಗೌರಿ'ಗಳು ಸಿಗುವುದು ಅಸಾಧ್ಯ.

ಆದರೆ ನಮ್ಮ ತಂಡದಲ್ಲಿ ನನ್ನಷ್ಟೇ ಪ್ರಾಮಾಣಿಕವಾಗಿ, ಬದ್ಧರಾಗಿ, ಗಡಿಯಾರವನ್ನು ನೋಡದೆ ನನ್ನಂತೆಯೇ ನಿಷ್ಠೆಯಿಂದ ಕೆಲಸ ಮಾಡುವ ಪಾರ್ವತೀಶ ಅವರಿದ್ದಾರೆ. ಅವರು ಪತ್ರಿಕೆ ಪ್ರಾರಂಭವಾದಾಗಿನಿಂದ ನಮ್ಮ ತಂಡದೊಂದಿಗಿದ್ದು ನಮ್ಮ ಸಂಸ್ಥೆಯ ಮುಖ್ಯ ಸ್ತಂಭಗಳಲ್ಲಿ ಒಬ್ಬರಾಗಿದ್ದಾರೆ.

ಈಗ ನಾನು ಪತ್ರಿಕೆಯ ದಿನನಿತ್ಯದ ಕೆಲಸಗಳನ್ನು ಅವರ ಹೆಗಲಿಗೇರಿಸಿ ಮೇಲುಸ್ತುವಾರಿಯನ್ನು ಮಾತ್ರ ನೋಡಿಕೊಳ್ಳಲು ನಿರ್ಧರಿಸಿದ್ದೇನೆ. ಆದ್ದರಿಂದ ಇನ್ನು ಮುಂದೆ ನಾನು ನಿಮ್ಮ ಈ ಪತ್ರಿಕೆಯ 'ಪ್ರಧಾನ ಸಂಪಾದಕಿ'. ಹಾಗೆಯೇ ಮಿತ್ರ ಪಾರ್ವತೀಶ ಅವರು ಈ ಪತ್ರಿಕೆಯ ನೂತನ 'ಸಂಪಾದಕ'. ನನ್ನ 'ಕಂಡಹಾಗೆ' ಅಂಕಣ ಎಂದಿನಂತೆ ಇದೇ ಪುಟದಲ್ಲಿ ಪ್ರಕಟವಾಗುತ್ತದೆ.


ಪತ್ರಿಕೆಯ ಓದುಗರು ಮತ್ತು ಲಂಕೇಶ್ ಬಳಗದ ಮಿತ್ರರು ಈ ಚಿಕ್ಕ ಬದಲಾವಣೆಯನ್ನು ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

• ಗೌರಿ ಲಂಕೇಶ್

ಉಡುಪಿ-ಚಿಕ್ಕಮಗಳೂರು ಬೈ-ಎಲೆಕ್ಷನ್

ಚೆಡ್ಡಿ ಸಂಚು; ಜೆಪಿ ಮಿಂಚು

• ನಹುಷ



ಕರಾವಳಿಯ ಉಡುಪಿ ಮತ್ತು ಘಟ್ಟದ ಮೇಲಿನ ಚಿಕ್ಕಮಗಳೂರು ಎರಡೂ ಜಿಲ್ಲೆಗಳಲ್ಲೀಗ ಬಿರುಬಿಸಿಲು. ಈ ಬೆಂಕಿಯ ಜೊತೆಜೊತೆಗೇ ಬೈ ಎಲೆಕ್ಷನ್ ಕಾವೂ ಧಗಧಗಿಸುತ್ತಿದೆ! ಉಡುಪಿ-ಚಿಕ್ಕಮಗಳೂರು ಉಪಚುನಾವಣೆ ಅಖಾಡದಲ್ಲಿ ಬಿಜೆಪಿಯ ಮತೋನ್ಮತ್ತ ಜಗಳಗಂಟ ಸುನಿಲ್ ಕುಮಾರ್, ಕಾಂಗ್ರೆಸ್‌ನ ಡೈನಮಿಕ್ ಸಜ್ಜನ ಜಯಪ್ರಕಾಶ್ ಹೆಗ್ಡೆ ಮತ್ತು ಜೆಡಿಎಸ್‌ನ ಹರಕೆಕುರಿ ಭೋಜೇಗೌಡ ತೊಡೆತಟ್ಟುತ್ತ ಹೂಂಕರಿಸುತ್ತಿದ್ದಾರೆ. ಮೇಲ್ನೋಟಕ್ಕಿದು ತ್ರಿಕೋನ ಕಾಳಗದಂತೆ ಭ್ರಮೆ ಮೂಡಿಸುತ್ತದೆ. ಆದರೆ ಸೋಲುವ ಜೆಡಿಎಸ್ ಹುರಿಯಾಳು ಭೋಜೇಗೌಡನನ್ನು ಸೀರಿಯಸ್ ಆಗಿ ಪರಿಗಣಿಸದ ಮತದಾರ ಕಾಂಗ್ರೆಸ್ ಮತ್ತು ಬಿಜೆಪಿ ಕಲಿಗಳನ್ನು ಮುಖಾಮುಖಿ ನಿಲ್ಲಿಸಿ ಕದನ ಕುತೂಹಲದಿಂದ ನೋಡುತ್ತಿದ್ದಾರೆ.


ಎಂಪಿಗಿರಿ ಯೋಗ್ಯತೆ ಯಾರಿಗಿದೆ?

ಬಿಜೆಪಿಯ ಸುನಿಲ್ ಸಂಘಪರಿವಾರದ ರಕ್ತಪಿಪಾಸು ಧರ್ಮಕಾರಣಿಯಾದರೆ, ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆ ಜನಪರ ಬದ್ಧತೆಯ-ಸೆಕ್ಯುಲರ್ ವಿಚಾರದ ಅನುಭವಿ ರಾಜಕಾರಣಿ. ರಾಜ್ಯ ಬಿಜೆಪಿಯ ಯುವ ಘಟಕದ ಅಧ್ಯಕ್ಷ-ಬಾಬಾಬುಡನ್‌ಗಿರಿಯ ಅವದೂತ ದತ್ತನ ಹೆಸರಲ್ಲಿ ನಡೆದ ಅನಾಹುತದ ಬೈಪ್ರಾಡಕ್ಟ್ ತಾನೆಂಬ ಅಹಮಿಕೆಯ ಸುನಿಲ್‌ಗ್ಯಾಕೋ ಕರಾವಳಿ ಮತ್ತು ಮಲೆನಾಡಿನ ಏರಿಯಾಗಳಲ್ಲಿ ನೆಲೆ-ಬೆಲೆಯೇ ಸಿಕ್ಕಿಲ್ಲ. ಬಾಬಾಬುಡನ್‌ಗಿರಿಯ ಭಂಡಾಟದಿಂದ ತಾನು ಎರಡೂ ಜಿಲ್ಲೆಗಳಲ್ಲಿ "ಫೇಮಸ್" ಎಂದುಕೊಂಡಿದ್ದ ಸುನಿಲ್ ದಿನಕಳೆದಂತೆ ದಿಕ್ಕೆಡುತ್ತಿದ್ದಾನೆ. ಈತನ ನಗು-ನಗುತ್ತಲೇ ಕೋಮು ವಿಷಕಾರುವ ಗುಣ-ಧರ್ಮ, ಕಾರ್ಕಳದ ಶಾಸಕನಾಗಿದ್ದಾಗ ಮಾಡಿದ ಜನದ್ರೋಹ, ಕರ್ತವ್ಯ ಭ್ರಷ್ಟತೆ, ಅವ್ಯವಹಾರ, ಆಸ್ತಿ-ಕಾಸು ಶೇಖರಣೆ, ಕೋಮು ಕ್ರೌರ್ಯ ಜನರಿಗೆ ಅರ್ಥವಾಗಿ ಹೋಗಿದೆ!

ದತ್ತಪೀಠ, ಹಿಂದೂ ಹೆಣ್ಣಿನ ಮಾನ, ಗೋಪ್ರಾಣ ಎಂಬುದನ್ನೇ ಬಂಡವಾಳ ಮಾಡಿಕೊಂಡು ಕರಾವಳಿ-ಮಲೆನಾಡಲ್ಲಿ ಬಲಿತು ಬಹಳಾನೇ ನಖರಾ ಹೆಚ್ಚಿಸಿಕೊಂಡಿರುವ ಭಜರಂಗಿ ಗ್ಯಾಂಗಿಗೆ ಹೆದರಿಕೊಂಡಿರುವ ಜನರು ಅನಿವಾರ್ಯವಾಗಿ ಮತಹಾಕುತ್ತಾರೆ; ಚೆಡ್ಡಿ ಸಿದ್ಧಾಂತಿಗಳಂತೂ ಬೆಂಬಲಿಸುತ್ತಾರೆ; ಜೊತೆಗೆ ಸಿಎಂ ಸದಾನಂದ ಗೌಡ ತನ್ನ ಮಾನ-ಕುರ್ಚಿ ಕಾಪಾಡಿಕೊಳ್ಳಲು ಹೆಣಗುವುದರಿಂದ ತಾನು ದಿಲ್ಲಿ ಟೂರ್‌ಗೆ ಹೋಗಬಹುದೆಂದು ಲೆಕ್ಕಾಚಾರ ಹಾಕಿದ್ದ ಸುನಿಲ್‌ಗೆ ಇದೆಲ್ಲಾ ಉಲ್ಟಾ ಹೊಡೆಯುತ್ತಿದೆ. ಸುನಿಲ್‌ನ ಧರ್ಮಾಂಧ ಮೂತಿಗೆ ಇಂಥ ನೆಗೆಟಿವ್ ಮತಬಿಟ್ಟರೆ ಪಾಸಿಟಿವ್ ಮತ ಬರಲು ಸಾಧ್ಯವೇ ಇಲ್ಲ ಬಿಡಿ. ಈ ಸೋಗಲಾಡಿ ಸಂಘಪರಿವಾರಿ ಕಾರ್ಕಳದ ಶಾಸಕನಾಗಿದ್ದಾಗ ಮಾಡಿದ ಭಾನ್ಗಡಿ-ಸ್ವಾಹಾ-ಹೊಣೆಗೇಡಿತನ ಆತ ಜನಪ್ರತಿನಿಧಿಯಾಗಲು ಅನರ್ಹನೆಂಬುದನ್ನು ಸಾಬೀತುಪಡಿಸಿಬಿಟ್ಟಿದೆ!

ಶಾಸಕನಾಗುವ ಮೊದಲು ಒಂದೊತ್ತಿನ ಆರೆಸ್ಸೆಸ್ ಬುತ್ತಿ ಬಡಿದಾಟಗಾರನಾಗಿದ್ದ ಈ ಸುನಿಲ್‌ಕುಮಾರ್ ಎಮ್ಮೆಲ್ಲೇ ಆಗಿದ್ದೇ ತಡ, ಕೋಟಿಗೆ ತೂಗುವ ವಜನದಾರ್ ಆಗಿಹೋಗಿದ್ದ. ಉಡುಪಿಯಲ್ಲೊಂದು ಹೈಟೆಕ್ ಮೆಡಿಕಲ್ ಶಾಪ್, ಬೈಲದೂರು ಬಳಿ ಪೆಟ್ರೋಲ್ ಬಂಕ್, ಅಂಕೋಲೆಯಲ್ಲಿ ಬೀಚ್ ರೆಸಾರ್ಟ್, ತುಮಕೂರಲ್ಲಿ ಲಕ್ಷಾಂತರ ರೂ.ಗಳ ರಸಗೊಬ್ಬರ ಕಾರ್ಖಾನೆ, ಹಲವು ಲಾರಿಗಳ ಟ್ರಾನ್ಸ್‌ಪೋರ್ಟ್ ಉದ್ಯಮ.... ಹೀಗೆ ಕಳ್ಳ ಕುಬೇರನಾಗಿ ಅವತರಿಸಿದ್ದ ಈ ಬಡ ಮಾಸ್ತರನ ಮಗ. ಕಾರ್ಕಳದಲ್ಲಿ ಬಹುಸಂಖ್ಯಾತರಾಗಿರುವ ಬಿಲ್ಲವರ ನಡುವೆ ಜಾತಿಭಾವನೆ ಕೆರಳಿಸಿ ಗೆದ್ದಿದ್ದ ಈ 'ಅರೆಬಿಲ್ಲವ' ನಂತರ ಗೆಲ್ಲಿಸಿದವರಿಗೆ ಬೆನ್ನು ತಿರುಗಿಸಿ ಸ್ವಾರ್ಥ-ಐಭೋಗದಲ್ಲಿ ಮೈಮರೆತು ಬಿಟ್ಟಿದ್ದ. ಇದರಿಂದ ಸಿಟ್ಟಿಗೆದ್ದಿದ್ದ ಕಾರ್ಕಳದ ಜನರು ಅತಿಸಣ್ಣ ಜಾತಿ (ಕ್ಷೌರಿಕ)ಯ ಗೋಪಾಲ ಭಂಡಾರಿಯನ್ನು ಶಾಸಕನಾಗಿಸಿಕೊಂಡು ಸುನಿಲ್‌ನನ್ನು ಮನೆಗಟ್ಟಿದ್ದರು.

ಆದರೆ ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆ ಶಾಸಕ, ಮಂತ್ರಿ, ಪಕ್ಷೇತರ ಎಮ್ಮೆಲ್ಲೆಯಾಗಿದ್ದಾಗಲೂ ಸಮರ್ಥ ಸಂಸದೀಯ ಪಟು, ಜನಪರ ಕಾಳಜಿಯ ನೇತಾರನೆಂಬುದನ್ನು ಖಾತ್ರಿಪಡಿಸಿದ್ದಾರೆ. ಆತ ಸತತ ಎರಡು ಬಾರಿ ಪಕ್ಷೇತರನಾಗಿ ಗೆದ್ದಿರುವುದು ಇದಕ್ಕೆ ಸಾಕ್ಷಿ. ಎಂಪಿಗಿರಿಗೆ ಬೇಕಾದ ಜಾಣ್ಮೆ, ದೂರದೃಷ್ಟಿ, ಜನರ ಸಮಸ್ಯೆ-ಸಂಕಟಕ್ಕೆ ಸ್ಪಂದಿಸುವ ಕಾಳಜಿ, ಕ್ಷೇತ್ರದ ಬೇಕು-ಬೇಡಗಳನ್ನು ಸಂಸತ್ತಿನಲ್ಲಿ ಮಂಡಿಸುವ ಚಾಕಚಕ್ಯತೆ ಜೆಪಿಗಿದೆ. ಆತ ಎಂದೂ ಗೆಲ್ಲಿಸಿದವರಿಗೆ ಬೆನ್ನು ತೋರಿಸಿ ಹೋಗುವ ಪೈಕಿಯಂತೂ ಅಲ್ಲ. ಕಳೆದ



ಸುನೀಲ್ ಜೊತೆ ದೀವಿ....

ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ದೀವಿ ಎದುರು ಕೇವಲ 27,000 ಮತದಂತರದಿಂದ ಸೋತಿದ್ದ ಜೆಪಿ ಅಂತಃಪುರದಲ್ಲಿ ಅಡಗಿ ಕೂರಲಿಲ್ಲ. ಉಡುಪಿ-ಚಿಕ್ಕಮಗಳೂರು ಜಿಲ್ಲೆಯ ಹಳ್ಳಿಗಾಡಿನ ಸಂಪರ್ಕ 'ಹಾಗೇ ಮುಂದುವರಿಸಿಕೊಂಡು ಹೋಗಿದ್ದ ಜೆಪಿ ಜನರ ಧ್ವನಿಯಾಗಿದ್ದರು. ಜನಬಳಕೆಯ ಜೆಪಿ ಎಲ್ಲಿ? ಜನರಲ್ಲಿ ಕೋಮು ಬೆಂಕಿ ಹೊತ್ತಿಸಿ ಮೈಕಾಯಿಸಿಕೊಳ್ಳುವ ಖೂಳ ಸುನಿಲ್ ಎಲ್ಲಿ?

ಕರಾವಳಿಯಲ್ಲಿ ಕಮರಿದ ಕಮಲ


ಜೆಪಿ ಜಂಟಲ್‌ಮ್ಯಾನ್; ಸುನಿಲ್ ಜಗಳಗಂಟ ಹರಾಮಿ. ಮತಾಂಧ ಮಸಲತ್ತು-ಮಾತು-ಬಿಜೆಪಿಯ ಹಿಡನ್ ಹಿಕಮತ್ತು ಬಿಟ್ಟರೆ ಈತನಿಗೆ ಬೇರೇನೂ ಅರ್ಥವಾಗದು. ಕ್ಷೇತ್ರದ ಉದ್ದಗಲವೇ ಗೊತ್ತಿಲ್ಲದ ಸುನಿಲ್‌ಗೆ ಸ್ಥಳೀಯ ಸಮಸ್ಯೆ-ಸಂಕಷ್ಟ ಅದ್ಹೇಗೆ ಗೊತ್ತಾದೀತು? ಆದರೆ ಜೆಪಿ ಎಲ್ಲ ಜಾತಿ-ಧರ್ಮದವರೊಂದಿಗೆ ಪೂರ್ವಗ್ರಹಗಳಿಲ್ಲದೆ ಬೆರೆಯಬಲ್ಲ ಜಾತ್ಯತೀತ ಮುಖಂಡ. ಅಷ್ಟೇ ಅಲ್ಲ ಕ್ಷೇತ್ರಾಭಿವೃದ್ಧಿಯ ಪರಿಕಲ್ಪನೆಯೂ ಜೆಪಿಗಿದೆ. ಇಲ್ಲಿಯ ಮೀನುಗಾರರ, ಅಡಿಕೆ-ಕಾಫಿ ಬೆಳೆಗಾರರ ಸಮಸ್ಯೆ ಗೊತ್ತು, ಧರ್ಮಕಾರಣದ ಆಡಂಬೋಲದಂತಾಗಿರುವ ಉಡುಪಿ-ಚಿಕ್ಕಮಗಳೂರಿಗೆ ಈತ ನೆಮ್ಮದಿ ತರಬಲ್ಲ.

ಕರಾವಳಿಯ ನಾಲ್ಕು ಅಸೆಂಬ್ಲಿ ಸೆಗ್ಮೆಂಟ್‌ಗಳಲ್ಲಿ ಸಂಘಪರಿವಾರದ ಮತಾಂಧ ಮಸ್ತಿಯಿಂದ ಜನ ರೋಸಿ ಹೋಗಿದ್ದಾರೆ. ಹಿಂದೂ ಹೆಣ್ಣಿನ ಮಾನ-ಗೋಪ್ರಾಣ ಚರ್ಚ್-ಪಬ್ ದಾಳಿ, ಹಿಂದೂ ಹುಡುಗೀರ ಕ್ಯಾರೆಕ್ಟರ್ ಅಸಾಸಿನೇಷನ್ ಮಾಡುವ ಅನೈತಿಕ ಪೊಲೀಸ್‌ಗಿರಿಯ ಕೇಸರಿ ಪಡೆಯ ಪುಂಡಾಟ ಇವತ್ತು ಅಲ್ಪಸಂಖ್ಯಾತರನ್ನಷ್ಟೇ ಬಿಜೆಪಿ ವಿರುದ್ಧ ತಿರುಗಿಬೀಳುವಂತೆ ಮಾಡಿಲ್ಲ, ಬದಲಿಗೆ ತಣ್ಣಗೆ ಬಿಜೆಪಿಯನ್ನು ಬೆಂಬಲಿಸುತ್ತ ಬಂದಿದ್ದ ಮಧ್ಯಮ ವರ್ಗದ ಭಾವುಕ ಮಂದಿ, ಶಿಕ್ಷಿತರು, ಸೆಕ್ಯುಲರ್ ಪ್ರಜ್ಞಾವಂತರು ಮತ್ತು ಹರೆಯದ ಹುಡುಗ-ಹುಡುಗೀರೆಲ್ಲ ಹುಸಿ ಶೀಲ-ಶಿಸ್ತಿನ ಬಿಜೆಪಿಗೊಂದು ಪಾಠ ಕಲಿಸಲು ಸಿದ್ಧರಾಗಿದ್ದಾರೆ. ಶ್ರೀರಾಮ ಸೇನೆ-ಭಜರಂಗಿ-ಚೆಡ್ಡಿ ನಿರುದ್ಯೋಗಿ ರೌಡಿಗಳ ಹುಚ್ಚಾಟ ಬಿಜೆಪಿಯ ಪಕ್ಕಾ ಕಾರ್ಯಕರ್ತರಿಗೇ ಹೇಸಿಗೆ ತರಿಸಿದೆ.

ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಕರಾವಳಿಯ ನಾಲ್ಕು ಕ್ಷೇತ್ರಗಳಲ್ಲಿ ಬಿಜೆಪಿ ಮೂರು ಕಡೆ ಗೆದ್ದಿತ್ತು. ಹಾಗೆಯೇ ಆನಂತರದ ಪಾರ್ಲಿಮೆಂಟ್ ಚುನಾವಣೆಯಲ್ಲೂ ಬಿಜೆಪಿ ಚಿಕ್ಕಮಗಳೂರು ಭಾಗಕ್ಕಿಂತಲೂ ಹೆಚ್ಚು ಮತ ಇಲ್ಲಿ ಪಡೆದಿತ್ತು, ಇದೇ ಮುಳುಗಲಿದ್ದ ದೀವಿಯನ್ನು ದಡ ಸೇರಿಸಿತ್ತು, ಆದರೆ ಈ ಬಿಜೆಪಿ ಶಾಸಕರು ಮತ್ತು ಸಂಸದ ಡಿವಿ ಜನರ ಸಮಸ್ಯೆಗಳಿಗೆ ಸ್ಪಂದಿಸದೇ ಸ್ವಾರ್ಥದ ಸ್ವಾಹಾ, ಮತಾಂಧ ಮಸಲತ್ತಿನಲ್ಲಿ ಮುಳುಗಿರುವುದು ಕಾಂಗ್ರೆಸ್ ಪರ ಅಲೆ ಎಬ್ಬಿಸಿಬಿಟ್ಟಿದೆ. ಹಾಗೆಯೇ ಶಾಸಕ-ಸಂಸದರಾಗಿದ್ದವರ ಗೆಲುವಿನ ಅಂತರವೂ ಸಣ್ಣ-ಸಣ್ಣದೇ. ಹೀಗಾಗಿ ಕಾಂಗ್ರೆಸ್ ನೆಲೆಯೀಗ ಇನ್ನಷ್ಟು ಭದ್ರವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ ಕ್ಯಾಂಡಿಡೇಟ್ ಜೆಪಿ ಬಗ್ಗೆ ಸಿಂಪಥಿ, ಕೆಲಸಗಾರನೆಂಬ ನಂಬಿಕೆಯಿದೆ. ಆತ ಹಿಂದೆ ಶಾಸಕ, ಮಂತ್ರಿಯಾಗಿದ್ದಾಗ, ಮಾಜಿಯಾಗಿದ್ದಾಗ ಜನರ ಮಧ್ಯೆ ಇರುತ್ತಿದ್ದುದ್ದು ಕಾಂಗ್ರೆಸ್‌ಗೆ ಪ್ಲಸ್ ಆಗಿದೆ. ಆದರೆ ಡೀವಿ ಸಂಸದನಾಗಿ ಈ ಮೂರು ವರ್ಷದಲ್ಲಿ ಕೊಟ್ಟ ಕೊಡುಗೆ ಏನೂ ಇಲ್ಲ; ಜನರಿಗೆ ಮಾಡಿದ ಉಪಕಾರ ಯಾವುದೂ ಇಲ್ಲ.

ಜೆಪಿ ಕರಾವಳಿಯಲ್ಲಿ ಸ್ವಜಾತಿ ಬಂಟರ ಓಟಿನ ಜೊತೆಗೆ ಒಂದು ಲಕ್ಷದಷ್ಟಿರುವ ಮೀನುಗಾರರ (ಮೊಗವೀರ-ಖಾರ್ವಿ) ಮತ ಪಡೆಯುವುದು ನಿಶ್ಚಿತ. ಮೀನುಗಾರರಿಗೆ ಜೆಪಿ ಮಿನಿಸ್ಟರ್ ಆಗಿದ್ದಾಗ ನೀಡಿದ ನೆರವು, ಸಮುದ್ರ ಕೊರೆತ ತಡೆ ಕಾಮಗಾರಿ ಇನ್ನೂ ಮರೆತಿಲ್ಲ. ಕಾಂಗ್ರೆಸ್ ನೆಲೆ ಮತ್ತು ಕ್ಯಾಂಡಿಟೇಟ್‌ನ ವೈಯಕ್ತಿಕ ಚಾರಿಷ್ಮಾದಿಂದ ಸಾಲಿಡ್ ಲೀಡ್ ಸಿಗಲಿದೆ. ಹಾಗೆಯೇ ಕಡಲ ತಡಿಯಲ್ಲಿ ಬಿಜೆಪಿ ಪ್ರಭಾವ ಮತಾಂಧ ಭಾನ್ಗಡಿಯಿಂದ ಕಡಿಮೆಯಾಗಿದೆ. ಜೊತೆಗೆ ಬಿಜೆಪಿ ಉಮೇದುವಾರನ ಬಗ್ಗೆ ಒಳ್ಳೆಯ ಮಾತೇ ಇಲ್ಲ; ಪರಿಚಯವೂ ಇಲ್ಲ. ಕಳೆದ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಕುಂದಾಪುರ ಕ್ಷೇತ್ರದಲ್ಲಿ ದೀವಿಗೆ ಬರೋಬ್ಬರಿ 12 ಸಾವಿರ ಲೀಡ್ ಸಿಕ್ಕಿತ್ತು. ಇದಕ್ಕೆ ಕಾರಣ ಸ್ಥಳೀಯ ಶಾಸಕ-ಕೆಸರಿನ ಕಮಲ ಖ್ಯಾತಿಯ ಹಾಲಾಡಿ ಶ್ರೀನಿವಾಸ ಶೆಟ್ಟಿಯ ಜನಪ್ರಿಯತೆ. ಮೂರು ಬಾರಿ ಗೆದ್ದಿರುವ ಹಾಲಾಡಿ ಶೆಟ್ಟರನ್ನು ಮಂತ್ರಿ ಮಾಡಬಹುದೆಂಬ ಆಸೆಯಿಂದ ಆತನ ಸ್ವ-ಜಾತಿ ಬಂಧುಗಳಾದ ಬಂಟರು ಬಿಜೆಪಿಗೆ ಓಟು ಹಾಕಿದ್ದರು. ಈ ಬಾರಿ ತಮ್ಮ ಕುಲದ ಕುಡಿ ಜೆಪಿಯ ಕೈಬಿಡಬಾರದೆಂಬ ನಿರ್ಧಾರಕ್ಕೆ ಬಂಟರು ಬಂದಿದ್ದಾರೆ. ಹಾಗಾಗಿ ಕುಂದಾಪುರ ಕ್ಷೇತ್ರದಲ್ಲಿ ಜೆಪಿ ದೊಡ್ಡ ಮಟ್ಟದ ಓಟು ಬಾಚಲಿದ್ದಾರೆ. ಹಾಗೆಯೇ ಹಾಲಾಡಿ ಶೆಟ್ಟರ ನರಿಬುದ್ಧಿಯೂ ಜನರಿಗೆ ಗೊತ್ತಾಗಿದೆ. ವರಾಹಿ ನೀರಾವರಿ ಯೋಜನೆಯ ಅವ್ಯವಹಾರದ ಫಲಾನುಭವಿಗಳಲ್ಲಿ ಶಾಸಕ ಶೆಟ್ಟರ ಬಳಗವೂ ಸೇರಿರುವುದು ಬಿಜೆಪಿಗೆ ಹಾನಿ ಮಾಡಲಿದೆ.

ಉಡುಪಿ ಅಸೆಂಬ್ಲಿ ಕ್ಷೇತ್ರದಲ್ಲಿ ಬಿಜೆಪಿ ಶಾಸಕ ರಘುಪತಿ ಭಟ್ಟನಿಗಿಂತಲೂ ಆತನ ಎದುರಾಳಿ ಕಾಂಗ್ರೆಸ್‌ನ ಪ್ರಮೋದ್ ಮಧ್ವರಾಜ್‌ಗೇ ಜನ ಮನ್ನಣೆ ಜಾಸ್ತಿ. ಈ ಭಟ್ಟ ಹೆಂಡತಿಯನ್ನು ಕೊಂದು ಹಾಕಿ ಮೋಜು-ಮಸ್ತಿಯಲ್ಲಿ



ಜೆಪಿ ಮತಯಾಚನೆಯಲ್ಲಿ....

ಮುಳುಗಿರುವುದು, ಸೇಂಟ್ ಮೇರೀಸ್ ದ್ವೀಪದಲ್ಲಿ ಬೆತ್ತಲೆ ಬ್ಯುಸಿನೆಸ್ ನಡೆಸಿ ಕಾಸು ಬಾಚಿರುವುದು, ಆತನ ರಂಗೀಲಾ ರಗಳೆಗಳು, ಭ್ರಷ್ಟಾಚಾರ, ಪುಂಡಾಟದಿಂದ ಬಿಜೆಪಿ ಎಂದರೆ ಬಿಡುಗಾಡಿ ಎಂದು ಜನ ಹೇಳುವಂತಾಗಿದೆ. ಆದರೆ ಭಟ್ಟನ ಎದುರಾಳಿ ಕಾಂಗ್ರೆಸ್‌ನ ಪ್ರಮೋದ್ ಮಧ್ವರಾಜ್ ಪ್ರತಿದಿನ ನೊಂದವರಿಗೆ ಸಾವಿರಾರು ರೂಪಾಯಿ ದಾನ ಮಾಡಿ ಅವರ ಕಷ್ಟ-ಸುಖದಲ್ಲಿ ಭಾಗಿಯಾಗಿ ಜನಾನುರಾಗಿಯಾಗಿದ್ದಾರೆ. ಇದು ಜೆಪಿಗೆ ಉಡುಪಿಯಲ್ಲಿ ಈ ಬಾರಿ ಲೀಡ್ ತಂದು ಕೊಡಲಿದೆ. ಶಾಸಕ ಭಟ್ಟನ ವಕ್ರಬುದ್ಧಿ, ಮಂತ್ರಿಯಾಗಿದ್ದ ದಿವಂಗತ ವಿ.ಎಸ್. ಆಚಾರ್ಯ ಪ್ರಳಯಾಂತಕ ಹಾರುಬೂದಿ ಸ್ಥಾವರ (ನಾಗಾರ್ಜುನಾ ಪವರ್ ಪ್ರಾಜೆಕ್ಟ್) ಪಡುಬಿದ್ರಿಯಲ್ಲಿ ಹಠದಿಂದ ಸ್ಥಾಪಿಸಿ ದೊಡ್ಡ ದೇಣಿಗೆ ಹೊಡೆದಿರುವುದು, ಉಡುಪಿಯ ಅಷ್ಟಮಠದ ಅನಿಷ್ಟಾಧಿಪತಿಗಳ ಬೆನ್ನಿಗೆ ಬಿಜೆಪಿ ಸರ್ಕಾರ ನಿಂತು ಪಾತರಕ್ಕೆ ನೆರವು ನೀಡುವುದೆಲ್ಲ ಕಾಂಗ್ರೆಸ್ ಕ್ಯಾಂಡಿಡೇಟ್ ಜೆಪಿಗೆ ವರದಾನದಂತಿದೆ! ಮಾಜಿ ಸಂಸದೆ ಮನೋರಮಾ ಅಜ್ಜಿಯ ಪಕ್ಷಾಂತರದಿಂದ ಬಿಜೆಪಿಗೆ ಲಾಭವೇನಿಲ್ಲ, ಕಾಂಗ್ರೆಸ್‌ಗೆ ಒಂಚೂರು ಹಾನಿ ಇಲ್ಲ.

ಅತ್ತ ಕಾಪುನಲ್ಲಿ ಹೇತ್ಲಾಂಡಿ ಚೆಡ್ಡಿ ಶಾಸಕ ಲಾಲಾಜಿ ಮೆಂಡನ್‌ನಿಂದಾಗಿ ಮುಳುಗುತ್ತಿರುವ ಬಿಜೆಪಿಯನ್ನು ಬಚಾವ್ ಮಾಡೋದು ಸಾಧ್ಯವೇ ಇಲ್ಲ. ಕಳೆದ ಬಾರಿಯೂ ಇಲ್ಲಿ ಕಾಂಗ್ರೆಸ್‌ಗೇ ಹೆಚ್ಚು ಮತ ಬಂದಿದೆ. ಕಾರ್ಕಳದಲ್ಲಿ ಮಾತ್ರ ಕಾಂಗ್ರೆಸ್-ಬಿಜೆಪಿ ನಡುವೆ ಸಮಬಲದ ಹೋರಾಟ ನಡೆಯಲಿದೆ. ಏಕೆಂದರೆ ಬಿಜೆಪಿ ಕ್ಯಾಂಡಿಡೇಟ್ ಸುನಿಲ್

▶9

ಯಡ್ಡಿ-ದೇಗೌ ಫ್ಯಾಕ್ಟರ್!

ಉಡುಪಿ-ಚಿಕ್ಕಮಗಳೂರು ಕ್ಷೇತ್ರದಲ್ಲಿ ಲಿಂಗಾಯತ ಮತ್ತು ಒಕ್ಕಲಿಗರು ಹೆಚ್ಚು ಕಮ್ಮಿ ಒಂದೇ ತೂಕ-ತಾಕತ್ತಿನಲ್ಲಿದ್ದಾರೆ. ರಾಜ್ಯದಲ್ಲಿ ಪರಂಪರಾಗತವಾಗಿ ನಡೆದು ಬಂದಿರುವ ಲಿಂಗಾಯತ v/s ಒಕ್ಕಲಿಗ ರಾಜಕಾರಣದಿಂದಾಗಿ ದೇವೇಗೌಡ ಮತ್ತು ಯಡ್ಡಿ ತಮ್ಮತಮ್ಮ ಜಾತಿಗಳ 'ಡಾನ್'ಗಳಾಗಿ ಅವತರಿಸಿದ್ದಾರೆ. ಈ ಯಡ್ಡಿ ಮತ್ತು ದೇಗೌ ಫ್ಯಾಕ್ಟರ್ ಉಡುಪಿ-ಚಿಕ್ಕಮಗಳೂರು ಬೈ ಎಲೆಕ್ಷನ್‌ನಲ್ಲಿ ರಹಸ್ಯವಾಗಿ ಕಾರ್ಯಾಚರಣೆ ನಡೆಸಿದೆ. ಹೇಳಿ-ಕೇಳಿ ಯಡ್ಡಿ-ದೇಗೌ ಆಜನ್ಮ ವೈರಿಗಳು. ದೇಗೌ ಸಿಎಂ ದೀವಿಯ ರಾಜಪುರೋಹಿತನೆಂಬ ಸಿಟ್ಟು ಯಡ್ಡಿಗೆ. ದೇಗೌಗೆ ಯಡ್ಡಿ ಹಣಿಗಿಸಲು ಸಿಎಂ ದೀವಿ ಪರ ಕರಾಮತ್ತು ಮಾಡುವ ದರ್ದು!



ದೇವೇಗೌಡ-ಅವರ ಕುಮಾರ ಕಂಠೀರವರಿಗೂ ಗೊತ್ತು, ತಮ್ಮ ಕ್ಯಾಂಡಿಡೇಟ್ ಚೆಲ್ಲ ಕೊಟ್ಟರೂ ಗೆಲ್ಲೋದಿಲ್ಲ ಎಂದು. ಆದರೂ ಮಾಜಿ ಶಾಸಕ ಧರ್ಮೇಗೌಡರ ಸಹೋದರ ಭೋಜೇಗೌಡರನ್ನು ಕಣಕ್ಕಿಳಿಸಿದ್ದಾರೆ. ಈತ ಒಕ್ಕಲಿಗನೆಂಬ ಪ್ರಚಾರವೂ ನಡೆದಿದೆ. ಒಂದಿಷ್ಟು ಒಕ್ಕಲಿಗರ-ಮುಸ್ಲಿಮರ ಮತ ಒಡೆದರೆ ಕಾಂಗ್ರೆಸ್ ಸೋಲಿಸಿ ಬಿಜೆಪಿ ಕ್ಯಾಂಡಿಡೇಟನ್ನು ಗೆಲ್ಲಿಸಬಹುದು. ತನ್ಮೂಲಕ ಯಡ್ಡಿಯನ್ನು ಹಣಿಯಬಹುದು. ತನ್ನ ಮಾತು ಕೇಳುವ ದೀವಿಯ ಕುರ್ಚಿ ಅಬಾಧಿತವಾಗಿಡಬಹುದೆಂಬ ದೂ(ದು)ರಾಲೋಚನೆ ಗೌಡರ ಬಳಗದ್ದು.




ಆದರೆ ಈ ಭೋಜೇಗೌಡ ಒಕ್ಕಲಿಗನಲ್ಲ. ಈ ಕುರುಬಗೌಡ ಹಣವಂತನೂ ಹೌದು. ದೇಗೌ-ಕುಮಾರಸ್ವಾಮಿಗಳ ಸ್ಟ್ರಾಟಜಿ ಏನೇ ಇರಲಿ ಸೋಲುವ ಕುದುರೆ ಭೋಜೇಗೌಡನನ್ನು ಒಕ್ಕಲಿಗರು-ಸಾಬಿಗಳು ಬೆಂಬಲಿಸುವುದು ಅನುಮಾನ. ಹಾಗೆಯೇ ತುಳುಗೌಡ (ಅರೆಭಾಷೆ ಗೌಡ) ದೀವಿಯನ್ನು ಇಂದೂ-ಹಿಂದೂ ತಮ್ಮವನೆಂದು ಚಿಕ್ಕಮಗಳೂರು ಭಾಗದ ಒಕ್ಕಲಿಗರು ಸ್ವೀಕರಿಸಿಲ್ಲ. ಹಾಗಾಗಿಯೇ ಆತ ಕಳೆದ ಸಲ ಚಿಕ್ಕಮಗಳೂರು ಸೀಮೆಯಲ್ಲಿ ಹಿನ್ನಡೆ ಅನುಭವಿಸಿದ್ದು. ಒಕ್ಕಲಿಗರ ಓಟು ದೀವಿಯಿಂದ ಬಿಜೆಪಿಗೆ ಬರುವುದು ಸಾಧ್ಯವೇ ಇಲ್ಲ.


ದೇಗೌ ಏನಾದರೂ ದೀವಿ ಬಚಾಯಿಸಲು ಒಕ್ಕಲಿಗರ ಓಟು ಬಿಜೆಪಿಯತ್ತ ಹರಿಯುವಂತೆ ಮಾಡಿದರೆ, ಲಿಂಗಾಯತರ ಓಟು ಕಾಂಗ್ರೆಸ್‌ಗೆ ಹೋಗುವಂತೆ ಯಡ್ಡಿ ಖಂಡಿತ ಕಿತಾಪತಿ ಮಾಡ್ತಾರೆ. ಆ ಮೂಲಕ ತನ್ನ ತಾಕತ್ತು ತೋರಿಸಿಯೇ ತೋರಿಸ್ತಾರೆ. ಈ ಯಡ್ಡಿ-ದೇಗೌ ಫ್ಯಾಕ್ಟರ್ ಹೇಗೆ ವರ್ಕ್‌ಔಟ್ ಆದರೂ ಅದು ಕಾಂಗ್ರೆಸ್‌ಗೆ ಲಾಭ; ಬಿಜೆಪಿಗೆ ಹಾನಿ; ದೇಗೌ-ದೀವಿಗೆ ಮುಖಭಂಗ!

ಸುಮಾರು ಎರಡು ಲಕ್ಷದಷ್ಟಿರುವ ಒಕ್ಕಲಿಗ-ಲಿಂಗಾಯತ ಮತಗಳೇ ಈ ಬಾರಿ ನಿರ್ಣಾಯಕ ಎಂಬುದು ಎಲೆಕ್ಷನ್ ಪಂಡಿತರ ಪ್ರೆಡಿಕ್ಷನ್!!

ಹಿಂದೆ ತೆಲುಗಿನ ಸಂಬಳಕ್ಕೆ ಇದ್ದರು. ಈಗ ಕನ್ನಡದ ಸಂಬಳಕ್ಕೆ ಇದ್ದಾರೆ. (ತೆಲುಗಿನಲ್ಲಿ 'ಸಂಬಳಾನಿಕಿ ಉಂಡೇದಿ' ಅಂದರೆ ಜೀತಕ್ಕಿರುವುದು). ಈಗ ತಿಂಗಳಿಗೆ 1500ರಿಂದ 2500 ರೂ.ಗಳು ಮತ್ತು ಊಟ ಕೊಡುತ್ತಾರೆ. 1985ರ ತೆಲುಗಿನ ಸಂಬಳಕ್ಕೂ, 2011ರ ಕನ್ನಡದ ಸಂಬಳಕ್ಕೂ ವ್ಯತ್ಯಾಸವಿದೆ. ಬೇಕೆಂದರೆ ತಿಂಗಳಿನ ಸಂಬಳದ ಕೆಲಸ ಬೇಡವೆಂದು ಬೇರೆ ಕೆಲಸಕ್ಕೆ ಹೋಗಬಹುದು. ಹಳೆಯ ರೀತಿಯ ದೌರ್ಜನ್ಯವಿಲ್ಲ. ಆದರೆ ಜೀತವಿಮುಕ್ತಿ ಆಗಿದೆಯೇ? ಈ ಪ್ರಶ್ನೆಗೆ ಉತ್ತರ ಎಲ್ಲರೂ ಹುಡುಕಬೇಕು. ನನಗೆ ಶಂಭೂಕನಗರದಾಚೆಗೆ ಕಂಡ ಎರಡು ಸಂಗತಿಗಳನ್ನು ನಿಮ್ಮ ಮುಂದಿಡುತ್ತೇನೆ. ತೀರ್ಮಾನ ನೀವೇ ಮಾಡಿ.



ಶಂಭೂಕರು ಜೀತದಿಂದ ವಿಮೋಚನೆಯಾದರೇ?



ಲಂಕೇಶ್ 77

• ಡಾ. ವಾಸು

'ಅವತ್ತು ಬೆಳಿಗ್ಗೆ ಕಕ್ಕಸಿಗೆ ಕೂತಾಗ ನನಗ್ಯಾಕೋ ಈ ಮನೆಯಲ್ಲಿ ಎಷ್ಟು ಜನ ಜೀತಕ್ಕಿದ್ದಾರೆ, ಆ ರೆಡ್ಡಿ ...ಯಲ್ಲಿ ಎಷ್ಟು ಜನ ಇದ್ದಾರೆ ಅಂತ ಎಣಿಸಬೇಕೆನಿಸಿತು. ... ಮೊದಲು ಕಕ್ಕಸಿಗೆ ಕೂತಿದ್ದರಿಂದ ನಂತರ ಚೊಂಬು ...ಡುಕೊಂಡ ಬಂದ ಒಬ್ಬೊಬ್ಬರನ್ನೇ ಎಣಿಸಿದೆ. ಈ ಮನೆಯಲ್ಲಿ 48 ಜನ, ಆ ರೆಡ್ಡಿ ಮನೆಯಲ್ಲಿ 51 ...ದಿದ್ದರು. ಅವರೆಲ್ಲರಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ...ಊರಿನವರೇ. ಉಳಿದವರು ಸುತ್ತಮುತ್ತ 25 ಕಿ.ಮೀ.ನ ... ಬೇರೆ ಹಳ್ಳಿಗಳವರು. ಎಲ್ಲರೂ ಮಾದಿಗರೇ.'

'ನೀವು ಇದೇ ಊರಿನಲ್ಲಿದ್ದವರು, ಹಾಗಾಗಿ ಸಾಲ ...ಡುಕೊಂಡಿದ್ದಕ್ಕೆ ಜೀತ ಮಾಡುತ್ತಿದ್ದಿರಿ, ಆದರೆ 25 ...ಮೀ. ದೂರದಲ್ಲಿದ್ದವರು ಇಲ್ಲಿ ಯಾಕೆ ಬಂದು ಜೀತ ...ಡುತ್ತಿದ್ದರು?'

'ರೆಡ್ಡಿ ಮನೆಯಲ್ಲಿ ಊಟ ಚೆನ್ನಾಗಿ ಸಿಗುತ್ತೆ ಅಂತ'!?!?

ನಮಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ.

...ಅಧ್ಯಯನಕ್ಕೆ ಹೋಗಿದ್ದ ನಾವು ಆ ರೀತಿಯ ಹಸಿವನ್ನು ...ಭವಿಸಿರಲಿಲ್ಲ. 2011ರ ಡಿಸೆಂಬರ್‌ನಲ್ಲಿ ಇದೇ ಜಿಲ್ಲೆಯ ...ವು ಹಳ್ಳಿಗಳನ್ನು ಸುತ್ತಿದ್ದ ನಮಗೆ ಆ ರೀತಿಯ ಹಸಿವು ...ವ ಸಮುದಾಯದಲ್ಲೂ ಕಂಡಿರಲಿಲ್ಲ. ಇಂದು ಶಂಭೂಕ ...ವೆಂಬ ನಾಮಾಂಕಿತವನ್ನು ಹೊತ್ತುಕೊಂಡಿರುವ ಈ ...ಯ ಜನರ ಗತವನ್ನು ಕೆದಕಿದಾಗ ನಮಗೆ ಆ ಅವತ್ತಿನ ...ವು ಕಾಣಿಸಿತು.

...ಹುದುತಿ ನಾಗಸಂದ್ರ ಗೌರಿಬಿದನೂರು ತಾಲೂಕಿನಿಂದ ...ವ್ರದ ದಿಕ್ಕಿಗಿರುವ ಹಳ್ಳಿ. ಈ ಹಳ್ಳಿಯ ಇವತ್ತಿನ ...ಸ್ಯವೊಂದನ್ನು ಹೇಳಬೇಕು. ಈ ಹಳ್ಳಿಯಲ್ಲಿ ಹತ್ತಿರ ...ವದಲ್ಲೇ ಇರುವ ಮೂರು ಮನೆಗಳಿಂದ ಮೂವರು ...ಎಲ್‌ಎ ಅಭ್ಯರ್ಥಿಗಳಿದ್ದಾರೆ. ಒಬ್ಬರು ಕಾಂಗ್ರೆಸ್‌ನ ಹಾಲಿ ...ಸಕರು, ಒಬ್ಬರು ಜನತಾದಳದ ಮಾಜಿ ಶಾಸಕರು, ...ನ್ನೊಬ್ಬರು ಬಿಜೆಪಿ. ಭವಿಷ್ಯದಲ್ಲಿ ಶಾಸಕರಾಗುವ ಆಸೆ ...ಟ್ಟುಕೊಂಡಿದ್ದಾರೆ. ಹುದುತಿ ನಾಗಸಂದ್ರದಲ್ಲಿ ಜೀತ ವಿಮುಕ್ತಿ ...ಹೋರಾಟ ನಡೆದಾಗ ಮೊದಲ ಮತ್ತು ಕೊನೆಯ ...ಡಿಡೇಟುಗಳಿಬ್ಬರೂ ಜೊತೆಜೊತೆಯಾಗಿಯೇ ಬೈಕ್‌ನಲ್ಲಿ ...ಡಾಡುತ್ತಿದ್ದರು. ಈಗ ದೊಡ್ಡ ಕಾರುಗಳಿವೆ.


...ಎಚ್.ನಾಗಸಂದ್ರ ಭೂ ಹೋರಾಟ ಎಂದು ...ದ್ಧವಾದ ಆ ಹೋರಾಟ ನಡೆದು, ಅದರ ಫಲವಾಗಿ ...ತವಿಮುಕ್ತರಿಗೆಂದೇ ಭೂಮಿ ಹಂಚಿಕೆ ನಡೆದು, ಅವರ ...ಕ್ಕೆಂದು ರೂಪುಗೊಂಡ ಶಂಭೂಕನಗರದ ಇವತ್ತಿನ ...ಯನ್ನು ನೋಡಲು ಹೋದಾಗ ನಮಗೆ ಕಂಡದ್ದನ್ನು ... ಹಂಚಿಕೊಳ್ಳಬೇಕಿದೆ. ಅದರ ಬಗ್ಗೆ ಮಾಹಿತಿ ...ದವರಿಗೆ ಸ್ವಲ್ಪವಾದರೂ ಹಿನ್ನೆಲೆ ಕೊಡುವ ಅವಶ್ಯಕತೆ ...

...ಪ್ರಗತಿಪರ ವಿದ್ಯಾರ್ಥಿ ಕೇಂದ್ರ ಸಂಘಟನೆಯವರು ... 'ಹಳ್ಳಿಗಳಿಗೆ ಹೋಗೋಣ' ಕಾರ್ಯಕ್ರಮದ ...ವಾಗಿ ಹೋಗಿ ಎಚ್.ನಾಗಸಂದ್ರದ ಜೀತದ ಕುರಿತು ...ವಿ ಮಾಡಿದ್ದು 25 ವರ್ಷಗಳ ಹಿಂದೆ. ಆ ನಂತರ ...ರ ಬಗ್ಗೆ ಅಂದು ಸಕ್ರಿಯವಾಗಿದ್ದ ಮಾನವ ಹಕ್ಕು ...ಘಟನೆ ಕೆಸಿಎಲ್‌ಸಿಯವರು ಒಂದು ಸತ್ಯಶೋಧನೆಯನ್ನೂ ...ಸಿದರು. ಆದರೆ ಹೋರಾಟ ತೆಗೆದುಕೊಂಡು ದಡ ...ಟ್ಟಿಸಿದ್ದು ದಲಿತ ಸಂಘರ್ಷ ಸಮಿತಿ. ಹೋರಾಟದ ...ತು ಒಂದು ಪುಸ್ತಕವೇ ಬಂದಿದೆ. ಅಲ್ಲಿ ಜೀತವಿಮುಕ್ತಿ ...ಹೋರಾಟ ದಲಿತ ಸಂಘರ್ಷ ಸಮಿತಿಯ ವತಿಯಿಂದ ...ರಂಭವಾಗಿ, 1985ರ ಆಗಸ್ಟ್ 14ರ ಮಧ್ಯರಾತ್ರಿ ಸರ್ಕಾರೀ ...ಮಿಯನ್ನು ವಶಪಡಿಸಿಕೊಳ್ಳುವ ಚಳವಳಿಯವರೆಗೆ ...ಯಿತು. ಪೊಲೀಸರ ಲಾಠಿಚಾರ್ಜ್, ಕೇಸು, ಜೈಲುಗಳಿಗೆ ...ರದೆ ದಸಂಸ ನಾಯಕರುಗಳು ನಿಂತಿದ್ದರಿಂದ ಅಂತಿಮ ... ಅಲ್ಲಿನ 70 ಜೀತಗಾರರಿಗೆ ಮತ್ತು ಪಕ್ಕದ ಹಳ್ಳಿಯ ...ರೊಂತರಿಗೆ ಸೇರಿಸಿ ಭೂಮಿ ಹಂಚಿಕೆ ಮಾಡಲಾಯಿತು. ... 1 ಎಕರೆ 30 ಗುಂಟೆ ಜಮೀನನ್ನು ನೀಡಲಾಯಿತು. ...ರಲ್ಲಿ ಜೀತ ವಿಮುಕ್ತರಿಗೆ ಪ್ರತ್ಯೇಕವಾಗಿ ಭೂಮಿ ...ಚಿದ್ದೂ, ಸಹಕಾರಿ ತತ್ವದಲ್ಲಿ ಬೇಸಾಯ ಮಾಡಲಿ ...ಬ ಸದುದ್ದೇಶದಿಂದ 3 ಜನರಿಗೆ ಸೇರಿಸಿ ಬೋರ್‌ವೆಲ್ ... ಜನರಿಗೆ 24 ಬೋರ್‌ವೆಲ್) ಸಹಾ ಹಾಕಿಸಿಕೊಡ ...ಯಿತು.

... ಹಳೆಯ ಜೀತದ ಪರಿಸ್ಥಿತಿ ಈಗ ಇಲ್ಲ. ಇಂದು ...ರಲ್ಲಿ ಬಹಳಷ್ಟು ಜನರು ಸ್ವತಂತ್ರವಾಗಿ ಜೀವನ ಸಾಗಿಸುತ್ತಿದ್ದಾರೆ. ಆ ಭೂಮಿಯಲ್ಲಿ ಬೆಳೆ ಬೆಳೆದುಕೊಳ್ಳುತ್ತಿದ್ದಾರೆ. ಆದರೆ ಈ ಸಾರಿ ಮಳೆ ಬಂದಿಲ್ಲ. ಶಂಭೂಕನಗರದ ಬೀದಿಯಲ್ಲಿ ನಾವು ಓಡಾಡುತ್ತಿದ್ದಾಗ, ಒಂದು ಎತ್ತಿನ ಗಾಡಿಯಲ್ಲಿ ಮುಸುಕಿನ ಜೋಳದ ತೆನೆ ಹಾಕಿಕೊಂಡು ಒಬ್ಬಾತ ಹೋಗುತ್ತಿದ್ದ. ಆ ಗಾಡಿಯನ್ನು ನಿಲ್ಲಿಸಿದ ಮಾಜಿ ಜೀತಗಾರ, ತೆನೆಯನ್ನು ಕೈಯ್ಯಲ್ಲಿ ಹಿಡಿದು ನಮಗೆ ವಿವರಿಸಿದರು. 'ಮಳೆ ಬಿದ್ದರೆ ಅಥವಾ ಇವರ ರೀತಿ ಬೋರ್‌ವೆಲ್ ನೀರಿದ್ದರೆ ಈ ರೀತಿ ತೆನೆ ಬರುತ್ತದೆ. ಇಲ್ಲದಿದ್ದರೆ ನೋಡಿ (ಅಲ್ಲೇ ಪಕ್ಕದಲ್ಲಿ ಹಾಕಿದ್ದ ರಾಶಿಯನ್ನು ತೋರಿಸಿ) ಆ ರೀತಿ ತೆನೆ ಆಗುತ್ತದೆ.' ನೀರು ಸಿಕ್ಕದ ಹೊಲದಲ್ಲಿ ಬೆಳೆದ ತೆನೆ, ಬೋರ್‌ವೆಲ್ ನೀರಾವರಿಯಲ್ಲಿ ಬೆಳೆದಿದ್ದ ತೆನೆಯಲ್ಲಿ ನಾಲ್ಕನೆ ಒಂದು ಭಾಗವಿತ್ತು.

'ಇವರಿಗ್ಯಾಕೆ ನೀರಿಲ್ಲ? ಎಲ್ಲರಿಗೂ ಬೋರ್‌ವೆಲ್ ಹಾಕಿಸಲಾಗಿತ್ತಲ್ಲವಾ?'

'ಇಲ್ಲ, ಸಹಕಾರ ತತ್ವದಡಿ 3 ಕುಟುಂಬಗಳಿಗೆ ಒಂದರಂತೆ ಬೋರ್‌ವೆಲ್ ಹಾಕಿಸಿತ್ತು. ಅದರಲ್ಲಿ ಕೆಲವು ಕೆಟ್ಟು ಹೋದವು ಕೆಟ್ಟಾಗ ಯಾರು ಬೋರ್‌ವೆಲ್ ರಿಪೇರಿ ಮಾಡಿಸಬೇಕು ಎಂಬುದರ ಬಗ್ಗೆ ಅವರಲ್ಲಿ ಒಮ್ಮತ ಬರಲಿಲ್ಲ. ಜೊತೆಗೆ ಯಾರ ಹೊಲದಲ್ಲಿ ಬೋರ್ ಕೊರೆಸಲಾಗಿತ್ತೋ, ಅವರು ಇದು ನಮ್ಮದೇ; ಮಿಕ್ಕವರಿಗೆ ಬಿಡಲ್ಲ ಎಂದು ಸಾಧಿಸಿದರು. ಹಾಗಾಗಿ ಈಗ ಕೆಲವರಿಗೆ ಮಾತ್ರ ಬೋರ್‌ವೆಲ್ ಇರುವುದು.'



'ಎಲ್ಲರಿಗೂ ಸೇರಿಸಿ ಈ ಬೋರ್‌ವೆಲ್ ಎಂದು ಮುಂಚೆಯೇ ಬರೆಸಿಕೊಂಡಿರಲಿಲ್ಲವಾ?'

'ಇಲ್ಲ, ಏಕೆಂದರೆ ಸರ್ಕಾರದಿಂದ ಸಾಲ ಸೌಲಭ್ಯ ಕೊಡಿಸಿ ಈ ಬೋರ್‌ವೆಲ್ ಹಾಕಿಸಬೇಕಿದ್ದರಿಂದ, ನಿಯಮದ ಪ್ರಕಾರ ಆ ಜಮೀನಿನ ಮಾಲೀಕನ ಹೆಸರಿನಲ್ಲೇ ಸಾಲ ತೆಗೆಸಬೇಕಿತ್ತು. ಸಾಮಾನ್ಯವಾಗಿ ಈ ಸಾಲವನ್ನು ನಮ್ಮವರು ಯಾರೂ ತೀರಿಸುವುದಿಲ್ಲ. ಇವರಿಗೆ ನೋಟೀಸೂ ಸಹಾ ಬಂದಿರಲಿಲ್ಲ. ಆದರೆ ಬೋರ್‌ವೆಲ್ ಇದ್ದ ಜಮೀನಿನವರೇ ಹೋಗಿ ತಮ್ಮ ಹೆಸರಿಗೆ ಸಾಲದ ನೋಟೀಸ್ ಕಳಿಸಿ ಎಂದು ಕೇಳಿದರು. ಏಕೆಂದರೆ ಆ ಮೂಲಕ ಬೋರ್‌ವೆಲ್‌ನ ಮೇಲೆ ತಮ್ಮ ಹಕ್ಕುದಾರಿಕೆಯನ್ನು ಅವರು ಸ್ಥಾಪಿಸಬೇಕಿತ್ತು.'

ಹಾಗಾಗಿ ಚಿಕ್ಕ ತೆನೆಗೂ, ದೊಡ್ಡ ತೆನೆಗೂ ಅಷ್ಟು ವ್ಯತ್ಯಾಸವಿತ್ತು.

ಶಂಭೂಕನಗರದವರೂ ಅಕ್ಕಪಕ್ಕದ ಉಳಿದೆಲ್ಲಾ ಹಳ್ಳಿಗಳ ರೈತರಂತೆಯೇ ಟ್ರ್ಯಾಕ್ಟರ್‌ನಲ್ಲೇ ಉಳುಮೆ ಮಾಡುತ್ತಾರೆ. ಆದರೆ ಈ ಊರಿನಲ್ಲಿ ಯಾರಿಗೂ ಟ್ರ್ಯಾಕ್ಟರ್ ಇಲ್ಲ. ಹಾಗೆಂದು ಇಲ್ಲಿನ ಯಾರೂ ಟ್ರ್ಯಾಕ್ಟರ್ ಹೊಂದಿರಲೇ ಇಲ್ಲ ಎಂದಲ್ಲ. ಒಬ್ಬರು ಸಾಲದಲ್ಲಿ ಟ್ರ್ಯಾಕ್ಟರ್ ತಂದಿದ್ದರು. ಇವರಿಗಿದ್ದಷ್ಟು ಜಮೀನಿಗೆ ಟ್ರ್ಯಾಕ್ಟರ್ ಸಾಲ ಕೊಡುವಂತಿಲ್ಲ. ಆದರೂ ಬ್ಯಾಂಕ್‌ನವರು ತಮ್ಮ ಟಾರ್ಗೆಟ್ ಮುಟ್ಟುವುದಕ್ಕೋಸ್ಕರ ನೀಡಿದ್ದರು. ನಂತರ ಇವರು ಸಾಲ ತೀರಿಸದೇ ಇದ್ದುದಕ್ಕೆ ಅದನ್ನು ವಾಪಸ್ ಸೀಝ್ ಮಾಡಿಕೊಂಡು ಹೋದರು.

ಕುಡಿಯುವ ನೀರು, ರಸ್ತೆ, ಶಾಲೆ ಇಲ್ಲಿಗೆ ಮಾಡಿಕೊಡಲಾಗಿದೆ. ಸ್ವಸಹಾಯ ಸಂಘಗಳು ಇವೆ.

ಎಲ್ಲರೂ ತಪ್ಪದೇ ಓಟನ್ನು ಹಾಕುತ್ತಾರೆ. ಎಂಎಲ್‌ಎ ಎಲೆಕ್ಷನ್‌ನಲ್ಲೂ ಸಹ. ಮೊದಲ ಮೂರು ಸ್ಥಾನದಲ್ಲಿ ಅವರುಗಳು ಜೀತಕ್ಕಿದ್ದ ಕುಟುಂಬದವರಲ್ಲೇ ಒಬ್ಬರು ಕ್ಯಾಂಡಿಡೇಟ್ ಆಗಿರುತ್ತಾರಾದ್ದರಿಂದ, ಅವರಲ್ಲೇ ಯಾರಾದರೂ ಒಬ್ಬರಿಗೆ ಹಾಕುತ್ತಾರೆ. ಅದರ ಬಗ್ಗೆ ಯಾರಿಗೂ ಬೇಸರವೇನಿಲ್ಲ.

ಲಂಕೇಶ್ 77 ವಿಶೇಷಾಂಕ

ಇದಿಷ್ಟು ನಿಮಗೆ ನಮ್ಮ ಚಿಕ್ಕಬಳ್ಳಾಪುರ ಜಿಲ್ಲಾ ತಂಡದ ವರದಿ. ಕರ್ನಾಟಕದ ಗ್ರಾಮೀಣ ಭಾಗದ ಜನಜೀವನದ ಅಧ್ಯಯನ ಮಾಡುವುದರ ಭಾಗವಾಗಿ ಹೋದಾಗ ಗೌರಿಬಿದನೂರು ತಾಲೂಕಿನ ಒಂದು ಹಳ್ಳಿಯಲ್ಲಿ ಕಂಡದ್ದು.

ಆದರೆ ಇಂದಿನ ಶಂಭೂಕನಗರ ಹಲವು ಪ್ರಶ್ನೆಗಳನ್ನು ಎತ್ತುತ್ತಿದೆ ಮತ್ತು ಈ ದೇಶದ ಇವತ್ತಿನ ಸ್ಥಿತಿಯ ಕುರಿತು ನಮ್ಮಲ್ಲಿನ ಕೆಲವು ಪ್ರಶ್ನೆಗಳಿಗೆ ಉತ್ತರವನ್ನೂ ನೀಡುತ್ತಿದೆ.

ಜೀತ ವಿಮುಕ್ತಿಗಾಗಿ ನಡೆದ ಹೋರಾಟ ಭೂಮಿ ಮತ್ತು ಮನೆಗಾಗಿ, ಭೂಮಿಯನ್ನು ಸೂಕ್ತವಾಗಿ ದುಡಿಸಿಕೊಳ್ಳಲು ಅಗತ್ಯವಿದ್ದ ನೀರನ್ನೂ ಒದಗಿಸಿತು. ಅದೇ ಹಳೆಯ ಹಳ್ಳಿಯಲ್ಲಿ ವಾಸಿಸುವುದು ಬೇಡವೆಂದು, ಜಮೀನಿಗೆ ಹೊಂದಿಕೊಂಡಂತೆಯೇ ಹೊಸ ಊರಿನ ನಿರ್ಮಾಣವಾಯಿತು. ಸಂಘಟನೆಯೇ ಸೂಚಿಸಿದ 'ಶಂಭೂಕನಗರ'ವೆಂಬ ಹೆಸರನ್ನೂ ಪಡೆದುಕೊಂಡಿತು. ನಾಗಸಂದ್ರ ಬಿಟ್ಟು ಇಲ್ಲಿಗೆ ಬಂದದ್ದರಿಂದ ಒಳ್ಳೆಯದಾಯಿತೇ; ಇಲ್ಲವೇ ಎಂಬ ಪ್ರಶ್ನೆಗೆ 'ಖಂಡಿತ ಒಳ್ಳೆಯದಾಗಿದೆ' ಎಂಬ ಉತ್ತರವನ್ನೇ ಅಲ್ಲಿನ ಹಿರಿಯರು-ಕಿರಿಯರು ಎಲ್ಲರೂ ಹೇಳಿದರು.

ಜೀತ ನಡೆಯುತ್ತಿದ್ದದ್ದು ಕೇವಲ ನಾಗಸಂದ್ರದಲ್ಲಿ ಮಾತ್ರವಲ್ಲ ಅಥವಾ ರೆಡ್ಡಿಗಳು ಮಾತ್ರ ಜೀತಕ್ಕೆ ಇರಿಸಿಕೊಳ್ಳುತ್ತಿದ್ದುದೂ ಅಲ್ಲ. ದಲಿತರಲ್ಲದೇ, ಅತೀ ಹಿಂದುಳಿದ ಜಾತಿಗಳಿಗೆ ಸೇರಿದ ಹಲವು ಭೂರಹಿತರೂ ಸಹ ಜೀತಕ್ಕಿರುತ್ತಿದ್ದರು. ಆದರೆ ಇಂದು ಹೆಚ್ಚುಕಡಿಮೆ ಯಾವ ಊರಿನಲ್ಲೂ ಜೀತವಿಲ್ಲ. 1985ರಲ್ಲಿ ನಡೆದ ಈ ಹೋರಾಟದ ತಕ್ಷಣದಲ್ಲೇ ಎಲ್ಲರೂ ಜೀತದಿಂದ ಹೊರಬರಲಿಲ್ಲ. ಈಗ್ಗೆ 10 ವರ್ಷಗಳ ಕೆಳಗಿನವರೆಗೂ ಈ ಭಾಗದಲ್ಲಿ ಜೀತಗಾರಿಕೆ ಇತ್ತು. ಯಾಕೆ ಜೀತ ಕಡಿಮೆಯಾಯಿತು ಎಂದು ಕೇಳಿದರೆ ಬಹುತೇಕ ಎಲ್ಲಾ ಕಡೆ ಕೇಳಿಬರುವ ಉತ್ತರಗಳು ಮೂರು: 'ಕಾನೂನು, ಅರಿವು ಮತ್ತು ಕೂಲಿಯಲ್ಲಿ ಹೆಚ್ಚಳ'. ಅರಿವು ಹೆಚ್ಚು ಮಾಡಿದ್ದು ಮತ್ತು ಇದ್ದ ಕಾನೂನು ಜಾರಿಯಾಗಲು ಚಳವಳಿಯೇ ಕಾರಣ. ಆದರೆ ಅದಕ್ಕಿಂತ ಹೆಚ್ಚಾಗಿ ಚಳವಳಿಯ ಪರೋಕ್ಷ ಒತ್ತಡದಿಂದ ಸರ್ಕಾರಗಳು ನೀಡಬೇಕಾಗಿ ಬಂದಿರುವ ರೇಷನ್‌ಕಾರ್ಡ್ ಹಾಗೂ ಇನ್ನಿತರ ಸೌಲಭ್ಯಗಳು, ಭೂರಹಿತರ ದಿನನಿತ್ಯದ ಬದುಕಿನ ಹೊಟ್ಟೆಪಾಡಿನ ಒತ್ತಡವನ್ನು ಕಡಿಮೆ ಮಾಡಿದೆ. ಬೆಳೆಯುತ್ತಿರುವ ಬೆಂಗಳೂರು ಮತ್ತು 'ಅಭಿವೃದ್ಧಿ'ಯು ಕೂಲಿದರವನ್ನು ಹೆಚ್ಚು ಮಾಡಿಸಿದೆ. ಜೀತಕ್ಕೆ ಹೋಗಲು ಹಸಿವೇ ಪ್ರಮುಖ ಕಾರಣವಾಗಿದ್ದೆಡೆ, ಹಸಿವು ಇವತ್ತಿನ ಸಮಸ್ಯೆ ಅಲ್ಲ ಎಂದು ಸ್ಪಷ್ಟವಾಗಿ ಹೇಳಬಹುದಾದ ಪ್ರಮಾಣಕ್ಕೆ ಕೂಲಿ ಸಿಗುತ್ತಿದೆ. ಆದರೆ ಈ ಕೂಲಿ ಹೆಚ್ಚಳವು ಕೂಲಿಕಾರರ ಜೀವನವನ್ನು ಯಾವ ಮಟ್ಟಕ್ಕೆ ಎತ್ತರಿಸಿದೆಯೆಂದರೆ, ಅದನ್ನು ಪ್ರಜಾಪ್ರಭುತ್ವದಲ್ಲಿ ಸಹನೀಯವಾದ ಜೀವನಮಟ್ಟ ಎಂದು ಹೇಳಲು ಯಾವ ಮಾನದಂಡಗಳಿಂದಲೂ ಸಾಧ್ಯವಿಲ್ಲ.

ಬೋರ್‌ವೆಲ್‌ಅನ್ನು ತಮ್ಮದಾಗಿಸಿಕೊಂಡಿರುವವರ ಜೀವನವೂ ಅತ್ಯುತ್ತಮ ಮಟ್ಟಕ್ಕೇನೂ ಏರಿಲ್ಲ. ಏಕೆಂದರೆ ಸರ್ಕಾರದ ಬೋರ್‌ವೆಲ್ ಹಾಕಿಸಿದಾಗ 180 ಅಡಿಗೆ ಸಿಕ್ಕಿದ್ದ ನೀರಿನಮಟ್ಟ ಈಗ 800 ಅಡಿಗಳಷ್ಟು ಕೆಳಗಿಳಿದಿದೆ. ಅದನ್ನು ಪದೇಪದೇ ರೀಬೋರ್ ಮಾಡಿಸುವುದು, ವೋಲ್ಟೇಜ್ ಏರುಪೇರಾದಾಗಲೆಲ್ಲಾ ಸುಟ್ಟು ಹೋಗುವ ಮೋಟರ್ ರೀವೈಂಡಿಂಗ್ ಮಾಡಿಸಲು ಬೇಕಾದ ಬಂಡವಾಳ 'ಜೀತ ವಿಮುಕ್ತ'ರ ಹತ್ತಿರ ಇಲ್ಲ. ಹಾಗಿದ್ದ ಮೇಲೆ ಬೋರ್‌ವೆಲ್‌ಅನ್ನು ಖಾಸಗಿ ಮಾಡಿಕೊಂಡಿದ್ದನ್ನು ಸಹಕಾರ ತತ್ವದ ವೈಫಲ್ಯವೆಂಬಂತೆ ನಾವು ಬಿಂಬಿಸಲು ಸಾಧ್ಯವಿಲ್ಲ. ಆದರೆ ಇಂತಿಪ್ಪ ಸ್ಥಿತಿಯಲ್ಲಿ ಇಂತಹ ಸಹಕಾರಿ ವ್ಯವಸ್ಥೆ ಎಷ್ಟರಮಟ್ಟಿಗೆ ಸಾಧ್ಯ ಎಂಬ ಪ್ರಶ್ನೆಯನ್ನಷ್ಟೇ ನಾವು ಕೇಳಿಕೊಳ್ಳಬೇಕಿದೆ. ಏಕೆಂದರೆ ಹಲವಾರು 'ಆದರ್ಶವಾದಿಗಳು' ಸಾಮೂಹಿಕ ಪುನರ್ವಸತಿಯ ವಿಚಾರ ಬಂದಾಗಲೆಲ್ಲಾ ದೊಡ್ಡ ಪ್ರಮಾಣದ ಭೂಮಿಯನ್ನು ಹಲವರಿಗೆ ನೀಡಿ, ಎಲ್ಲರೂ ಸಹಕಾರಿಯೊಂದನ್ನು ಸ್ಥಾಪಿಸಿಕೊಂಡು ಅದರಲ್ಲಿ ಬೇಸಾಯ ಮಾಡಲಿ ಎಂಬ ಪ್ರಸ್ತಾಪವನ್ನು ಇಡುತ್ತಾರೆ. ಶಂಭೂಕನಗರದ ಪ್ರಯೋಗ ಈ ನಿಟ್ಟಿನಲ್ಲಿ ನಮಗೊಂದು ಪಾಠವನ್ನು ಕಲಿಸಿಕೊಟ್ಟಿದೆ.

ನಮ್ಮ ಜೊತೆ ಬಂದಿದ್ದ ದಸಂಸದ ಗೆಳೆಯರೊಬ್ಬರು ಹೇಳಿದ ಒಂದು ಮಾತು ಹಲವು ಆಯಾಮಗಳನ್ನು ತೆರೆದಿಡುತ್ತದೆ -'ದಸಂಸದ ಸಾಧನೆ ಹಾಗೂ ವೈಫಲ್ಯ ಎರಡಕ್ಕೂ ಶಂಭೂಕನಗರ ಸಾಕ್ಷಿಯಾಗಿ ನಿಂತಿದೆ.'

ಇಂದೂ ರೆಡ್ಡಿಗಳ ಮನೆಯಲ್ಲಿ 'ಸಂಬಳಕ್ಕಿರುವವರು ಇದ್ದಾರಂತೆ'. ಹಿಂದೆ ತೆಲುಗಿನ ಸಂಬಳಕ್ಕೆ ಇದ್ದರು. ಈಗ ಕನ್ನಡದ ಸಂಬಳಕ್ಕೆ ಇದ್ದಾರೆ. (ತೆಲುಗಿನಲ್ಲಿ 'ಸಂಬಳಾನಿಕಿ ಉಂಡೇದಿ' ಅಂದರೆ ಜೀತಕ್ಕಿರುವುದು). ಈಗ ತಿಂಗಳಿಗೆ 1500ರಿಂದ 2500 ರೂ.ಗಳು ಮತ್ತು ಊಟ ಕೊಡುತ್ತಾರೆ. 1985ರ ತೆಲುಗಿನ ಸಂಬಳಕ್ಕೂ, 2011ರ ಕನ್ನಡದ

▶13

ಸಂಭ್ರಮ ಕ್ಷಣಿಕ ಕಾದಿದೆ ಸಿಬಿಐ ಕುಣಿಕೆ

ಗಣಿ ಲಂಚದ ಲೋಕಾಯುಕ್ತ ಎಫ್‌ಐಆರ್ ಅನ್ನು ಹೈಕೋರ್ಟ್ ರದ್ದು ಪಡಿಸಿದ ಮಾತ್ರಕ್ಕೆ ತನ್ನನ್ನು ಮತ್ತೆ ಮುಖ್ಯಮಂತ್ರಿ ಮಾಡಿ ಎನ್ನುವ ಯಡ್ಡಿಯ ಸಂಭ್ರಮದ ಆಯಸ್ಸು ಎಷ್ಟು ದಿನ?

ಮಾರ್ಚ್ ಏಳರ ಬುಧವಾರ ಹೈಕೋರ್ಟ್ ವಿಭಾಗೀಯ ಪೀಠ ಗಣಿ ಲಂಚದ ಎಫ್‌ಐಆರ್ ರದ್ದು ಪಡಿಸಿದ ಮರುಕ್ಷಣಕ್ಕೇ ಯಡ್ಡಿ ಬಂಟ ರೇಣುಕಾಚಾರ್ಯ ದೇವಸ್ಥಾನಕ್ಕೆ ನುಗ್ಗಿದ್ದೇ ವಿಶೇಷ ಪೂಜೆ ಸಲ್ಲಿಸುತ್ತಾನೆ. ವಸತಿ ಮಂತ್ರಿ ಸೋಮಣ್ಣ ನೇತೃತ್ವದಲ್ಲಿ 20 ಕ್ಕೂ ಅಧಿಕ ಬಿಜೆಪಿ ಶಾಸಕರು ಯಡ್ಡಿ ಮನೆಯಲ್ಲಿ ಕೇಕೆ ಹಾಕಿ ಪಟಾಕಿ ಸಿಡಿಸುತ್ತಾರೆ. ಗೃಹ ಸಚಿವ ಆರ್. ಅಶೋಕ್ ಪತ್ರಕರ್ತರೆದುರು ವಿಜಯ್ ನಗೆ ಬೀರಿ' ಬಿಜೆಪಿಗೆ ಇದೊಂದು ಒಳ್ಳೆಯ ಸುದ್ದಿ.....' ಎಂದು ಕುಪ್ಪಳಿಸುತ್ತಾರೆ. ಯಡ್ಡಿ ಆಪ್ತರ ದೆಹಲಿ ಯಾತ್ರೆಯ ಸಂಭ್ರಮ, ಮುಖ್ಯಮಂತ್ರಿ ಸದಾನಂದ ಗೌಡರನ್ನು ಕೆಳಗಿಸುವ ಹುನ್ನಾರ, ಹೈಕಮಾಂಡ್ ವರಿಷ್ಠರೆದುರು ಬಲಪ್ರದರ್ಶನದ ಸನ್ನಾಹ ಮತ್ತು ಸಿದ್ಧಗಂಗೆಯ ಶಿವಕುಮಾರ ಸ್ವಾಮಿಗಳನ್ನು ಮುಂದಿಟ್ಟು ಕೊಂಡು ಶುರುವಿಟ್ಟ ಕಾರ್ಯಾಚರಣೆಗಳೆಲ್ಲ ಇನ್ನೆಷ್ಟು ದಿನ?

ಮುಖ್ಯಮಂತ್ರಿ ಸದಾನಂದಗೌಡ ಯಾವುದೇ ಕಾರಣಕ್ಕೂ ಕೈಕಟ್ಟಿಕೂರುವ ಆಸಾಮಿಯಲ್ಲ, ಹಾಗೊಮ್ಮೆ ತೆಪ್ಪಗಾದರೂ ದೇವೇಗೌಡ ಮತ್ತು ಕುಮಾರಸ್ವಾಮಿ ಬಿಡಬೇಕಲ್ಲ?

ದೇವೇಗೌಡ, ಕುಮಾರಸ್ವಾಮಿ ಮತ್ತು ಸದಾನಂದ ಗೌಡರ ತ್ರಿಕೂಟದ ಷಡ್ಯಂತ್ರದ ಮುಂದೆ ಹೈಕೋರ್ಟ್ ನೀಡಿದ ಉಡುಗೊರೆಯ ಸಡಗರ ಹೆಚ್ಚು ದಿನ ಬಾಳಲು ಸಾಧ್ಯವೇ ಇಲ್ಲ ಎಂಬ ಕಟುಸತ್ಯ ಹುಂಬ ಯಡ್ಡಿಗಾಗಲಿ, ಅವರ ಆತುರದಡಿ ಭಟ್ಟಂಗಿಗಳಿಗಾಗಲಿ ಹೇಗೆ ಅರ್ಥ ವಾಗಲು ಸಾಧ್ಯ?

ದತ್ತಾ ಎತ್ತಂಗಡಿ

ಗಣಿ ಲಂಚದ ಕುರಿತಂತೆ ಲೋಕಾಯುಕ್ತರ ಎಫ್‌ಐಆರ್ ಅನ್ನು ಹೈಕೋರ್ಟ್ ರದ್ದು ಪಡಿಸಿದೆಯೆಂದ ಮಾತ್ರಕ್ಕೆ ಯಡ್ಡಿ ನಿರ್ದೋಷಿಯೆಂದಲ್ಲ, ತನ್ನ ಆರೋಪಿಗಳಿಗೆ ಸೂಕ್ತ ಸಾಕ್ಷ್ಯಾಧಾರ ಮತ್ತು ಕಾರಣಗಳನ್ನು ಲೋಕಾಯುಕ್ತ ಪೊಲೀಸರು ಒದಗಿಸುವಲ್ಲಿ ವಿಫಲರಾಗಿದ್ದಾರೆಂಬ ಏಕೈಕ ಕಾರಣ ಕೊಟ್ಟಿಯೇ ಕೋರ್ಟು ಎಫ್‌ಐಆರ್ ರದ್ದುಪಡಿಸಿದೆ ಯಷ್ಟೇ. ಹಿಂದಿನ ಲೋಕಾಯುಕ್ತ ಸಂತೋಷ್ ಹೆಗ್ಡೆಯವರು ತಮ್ಮ ನಿಷ್ಠಾವಂತ ಅರಣ್ಯಾಧಿಕಾರಿ ಯು.ವಿ. ಸಿಂಗ್ ಮಾಡಿದ ತನಿಖೆಯನ್ನೇ ಆಧರಿಸಿ ವರದಿ ಕೊಟ್ಟಿದ್ದರು. ಇದನ್ನೇ ಆಧಾರವಾಗಿಟ್ಟುಕೊಂಡು ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಕ್ರಿಮಿನಲ್ ಕೇಸು ದಾಖಲಿಸಲು ರಾಜ್ಯಪಾಲರ ಅಂಕಿತವು ಬಿದ್ದಿತ್ತು, ಇಷ್ಟಾದ ಮೇಲೆ ತನಿಖೆ ನಡೆಸಿ ತನ್ನ ಆರೋಪ ಸಾಬೀತು ಮಾಡಬೇಕಿತ್ತು, ಲೋಕಾಯುಕ್ತ ಏಕಾಏಕಿ ನಿಷ್ಕ್ರಿಯಗೊಂಡಿದ್ದು, ತಾನೇ ಮಾಡಿದ ಆರೋಪಗಳಿಗೆ ಸೂಕ್ತ ದಾಖಲೆ ಒದಗಿಸದೇ ಹೋದದ್ದು ಮತ್ತು ಸರ್ಕಾರಿ ವಕೀಲರು ಇದ್ದಕ್ಕಿದ್ದಂತೆ ಕೇಸಿನ ಬಗ್ಗೆ ನಿರಾಸಕ್ತಿ ವಹಿಸಿದ್ದು ಅಂತಿಮವಾಗಿ ಯಡ್ಡಿ ಪಾಲಿಗೆ ಲಾಭವಾಗಿತ್ತು.

ಎಫ್‌ಐಆರ್ ದಾಖಲಿಸಿದಾಗ ಇದ್ದ ಲೋಕಾಯುಕ್ತ ಅಧಿಕಾರಿಗಳೆಲ್ಲ ಒಬ್ಬೊಬ್ಬರಾಗಿ ಎತ್ತಂಗಡಿಯಾದರು. ರೂಪ್‌ಕುಮಾರ್ ದತ್ತಾ ಬದಲಿಗೆ ಎಡಿಜಿಪಿಯಾಗಿ ಎಚ್.ಎನ್. ಸತ್ಯನಾರಾಯಣರಾವ್ ಬಂದರು. ಡಿಐಜಿಯಾಗಿ ಯಡ್ಡಿಯ ಅರುಣ್ ಚಕ್ರವರ್ತಿಯವರನ್ನು ಪ್ರತಿಷ್ಠಾಪಿಸಲಾಯಿತು. ಎಸ್.ಪಿ.ಯಾಗಿದ್ದ ಮಧುಕರ್ ಶೆಟ್ಟಿರಂಥ ನಿಷ್ಠುರಿಯ ಜಾಗಕ್ಕೆ ಶಿವಮೊಗ್ಗ ಮೂಲದ ಆರೆಸ್ಸೆಸ್ ನಿಷ್ಠ ಶಿವಶಂಕರ್‌ರನ್ನು ನೇಮಿಸಲಾಯ್ತು, ಅಸಲಿಗೆ ಬಿಜೆಪಿ ಸರ್ಕಾರಕ್ಕೆ ಗಣಿಲಂಚದ ತನಿಖೆಯನ್ನು ಮುಂದುವರೆಸುವ ಆಸಕ್ತಿ, ಕಾಳಜಿ, ಛಲ ಯಾವುದೂ ಇರಲಿಲ್ಲ, ಜಿಂದಾಲ್, ಒಡೆತನ ಸೌತ್‌ವೆಸ್ಟ್ ಮೈನಿಂಗ್ ಕಂಪೆನಿಯ ಜೊತೆ ಯಡ್ಡಿ ಕುಟುಂಬ ನಡೆಸಿದ ಅಕ್ರಮಗಳ ಕುರಿತಂತೆ ಯುವಿ ಸಿಂಗ್ ಸೂಕ್ತ ಸಾಕ್ಷ್ಯಾಧಾರಗಳನ್ನು ನೀಡಿದ್ದರು.




ಜಿಂದಾಲ್ ಖದೀಮರಿಗೆ ಮೈನಿಂಗ್ ಪರವಾನಗಿ ನೀಡುವಲ್ಲಿ ಯಡ್ಡಿ ಪಾತ್ರಕ್ಕೆ ಪ್ರತಿಫಲವಾಗಿ ಪ್ರೇರಣಾ ಟ್ರಸ್ಟಿಗೆ ಬಂದ 10 ಕೋಟಿ ಮತ್ತು ಆನಂತರ ರಾಚೇನಹಳ್ಳಿ ಡಿನೋಟಿಫಿಕೇಶನ್ನಿಗೆ ಸಂಬಂಧಪಟ್ಟಂತೆ ಯಡ್ಡಿ ಮಗ ರಾಘು, ಅಳಿಯ ಸೋಹನ್‌ಕುಮಾರ್‌ಗೆ ಸಂದಾಯವಾದ 20 ಕೋಟಿ ಲಂಚದಲ್ಲಿ ಲೋಕಾಯುಕ್ತ ಪೊಲೀಸರು ಮನಸ್ಸು ಮಾಡಿದ್ದರೆ ಸಾಕಷ್ಟು ದಾಖಲೆಗಳೇ ಲಭ್ಯವಿದ್ದವು. ಆದರೆ ಸಂತೋಷ್ ಹೆಗ್ಡೆಯವರಂಥ ರೂಪ್‌ಕುಮಾರ್ ದತ್ತಾ ಮಧುಕರ್ ಶೆಟ್ಟಿರಂಥ ಛಲಗಾರರ್‍ಯಾರೂ ಲೋಕಾಯುಕ್ತದಲ್ಲಿರಲಿಲ್ಲ, ಇದರ ಫಲವಾಗಿ ಹೈಕೋರ್ಟಿನಲ್ಲಿ ಎಫ್‌ಐಆರ್ ರದ್ದುಪಡಿಸುವಂತೆ ಯಡ್ಡಿ ಸಲ್ಲಿಸಿದ ಅರ್ಜಿಗೆ ಬಲ ಬಂತು. ಅದು ಬುಧವಾರದ ಯಡ್ಡಿ ಪರ ತೀರ್ಪಿಗೆ ಕಾರಣವಾಯಿತು.


ಸಿಬಿಐ ಕುಣಿಕೆಯಲ್ಲಿ

ಇದೊಂದೇ ಕಾರಣವನ್ನು ಮುಂದಿಟ್ಟುಕೊಂಡು ಪಟಾಕಿ ಹಾರಿಸಿ ಕೇಕೆ ಹಾಕುವ ಯಡ್ಡಿ ಪಟಾಲಮ್ಮಿನ ಸಡಗರ ಮೇಲುನೋಟಕ್ಕೆ ವಿಜಯೋತ್ಸವವಾಗಿ ಕಂಡರೂ ಆಳದಲ್ಲಿರುವ ಅಪಾಯವೇ ಬೇರೆಯಿದೆ. ಈಗಾಗಲೇ ಇದೇ ಆರೋಪದ ಮೇಲೆ ಧಾರವಾಡದ ಸಮಾಜ ಪರಿವರ್ತನ ವೇದಿಕೆಯೊಂದು ಹಿರೇಮಠ್ ಸುಪ್ರೀಂ ಕೋರ್ಟ್‌ನಲ್ಲಿ ಕೇಸು ದಾಖಲಿಸಿದ್ದಾರೆ. ಅದರ ವಿಚಾರಣೆ ಯಿನ್ನೂ ಬಾಕಿಯಿದೆ. ಹಿರೇಮಠ್ ಸಲ್ಲಿಸಿದ ಅರ್ಜಿಯ ಆಧಾರದ ಮೇಲೆಯೇ ಸುಪ್ರೀಂಕೋರ್ಟ್ ಈ ಬಗ್ಗೆ ಸಿಬಿಐ ತನಿಖೆಯ ಅಗತ್ಯ ಕುರಿತು ವರದಿ ನೀಡುವಂತೆ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ) ಆದೇಶಿಸಿದೆ.

ಈಗೇನಾದರೂ ಸಿಇಸಿ ಈ ಬಗ್ಗೆ ಸಿಬಿಐ ತನಿಖೆಯ ಅನಿವಾರ್ಯತೆ ಕುರಿತು ಮನವಿ ಸಲ್ಲಿಸಿತೆಂದರೆ ಸುಪ್ರೀಂಕೋರ್ಟ್ ಇಡೀ ಪ್ರಕರಣವನ್ನು ಮತ್ತೆ ಸಿಬಿಐ ತನಿಖೆಗೆ ಆದೇಶಿಸಿಬಿಡುತ್ತದೆ. ಹೈಕೋರ್ಟ್ ಲೋಕಾಯುಕ್ತರ ಎಫ್‌ಐಆರ್ ರದ್ದುಪಡಿಸಿದ ಮಾತ್ರಕ್ಕೇ ಸಿಬಿಐ ತನಿಖೆ ಮಾಡಬಾರದೆಂದೇನೂ ಇಲ್ಲವಲ್ಲ, ಒಮ್ಮೆ ಸಿಬಿಐ ವಿಚಾರಣೆ ಕೈಕೊಂಡಿತೆಂದರೆ ಯಡ್ಡಿ, ಅಳಿಯ, ಮಕ್ಕಳು ಮತ್ತು ಜಿಂದಾಲ್ ಧಣಿಗಳೆಲ್ಲರೂ ಗಾಲಿರೆಡ್ಡಿಯಂತೆ ಜೈಲು ಪಾಲಾಗುವುದು ಶತಸ್ಸಿದ್ಧ.

ಕೇವಲ ಸುಪ್ರೀಂಕೋರ್ಟ್‌ನಲ್ಲಿರುವ ಹಿರೇಮಠ್ ಅರ್ಜಿ ಅಥವಾ ಸಿಇಸಿ ವರದಿಯೊಂದೇ ಯಡ್ಡಿಯ ಮುಂದಿರುವ ಆಪತ್ತಲ್ಲ, ಎಫ್‌ಐಆರ್ ರದ್ದು ತೀರ್ಪಿಗೆ ಕಾರಣವಾದ ಲೋಕಾಯುಕ್ತ ಪೊಲೀಸರ ನಿಷ್ಕ್ರಿಯತೆ ಸರ್ಕಾರಿ ಅಭಿಯೋಜಕರ ನಿರಾಸಕ್ತಿ ಮತ್ತು ಸರ್ಕಾರದ ಜಾಣ ನಿದ್ದೆಯ ಪಟ್ಟಿ ಮಾಡಿ ಸಿಬಿಐ ತನಿಖೆಗೆಯೊಂದೇ ಪರಿಹಾರವೆಂದು ಯಾರೇ ಸಾರ್ವಜನಿಕರು ಹೈಕೋರ್ಟಿಗೆ ಅರ್ಜಿ ಸಲ್ಲಿಸಿದರೆಂದರೆ ವಿಧಿಯಿಲ್ಲದೇ ಹೈಕೋರ್ಟ್ ವಿಚಾರಣೆ ಕೈಗೆತ್ತಿಕೊಳ್ಳಲೇಬೇಕು. ಆಗ ಲೋಕಾಯುಕ್ತ ಪೊಲೀಸರಷ್ಟೇ ಅಲ್ಲ ಸರ್ಕಾರ ಕೂಡ ಆರೋಪಿ ಸ್ಥಾನದಲ್ಲಿ ನಿಲ್ಲಬೇಕು. ಯಡ್ಡಿಯನ್ನು ಪೇಚಿಗೆ ಸಿಲುಕಿಸಲು ಇಷ್ಟೊಂದು ಅವಕಾಶ ವಿರುವಾಗ ಅದನ್ನು ದೇವೇಗೌಡರಾಗಲಿ, ಕುಮಾರಸ್ವಾಮಿಯಾಗಲಿ ಏಕೆ ಬಿಟ್ಟುಕೊಡುತ್ತಾರೆ?









ಭಾಷಾ ಹಾಕಿದ ಕೇಸಿನಲ್ಲಿ.....!

ಸದ್ಯ ಹೈಕೋರ್ಟ್ ವಲಯದಲ್ಲಿ ಹಬ್ಬಿರುವ ವದಂತಿಯೇನೆಂದರೆ ಈಗಾಗಲೇ ಎಫ್‌ಐಆರ್ ರದ್ಧತಿ ಮತ್ತು ಸರ್ಕಾರಿ ನಿಷ್ಕ್ರಿಯತೆಯ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲು ದೇವೇಗೌಡರ ಆದೇಶ ಜಾರಿಯಾಗಿದೆ!

ಇದಿಷ್ಟೇ ಅಲ್ಲದೆ ಯಡ್ಡಿ ವಿರುದ್ಧ ಸಿರಾಜಿನ್ ಭಾಷಾ ಸಲ್ಲಿಸಿರುವ ಒಂದು ಡಜನ್ ಕೇಸುಗಳ ಪೈಕಿ ರಾಚೇನಹಳ್ಳಿಯ ಡಿನೋಟಿಫಿಕೇಷನ್ ಕೇಸು ಪರೋಕ್ಷವಾಗಿ ಈಗ ರದ್ದಾದ ಎಫ್‌ಐಆರ್‌ನ ವಿಷಯದ ಜೊತೆಗೇ ಬೆಸೆದುಕೊಂಡಿದೆ. ಪ್ರೇರಣಾ ಟ್ರಸ್ಟಿಗೆ ಜಿಂದಾಲ್ ಧಣಿಗಳಿಂದ ಬಂದ ಹತ್ತುಕೋಟಿ ಮತ್ತು ಅಳಿಯ ಸೋಹನ್ ಮತ್ತು ಮಗ ರಾಘುನಿಂದ ಜಿಂದಾಲ್ ಖದೀಮರು ದುಬಾರಿ ರೇಟು ಕೊಟ್ಟು ಖರೀದಿಸಿದ 20 ಕೋಟಿಯ ಬಿಡಿಎ ಸೊತ್ತು-ಪರೋಕ್ಷವಾಗಿ ಗಣಿ ಲಂಚದ ಮತ್ತೊಂದು ಮುಖವನ್ನೇ ಬಿಚ್ಚಿಡುತ್ತವೆ.

ಇದು ಈಗ ರದ್ದಾದ ಎಫ್‌ಐಆರ್‌ನ ಮತ್ತೊಂದು ಮುಖವಷ್ಟೆ. ಇದರರ್ಥ ಗಣಿ ಅಕ್ರಮದ ಎಫ್‌ಐಆರ್ ರದ್ದಾಗಿದೆಯಾದರೂ ಅದರ ಲಂಚದ ಪ್ರಶ್ನೆಗಿನ್ನೂ ಜೀವವಿದೆ!

ಸಿರಾಜಿನ್ ಭಾಷಾ ಹಾಕಿದ ರಾಚೇನಹಳ್ಳಿ ಡಿನೋಟಿಫಿಕೇಷನ್ ಕೇಸಿನ ಲೋಕಾಯುಕ್ತ ಕೋರ್ಟಿನಲ್ಲಿ ಬಾಕಿಯಿದೆ ಎಂದಮೇಲೆ ಈಗ ಎಫ್‌ಐಆರ್ ರದ್ದಾಗಿರುವುದಕ್ಕೆ ಏನು ಅರ್ಥವಿದೆ? ಇದಲ್ಲದೆ ಕನಕಪುರದಲ್ಲಿ ಡಿಕೇಶಿ ನಡೆಸಿದ ಅರಣ್ಯ ಒತ್ತುವರಿ ಮತ್ತು ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಯಡ್ಡಿ ಎರಡನೇ ಆರೋಪಿ. ಯಡ್ಡಿ ಮಗಳು ಅರುಣಾದೇವಿ ಶಿವಮೊಗ್ಗದ ಪತ್ರಕರ್ತರ ಹೆಸರಲ್ಲಿ ಗೃಹಮಂಡಳಿ ಸೈಟು ಕಬಳಿಸಿದ್ದರಲ್ಲೂ ಯಡ್ಡಿಯ ಕೈವಾಡವಿದೆ. ಇದರ ಹೊರತಾಗಿ ಯಾರಾದರೂ ಸುಪ್ರೀಂಕೋರ್ಟಿಗೆ ಅರ್ಜಿ ಸಲ್ಲಿಸಿ ಗಣಿ ಲಂಚದಲ್ಲಿ ಯಡ್ಡಿ ಪಾತ್ರದ ತನಿಖೆ ಬಗ್ಗೆ ಲೋಕಾಯುಕ್ತ ಪೊಲೀಸರು ನಿಷ್ಕ್ರಿಯತೆಯನ್ನು ಪ್ರಶ್ನಿಸಿ ಸಿಬಿಐ ತನಿಖೆಗೆ ಒತ್ತಾಯಿಸಿದರೆಂದರೆ ಆಗಲೂ ಸುಪ್ರೀಂಕೋರ್ಟ್ ಸಿಬಿಐ ತನಿಖೆಗೆ ಆದೇಶಿಸಬಹುದು. ಈಗಾಗಲೇ ಲೋಕಾಯುಕ್ತ ಬೇರೆ ಎಫ್‌ಐಆರ್ ರದ್ಧತಿ ವಿರುದ್ಧ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಮುಂದಾಗಿದೆ.

ಹುಬ್ಬಳ್ಳಿ ಸಮಾವೇಶ

ಇದೆಲ್ಲ ಅಪಾಯ ಗೊತ್ತಿದ್ದೇ ಯಡ್ಡಿ ಸುಪ್ರೀಂಕೋರ್ಟ್ ಛಾಟಿ ಬೀಸುವ ಮೊದಲೇ ತನ್ನ ಉದ್ದೇಶ ಸಾಧಿಸಿಕೊಳ್ಳಲು ಹವಣಿಸುತ್ತಿದ್ದಾರೆ. ಈಗಾಗಲೇ ಹೈಕೋರ್ಟ್ ಆದೇಶದ ಪ್ರತಿಯ ಜೊತೆ ವಿಶೇಷ ಮನವಿಯೊಂದನ್ನು ಹೈಕಮಾಂಡ್ ವರಿಷ್ಠರಿಗೆ ರವಾನಿಸಿದ್ದಾರೆ. ಇದಕ್ಕೂ ಮಿಗಿಲಾಗಿ ಮಾರ್ಚ್ 11 ರ ಭಾನುವಾರ ಹುಬ್ಬಳ್ಳಿಯಲ್ಲಿ ನಡೆಯಲಿರುವ ಯಡ್ಡಿ ಬೆಂಬಲಿಗರ ಬೃಹತ್ ರ್‍ಯಾಲಿಯಲ್ಲಿ ಯಡ್ಡಿಯ ರಣಕಹಳೆ ಮೊಳಗಲಿ ಅದು ಸರಿಸುಮಾರು 3 ಲಕ್ಷ ಮಂದಿ ಬೆಂಬಲಿಗರನ್ನು ಕಲೆಹಾಕಿ ಸದಾನಂದ ಗೌಡರ ಕುರ್ಚಿ ಕದಲಿಸುವ ಗೆರಿಲ್ಲಾ ರಣತಂತ್ರ.

ಗಡ್ಕರಿ ಮೊನ್ನೆ ಚಿಂತನಮಂಥನಕ್ಕೆಂದು ಬೆಂಗಳೂರಿಗೆ ಬಂದಾಗಲೇ ಯಡಿಯೂರಪ್ಪ ತಮ್ಮ ಮೇಲಿನ ಆರೋಪಗಳಿಂದ ಮುಕ್ತರಾದರೆ ಮತ್ತೆ ಮುಖ್ಯಮಂತ್ರಿ ಮಾಡ್ತೀವಿ ಎಂಬರ್ಥದಲ್ಲಿ ಕೊಟ್ಟ ಗ್ರೀನ್‌ಸಿಗ್ನಲ್ ಈಗ ಯಡ್ಡಿ ಪಾಲಿನ ಪ್ರಬಲ ಅಸ್ತ್ರ. ಹೆಚ್ಚೆಂದರೆ ಹೈಕಮಾಂಡ್ ಚಿಕ್ಕಮಗಳೂರಿನ ಚುನಾವಣೆ ತನಕ ಕಾಯುವಂತೆ ಹೇಳಬಹುದು. ಪಂಚ ರಾಜ್ಯಗಳ ಚುನಾವಣೆ ಬೇರೆ ಮುಗಿದಿದೆ. ಯಡ್ಡಿ ಕಾರಣಕ್ಕೆ ಬಿಜೆಪಿಗೇನಾದರೂ ಹಿನ್ನಡೆಯಾಗುವುದೇ ಆಗಿದ್ದರೆ ಗೋವಾ ಮತ್ತು ಪಂಜಾಬ್‌ಗಳಲ್ಲಿ ಅಷ್ಟಿಷ್ಟು ಲಾಭವಾಗುತ್ತಿರಲಿಲ್ಲ, ಮಾರ್ಚ್ 18ಕ್ಕೆ ಚಿಕ್ಕಮಗಳೂರಿನ ಚುನಾವಣೆ ಮುಗಿಯಿತೆಂದರೆ ಹೈಕಮಾಂಡ್ ಮುಂದಿಟ್ಟ ಬಹುತೇಕ ನೆಪಗಳೆಲ್ಲ ಮುಗಿದಂತಾಗುತ್ತದೆ. ಅದಕ್ಕೂ ಮೊದಲೇ ಹುಬ್ಬಳ್ಳಿ ಸಮಾವೇಶವನ್ನು ಮುಗಿಸಿಕೊಂಡು ತನ್ನೆಲ್ಲಾ ಬೆಂಬಲಿಗ ಶಾಸಕರನ್ನು ಕಟ್ಟಿಕೊಂಡು ದೆಹಲಿಯ ವರಿಷ್ಠರೆದುರು ಪರೇಡು ಮಾಡಿ ಬರುವುದು ಯಡ್ಡಿಯ ಹುನ್ನಾರ.

ಇಷ್ಟೆಲ್ಲಾ ಮಾಡಿಯೂ ಹೈಕಮಾಂಡ್ ಜಗ್ಗದೇ ಹೋದರೆ ಮಾರ್ಚ್ ಅಂತ್ಯ ಅಥವಾ ಏಪ್ರಿಲ್ ಮೊದಲ ವಾರಕ್ಕೆ ಯಡ್ಡಿಯ ಅಂತಿಮ ದಾಳಿ ಗ್ಯಾರಂಟಿಯಂತೆ. ತಾವೇ ಶಾಸಕಾಂಗ ಪಕ್ಷದ ಸಭೆ ಕರೆಯುತ್ತಾರಂತೆ, ಎಲ್ಲಿ ಸದಾನಂದ ಗೌಡರ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಿ ತಾವೇ ಹೊಸ ನಾಯಕನಾಗಿ ಘೋಷಿಸಿಕೊಳ್ಳುವುದು ಯಡ್ಡಿಯ ಸದ್ಯದ ಉದ್ದೇಶ. ಇದಕ್ಕೆಂದು ಸೋಮಣ್ಣ, ಸವದಿ ಕಾರಜೋಳ, ಬೊಮ್ಮಾಯಿ, ಉದಾಸಿ, ನಿರಾಣಿ, ರೇಣುಕಾ ಮತ್ತು ಬೇಳೂರು ಈಗಾಗಲೇ ಕಾರ್ಯಾಚರಣೆಗಿಳಿದಾಗಿದೆ. ಇದಕ್ಕೆ ಪ್ರತಿಯಾಗಿ ಸದಾನಂದಗೌಡ, ಅನಂತ್ ಮತ್ತು ಈಶ್ವರಪ್ಪ ಕೂತು ಎರಡು ಸುತ್ತಿನ ಮಂತ್ರಾಲೋಚನೆ ನಡೆಸಿ ಆಗಿದೆ. ಹಾಗೊಮ್ಮೆ ಯಡ್ಡಿ ಪಟಾಲಂ ದುಸ್ಸಾಹಸಕ್ಕಿಳಿದಿದ್ದೇ ಆದಲ್ಲಿ ಜೆಡಿಎಸ್ ತನ್ನೊಂದಿಗೆ ಕೈ ಜೋಡಿಸುವಂತೆ ಒಳಮರಮ್ಮತ್ತಿಗೂ ಸದಾನಂದಗೌಡ ಕೈಯಿಟ್ಟಾಗಿದೆ.

ಮಾರ್ಚ್ ಮುಗಿಯುವ ಮುನ್ನ ಯಾರ ಪರ ಯಾರು ಕೈಕೊಡುವವರ್‍ಯಾರು? ಯಾರ ಹಣೆಬರಹವೇನು? ಎಲ್ಲವೂ ನಿಚ್ಚಳಗೊಂಡಿರುತ್ತೆ ಒಂದೇ ಒಂದು ರದ್ದಾದ ಎಫ್‌ಐಆರ್ ಏನೆಲ್ಲಾ ಏರುಪೇರಿಗೆ ಕಾರಣವಾಗುತ್ತೋ ಬಲ್ಲವರಾರು?

• ರಾ.ಸೋಮನಾಥ್


ಈಶ್ವರಪ್ಪ ಪೌರುಷದ ಅಸಲೀ ಮರ್ಮ!

ಏಕಾಏಕಿ ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪನವರಿಗೆ ಯಡ್ಡಿ ಮೇಲೆ ಅಭಿಮಾನ ಉಕ್ಕಲು ಕಾರಣವೇನು?

ಹೈಕೋರ್ಟಿನಲ್ಲಿ ಲೋಕಾಯುಕ್ತ ಕೇಸು, ರದ್ದಾದ ಮರುಕ್ಷಣಕ್ಕೇ ಚಿಕ್ಕಮಗಳೂರಿನಲ್ಲಿ ಪತ್ರಿಕಾಗೋಷ್ಠಿ ಕರೆದಿದ್ದೇ 'ಯಡಿಯೂರಪ್ಪ ಮುಖ್ಯಮಂತ್ರಿಯಾಗೋದು ಗ್ಯಾರಂಟಿ. ಆದಷ್ಟು ಬೇಗ ಅವರು ತಮ್ಮೆಲ್ಲಾ ಆರೋಪಗಳಿಂದ ಮುಕ್ತರಾಗಿ ಮತ್ತೆ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸುತ್ತಾರೆ....!' ಎಂದು ಒತ್ತಿಒತ್ತಿ ಮುಖ್ಯಮಂತ್ರಿ ಗಾದಿಯತ್ತಲೇ ಯಡ್ಡಿಯನ್ನು ದಬ್ಬುತ್ತಿದ್ದಾರೆ.

ಎಂಥವರಿಗೂ ಇದು ಯಡ್ಡಿ ಮೇಲಿನ ಈಶು ಕಾಳಜಿಯಂತೆ ಕಾಣಬಹುದು. ಆದರೆ ಒಳಮರ್ಮವೇ ಬೇರೆಯಿದೆ. ಹೇಗಿದ್ದರೂ ಹೈಕಮಾಂಡ್ ಸದಾನಂದ ಗೌಡರನ್ನು ಇಳಿಸಲು ಒಪ್ಪುವುದು ಕಷ್ಟ, ಹಾಗೊಂದು ವೇಳೆ ಯಡ್ಡಿಗಾಗಿ ಸದಾನಂದ ಗೌಡರನ್ನು ಕೆಳಗಿಸಿದ್ದೇ ಆದಲ್ಲಿ ಒಕ್ಕಲಿಗರು ತಿರುಗಿ ಬೀಳುವುದು ಶತಸ್ಸಿದ್ಧ. 'ಯಡ್ಡಿಯ ಉಳಿಕೆ ಕೇಸುಗಳಿನ್ನೂ ಇತ್ಯರ್ಥವಾಗಿಲ್ಲ, ಬಹುತೇಕ ಡಿನೋಟಿಫಿಕೇಷನ್ ಪ್ರಕರಣಗಳಿನ್ನೂ ಬಾಕಿಯಿರುವಾಗ ಮತ್ತೆ ಯಡ್ಡಿಯನ್ನು ಮುಖ್ಯಮಂತ್ರಿ ಮಾಡಿಬಿಟ್ಟರೆ ರಾಷ್ಟ್ರಮಟ್ಟದಲ್ಲಿ ಬಿಜೆಪಿಗೆ ಮತ್ತೆ ಮುಖಭಂಗ ತಪ್ಪಿದ್ದಲ್ಲ, ಇತ್ತ ಯಡ್ಡಿಯನ್ನೂ ಸಂತೈಸಿ ಪಕ್ಷದ ಬಿಕ್ಕಟ್ಟನ್ನೂ ತಣಿಸಿ ಸದಾನಂದ ಗೌಡರನ್ನೂ ಉಳಿಸಿಕೊಳ್ಳಬೇಕೆಂದರೆ ಹೈಕಮಾಂಡ್‌ಗಿರುವ ಏಕೈಕ ಮಾರ್ಗವೆಂದರೆ ಈಶ್ವರಪ್ಪನವರನ್ನು ಕೆಳಗಿಳಿಸಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಯಡ್ಡಿಯನ್ನು ತರುವುದು!

ಇದು ಗೊತ್ತಾಗಿಯೇ ಈಶ್ವರಪ್ಪ ಯಡ್ಡಿ ಮತ್ತೆ ಮುಖ್ಯಮಂತ್ರಿಯಾಗೋದು ಗ್ಯಾರಂಟಿ ಎಂದು ಕಾಗೆ ಹಾರಿಸುತ್ತಿದ್ದಾರೆ. ತನ್ನ ಸ್ಥಾನ ಉಳಿಸಿಕೊಳ್ಳಬೇಕು, ಯಡ್ಡಿ ರಾಜ್ಯಾಧ್ಯಕ್ಷ ಹುದ್ದೆಯತ್ತ ಕಣ್ಣು ಹಾಕದಂತೆ ದಿಕ್ಕು ತಪ್ಪಿಸಬೇಕು



ಮತ್ತು ಸದಾಗೌಡರ ವಿರುದ್ಧ ಯಡ್ಡಿಯ ಸಿಟ್ಟು ಮತ್ತಷ್ಟು ಹೆಚ್ಚಬೇಕು. ಹೀಗಾದರಷ್ಟೇ ತನಗೆ ಲಾಭ ಎಂಬುದು ಈಶ್ವರಪ್ಪಗೆ ಚೆನ್ನಾಗೆ ಗೊತ್ತಾಗಿದೆ. ಇಷ್ಟರಲ್ಲೇ ಹೈಕಮಾಂಡ್ ಯಡ್ಡಿಯನ್ನು ರಾಜ್ಯ ಬಿಜೆಪಿ ಅಧ್ಯಕ್ಷನನ್ನಾಗಿ ನೇಮಿಸುವುದೂ ನಿಚ್ಚಳಗೊಂಡಿದೆ. ಎಫ್‌ಐಆರ್ ರದ್ದಾದ ಖುಷಿಯಲ್ಲಿ ಯಡ್ಡಿ ಪಾಳೆ ಕೇಕೆ ಹಾಕುತ್ತಿದ್ದರೆ ಅದು ಈಶ್ವರಪ್ಪ ಪಾಲಿಗೆ ಹೊಟ್ಟೆಯಲ್ಲಿ ಖಾರ ಕಿವುಚಿದಂತಾಗುತ್ತಿದೆ.

ಪಾಪ ಈಶ್ವರಪ್ಪ ಹೊಟ್ಟೆ ಸಂಕಟ ಯಾರಿಗೆ ಅರ್ಥವಾಗಲು ಸಾಧ್ಯ?

ಮೋಂಬತ್ತಿಯ ಇನ್ನೊಂದು ತುದಿಗೂ ಕಿಡಿ ಹೊತ್ತುವ ಘಳಿಗೆ

ಕಳೆದ ಹತ್ತು ವರ್ಷಗಳ ನನ್ನ ಪತ್ರಕರ್ತನ ವೃತ್ತಿಯಲ್ಲಿ ನಡುವಿನ ಒಂದೆರಡು ವರ್ಷ ಹೊರತುಪಡಿಸಿ ಉಳಿದಂತೆ ಲಂಕೇಶ್ ಪತ್ರಿಕೆಯೊಂದಿಗೇ ಸಾಗಿಬಂದಿದ್ದೇನೆ. ಅದಕ್ಕೂ ಮುನ್ನ ಒಂದೂವರೆ ದಶಕಗಳ ಓದುಗನಾಗಿ ಲಂಕೇಶ್‌ನಿಂದ ನಾನು ಬೇಕಾದಷ್ಟು ಪಡೆದಿದ್ದೇನೆ. ನಾನು ಯಾವ ಪತ್ರಿಕೆಯಿಂದ ರೂಪುತಳೆದನೋ ಈಗ ಅದೇ ಪತ್ರಿಕೆಯ ಸಂಚಿಕೆಗಳನ್ನು ರೂಪಿಸುವ ಕೆಲಸದ ಹೊಣೆಯು ಬಂದಿದೆ.

ನನಗೆ ಖುಷಿ, ಆತಂಕ, ಎರಡೂ ಆಗಿದೆ. **Good Journalism Represents Life** ಎನ್ನುವ ಮಾತೊಂದಿದೆ. ಕಳೆದ ಮೂರು ದಶಕಗಳ ಲಂಕೇಶ್ ಬಹುತೇಕ ಅದೇ ಚೌಕಟ್ಟಿನಲ್ಲೇ ಸಾಗಿಬಂದಿದೆ. ಆದರೆ ಇವತ್ತಿನ ಜರ್ನಲಿಸಂಗೆ ಅದರಲ್ಲೂ ನಮ್ಮ ತರದ ಪತ್ರಿಕೆಗಳಿಗೆ ಹಣಕಾಸಿನ ವಿಪರೀತದ ಒತ್ತಡಗಳಿರುತ್ತವೆ. ಬದ್ಧತೆ ಇರದವರು ನಮ್ಮ ತರದ ತಂಡದ ಮೇಲೆ ಬರುವ ನಾನಾರೀತಿಯ ಒತ್ತಡಗಳನ್ನು ಭರಿಸಲಾಗರರು. ಈ ಸರ್ಕಸ್‌ನೊಂದಿಗೆ ಓದುಗರಿಗೆ ಇಷ್ಟವಾಗುವಂತೆ, ಅವರೆಲ್ಲಾ ಕಾದು ಹುಡುಕಿ ಪತ್ರಿಕೆ ಕೈಗೆತ್ತಿಕೊಳ್ಳುವಂತೆ ಪತ್ರಿಕೆ ರೂಪಿಸಬೇಕಾದ ಒತ್ತಡವಿದೆಯಲ್ಲ ಅದು ಅತೀ ಕಠಿಣವಾದದ್ದು.

ಇಪ್ಪತ್ತು ವರ್ಷ ಪತ್ರಕರ್ತರಾಗಿದ್ದ ಲಂಕೇಶ್ ಪತ್ರಕರ್ತನ ಕಸುಬಿನ ಬಗ್ಗೆ ಹೀಗೆ ಹೇಳುತ್ತಾರೆ:

"ತಾನು ಬರೆಯುವ ವಸ್ತು ನಿರೀಕ್ಷಿತವಾಗಿದ್ದರೂ, ನಿರ್ವಹಣೆಯ ಅನಿರೀಕ್ಷಿತ ದೃಷ್ಟಿಯಿಂದ ಓದುಗನನ್ನೂ ಚಕಿತಗೊಳಿಸಬೇಕಾಗುತ್ತದೆ. ಆಮೇಲೆ ಸಂಪಾದಕ ಓದುಗನ ಸಂಬಂಧ ಯಾಂತ್ರಿಕವಾಗುವ ಅಪಾಯದಿಂದ ತಪ್ಪಿಸಿಕೊಳ್ಳಲು ಸಂಪಾದಕನಾದವನು ಸಹಜವಾದ ವರಸೆಯಲ್ಲಿಯೇ ಓದುಗನನ್ನೂ ಬೆರಗುಗೊಳಿಸಬೇಕಾಗುತ್ತದೆ. ಎಚ್ಚರಿಸಬೇಕಾಗುತ್ತದೆ. ಮಂದಗೊಳಿಸಬೇಕಾಗುತ್ತದೆ. ತಾನು ಬರೆದದ್ದು ಓದುಗನಿಗೆ ಅಪ್ರಿಯವಾದರೂ ಸಹಿಸುವಂತಿದ್ದು ಅವನ ಮನ ಒಲಿಸಬೇಕಾಗುತ್ತದೆ. ಹಾಗೆಯೇ ಓದುಗ ಒಲಿಯದೆ ಆತ ಪತ್ರಿಕೆ ಓದುವುದನ್ನು ನಿಲ್ಲಿಸಿದರೂ ತಡೆದುಕೊಳ್ಳುವ ಚೈತನ್ಯ ಬೇಕಾಗುತ್ತದೆ."

-ಸೊಗಸಾದ ಮಾತುಗಳಿವು.

ಯಶಸ್ವಿ ಪತ್ರಿಕೋದ್ಯಮಕ್ಕೆ ಬೇಕಾದ ಕೆಲ ಸೂತ್ರಗಳು ಇದರಲ್ಲಿ ಧ್ವನಿಸುತ್ತದೆ. ಕಲಿಯುವುದು ಎಂದೆಂದಿಗೂ ಮುಗಿಯದ ಕಲೆ ಅಂತಲೂ ಅನಿಸುತ್ತದೆ.

ಈ ಏಳು ವರ್ಷಗಳಲ್ಲಿ ನಮ್ಮ ತಂಡವೂ ಸಾಕಷ್ಟು ಕಲಿತಿದೆ. ಅದರಲ್ಲಿ ಪೆಟ್ಟಿನ ಪಾಠ, ಚಪ್ಪಾಳೆಯ ಪ್ರೋತ್ಸಾಹಗಳೂ ಸೇರಿವೆ. ಇಲ್ಲೇ ನಿಮ್ಮೊಂದಿಗೆ ಇನ್ನೂ ಒಂದೆರಡು ವಿಚಾರಗಳನ್ನು ಹಂಚಿಕೊಳ್ಳಬೇಕು. ಕಳೆದ ಏಳು ವರ್ಷಗಳಲ್ಲಿ **364** ಲಂಕೇಶ್ ಸಂಚಿಕೆಗಳನ್ನು ನಮ್ಮ ತಂಡ ರೂಪಿಸಿ ನಿಮ್ಮ ಕೈಗಿಟ್ಟಿದೆ. **72** ಗೈಡ್ ಸಂಚಿಕೆಗಳು ಓದುಗರನ್ನು ತಲುಪಿವೆ. ಅವುಗಳಲ್ಲಿ ಅದ್ಭುತ ಯಶಸ್ವಿ ಸಂಚಿಕೆಗಳಲ್ಲದೆ ಇಂಡಿಯನ್ ಕ್ರಿಕೆಟ್ ಟೀಂ ಸೋಲುವಂತೆ ಅನಿರೀಕ್ಷಿತವಾಗಿ ಸೋತ ಸಂಚಿಕೆಗಳೂ ಇವೆ. ಓದುಗರ ಮೂಡ್ ಅರ್ಥಮಾಡಿಕೊಳ್ಳಲು ನಮಗೆ ಇದೆಲ್ಲಾ ಫೀಡ್ ಬ್ಯಾಕ್‌ಗಳು ಬೇಕಾಗುತ್ತವೆ. ಇದೆಲ್ಲಕ್ಕಿಂತ ಮುಖ್ಯವಾಗಿ ಹೇಳಬೇಕಾದ್ದು ಲಂಕೇಶ್ ಪ್ರಕಾಶನದ ಸಾಧನೆಯ ಬಗ್ಗೆ. ಬಹುಶಃ ನೀವಿದನ್ನು ನಂಬಲಾರಿರೇನೊ.


ಕಳೆದ ನಾಲ್ಕುವರೆ ವರ್ಷಗಳಲ್ಲಿ ನಮ್ಮ ಸಂಸ್ಥೆ ಪ್ರಕಟಿಸಿರುವ ಪುಸ್ತಕಗಳ ಸಂಖ್ಯೆ ಎಪ್ಪತ್ತೈದು. ಅಂದರೆ ಪ್ರತಿ ಎರಡು ತಿಂಗಳಿಗೆ ಸರಾಸರಿ ಮೂರು ಹೊಸ ಪುಸ್ತಕಗಳು! ಅಷ್ಟೇ ಅಲ್ಲ, ಇದೇ ಐವತ್ತು ತಿಂಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಸಂಖ್ಯೆಯಲ್ಲಿ ನಮ್ಮ ಸಂಸ್ಥೆಯ ಪುಸ್ತಕಗಳನ್ನು ಓದುಗರು ಕೊಂಡಿದ್ದಾರೆ.

ಇದರ ಸಂಪೂರ್ಣ ಕ್ರೆಡಿಟ್ ಸೇರಬೇಕಿರುವುದು ನಮ್ಮ ಕ್ಯಾಪ್ಟನ್ ಗೌರಿ, ಮ್ಯಾನೇಜರ್ ರಾಜು ಹಾಗೂ ಕಂಪ್ಯೂಟರ್ ಸೆಕ್ಷನ್‌ನ ಅರುಣ್, ಸತೀಶ್, ಕಿಶೋರ್, ಪ್ರಸಾದ್, ಲಕ್ಷ್ಮಣ ಮತ್ತು ನಾಗೇಶರಿಗೆ. ನಮ್ಮ ತಂಡದ ಶ್ರಮಕ್ಕೆ ಓದುಗರಿಂದ ಸಿಗುತ್ತಿರುವ ಮೆಚ್ಚುಗೆಯಿದು. ನಾವೇ ಗಮನಿಸಿರುವಂತೆ ಇಲ್ಲೊಂದು ವಿಚಿತ್ರ ಸಂಗತಿಯಿದೆ. ಒಂದು ಪುಸ್ತಕ ಪ್ರಕಟಿಸಿದಾಗ ನೂರಿನ್ನೂರು ರೂಪಾಯಿ ತೆತ್ತು ಖರೀದಿಸಲು ಹಿಂಜರಿಯದ ಓದುಗರು ಅದೇ ಹದಿನಾಲ್ಕು ರೂಪಾಯಿ ಕೊಟ್ಟು ಪತ್ರಿಕೆ ಖರೀದಿಸುವಾಗ ಬಹಳ ಡಿಮ್ಯಾಂಡಿಂಗ್ ಆಗಿರುತ್ತಾರೆ. ಪತ್ರಿಕೆಯ ಪ್ರತಿ ಪುಟದಲ್ಲಿ ತನಗೆ ಬೇಕಾದ್ದನ್ನೇನನ್ನೋ ನಿರೀಕ್ಷಿಸುತ್ತಿರುತ್ತಾರೆ. ಈ ಬೇಡಿಕೆ-ಪೂರೈಕೆಯ ನಡುವಿನ ತಂತು ಬರಿದೇ ಕಣ್ಣಿಗೆ ಕಾಣುವಂಥದ್ದಲ್ಲ. ಪರಿಚಿತರ ನಡುವಿನ ಗೆಳೆತನದ ಮಾಧುರ್ಯ ಆವಿಯಾಗದಂತೆ, ಒಡನಾಡಿಗಳ ಮಧ್ಯದ ಸೂಕ್ಷ್ಮತೆಗಳು ಕಮರದಂತೆ ಹೇಗೆ ಕಾಪಾಡಿಕೊಳ್ಳಬೇಕಾಗುತ್ತದೊ ಅದೇರೀತಿ ಓದುಗ- ಪತ್ರಿಕೆಯ ಸಂಬಂಧವೂ ಇರುತ್ತದೆ. ಅದರ ಜೀವಂತಿಕೆಯನ್ನು ಕಾಪಾಡಿಕೊಳ್ಳುವ ಹೆಚ್ಚಿನ ಜವಾಬ್ದಾರಿ ನಮ್ಮ ಮೇಲೇ ಇರುತ್ತದೆ. ನಾವೊಂದು ಸಾರಿ ಅಕಸ್ಮಾತಾಗಿ ಚೆಕ್ ಮಾಡಿದಾಗ ನಮಗೆ ಹತ್ತಿರದ ಕೆಲವು ಸ್ನೇಹಿತರೇ ರೆಗ್ಯುಲರ್ ಆಗಿ ಪತ್ರಿಕೆ ನೋಡುತ್ತಿಲ್ಲ ಎಂಬುದು ಗೊತ್ತಾಯಿತು. 'ಅರೇ ಇಸ್ಕಿ' ಅಂತಂದು ಕೊಂಡು ಕಾರಣ ಹುಡುಕಿದಾಗ ಅವರು ನಿತ್ಯ ಓಡಾಡುತ್ತಿದ್ದ ರಸ್ತೆಗಳಲ್ಲಿ ಇರುತ್ತಿದ್ದ ಸ್ಟಾಲ್‌ಗಳನ್ನು ಮೆಟ್ರೋ ರೈಲಿಗಾಗಿ ಕೆಡವಿ ಹಾಕಲಾಗಿತ್ತು. ಈ ಗೆಳೆಯರು ಹುಡುಕಿದರೂ ಪತ್ರಿಕೆ ಮಾರುವ ಸ್ಟಾಲ್‌ಗಳೇ ಸಿಗದಂತಾಯಿತು. ಇಂತಹವೇ ಚಿಕ್ಕಪುಟ್ಟ ಸಮಸ್ಯೆಗಳಿಂದ ಪತ್ರಿಕೆ ಮತ್ತವರ ಒಡನಾಟ ತಪ್ಪಿದ್ದರೂ ಅವರು ಪಕ್ಕದ ರಸ್ತೆಗೊ, ಬಡಾವಣೆಗೊ ಹೋಗಿ ಯಾಕೆ ಕೊಳ್ಳಬಾರದಿತ್ತೆಂಬ ಪ್ರಶ್ನೆ ಬಂತು. ಆಮೇಲೆ ನಿತ್ಯದ ಗಡಿಬಿಡಿಯಲ್ಲಿ ಕಳೆದುಹೋಗಿದ್ದ ಗೆಳೆಯರೆಲ್ಲಾ ಮತ್ತೆ ಪತ್ರಿಕೆಯ ತೆಕ್ಕೆಗೆ ಬರುವಂತಾಗಿ ಅದು ಬಗೆಹರಿಯಿತು.

ಒಂದು ಬರಹಕ್ಕೋ ಅಥವಾ ಪತ್ರಿಕೆಗೊ ತನ್ನದೇ ಆದ ಆತ್ಮ ಸೌಂದರ್ಯವಿದ್ದರೆ ಓದುಗ ಅದನ್ನು ಸುಲಭವಾಗಿ ಕಳೆದುಕೊಳ್ಳುವುದಿಲ್ಲ, ಕಳೆದ ಮೂರು ದಶಕಗಳ 'ಲಂಕೇಶ್' ಇದನ್ನು ಸಾಬೀತುಮಾಡುತ್ತಿದೆ. ಆಧುನಿಕ ಕರ್ನಾಟಕದ ಜನಪರ ಸಮುದಾಯದ ವೈಚಾರಿಕ ಪ್ರಜ್ಞೆ ಹಾಗೂ ವ್ಯಕ್ತಿತ್ವ ರೂಪಿಸಿದ ಸಾಧಕರ ಪೈಕಿ ಲಂಕೇಶ್ ಹಾಗೂ ಲಂಕೇಶ್ ಪತ್ರಿಕೆಯ ಪಾತ್ರ ಮಹತ್ವದ್ದು. ಪತ್ರಿಕೆಗೆ ಅಷ್ಟು ಪ್ರಭಾವವಿತ್ತಾದ್ದರಿಂದಲೇ ಕೆಟ್ಟ ಜನ ಅದರ ಕುತ್ತಿಗೆ ಹಿಸುಕಲು ಅನೇಕ ಸಾರಿ ಯತ್ನಿಸಿ ವಿಫಲರಾಗಿದ್ದಾರೆ. ಇಂತವರಲ್ಲಿ ಪ್ರಭಾವಿ ಪುರೋಹಿತರು, ಧಕಾಯಿತ ರಾಜಕಾರಣಿಗಳು, ಕೋಮುವಾದಿ ಫ್ಯಾಸಿಸ್ಟರೆಲ್ಲಾ ಸೇರಿದ್ದಾರೆ. ತೀರಾ ಇತ್ತೀಚಿನ ಅಂತಹ ಪಿತೂರಿಯನ್ನು ರಾಜ್ಯ ಬಿಜೆಪಿ ಸರ್ಕಾರದ ಒಳಾಡಳಿತ ವಿಭಾಗ ನಡೆಸಿದೆ. ಗೃಹ ಸಚಿವ ಅಶೋಕನ ಇಲಾಖೆ ಇದು. ಲಂಕೇಶ್ ವಾರ ಪತ್ರಿಕೆಯು ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುತ್ತಾ ಸಾರ್ವಜನಿಕ ಶಾಂತಿ ಭಂಗ ಮಾಡುತ್ತಿದೆ ಎಂಬ ಕುತರ್ಕ ಹೂಡಿ ಕೇಸ್ ಹಾಕಿ ಪತ್ರಿಕೆಯ ಕತ್ತು ಹಿಸುಕುವ ಸಿದ್ಧತೆ ನಡೆಯುತ್ತಿದೆ. ಈ ಪಿತೂರಿಯಲ್ಲಿ ಆರ್‌ಎಸ್‌ಎಸ್ ನಾಯಕರ ಕೈವಾಡವೂ ಇದ್ದಂತಿದೆ. ಅದಕ್ಕೆ ಸಂಬಂಧಿಸಿದ ಒಂದು ಪೋಲೀಸ್ ದಾಖಲೆ ನಮ್ಮ ಕೈಗೆ ಸಿಕ್ಕಿದೆ. ಇದೆಲ್ಲಾ ನಿಮ್ಮ ಗಮನದಲ್ಲಿರಲಿ ಎಂಬ ಕಾರಣಕ್ಕಷ್ಟೇ ಈ ವಿಚಾರವನ್ನು ಪ್ರಸ್ತಾಪಿಸಬೇಕಾಯಿತು.

ಈ ಸಂಚಿಕೆಯಿಂದ ನಾನು 'ಲಂಕೇಶ್' ವಾರ ಪತ್ರಿಕೆಯ ಸಂಪಾದಕನಾಗಿ ಇನ್ನೊಂದಿಷ್ಟು ಹೊಸ ಜವಾಬ್ದಾರಿಗಳಿಗೆ ಹೆಗಲು ನೀಡುತ್ತಿದ್ದೇನೆ.

ಕ್ಯಾಪ್ಟನ್ ಗೌರಿ ಪ್ರಧಾನ ಸಂಪಾದಕಿಯಾಗಿ- ಅವರೇ ಮಾಲೀಕರೂ ಆದಕಾರಣ- ತಮಗೆ ತಾವೇ ಪ್ರಮೋಷನ್ ಕೊಟ್ಟುಕೊಂಡು ಅವರೂ ಸಹ ಹೊಸ ಕೆಲಸಗಳಿಗೆ ಸಜ್ಜಾಗುತ್ತಿದ್ದಾರೆ. ಕಚೇರಿಯೊಳಗೆ ನಮ್ಮ ತಂಡ ಮಾಡಿಕೊಂಡಿರುವ ಪುಟ್ಟದೊಂದು **structural change** ಇದು. ಕಳೆದ ಏಳು ವರ್ಷಗಳಿಂದ ಗಾಣದೆತ್ತುಗಳಂತೆ ತಲೆ ಎತ್ತದೆ ಕೆಲಸ ಮಾಡುತ್ತಿದ್ದ, ಕುದುರೆ ಕಣ್ಣಿನ ಪಟ್ಟಿ ಕಟ್ಟಿಕೊಂಡಂತೆ ಅತ್ತಿತ್ತ ನೋಡದೆ ಮುಂದಕೆ, ಮುಂದೆ ಮುಂದಕ್ಕಷ್ಟೇ ನೋಡುತ್ತಾ ಭರದಿಂದ ಸಾಗುತ್ತಿದ್ದ ನಮ್ಮ ತಂಡವೀಗ ಕೊಂಚ ನಿಂತು ಎಲ್ಲವನ್ನು ಇನ್ನಷ್ಟು ವ್ಯವಸ್ಥಿತವಾಗಿ ಆರ್ಗನೈಸ್ ಮಾಡಿಕೊಳ್ಳಲು ಬಯಸಿದೆ. ಕೆಲಸ-ಜವಾಬ್ದಾರಿಗಳ ಮರುಹಂಚಿಕೆ ಅದರಲ್ಲೊಂದು. ಈಗಿನ ಬದಲಾವಣೆಯೂ ಅದರ ಭಾಗವಾಗಿದೆ.



ಹೊಸ ಶತ್ರುಗಳನ್ನು ಮಾಡಿಕೊಳ್ಳಲು ನಮಗೆ ಹಿಂಜರಿಕೆ ಇರದಿದ್ದರೂ ಹಳೆಯ ಶತ್ರುಗಳು ಸುಮ್ಮನೆ ಕುಳಿತಿರಲಾರರೆಂಬುದನ್ನು ಇದು ತೋರಿಸುತ್ತಿದೆ. ಕರ್ನಾಟಕದಲ್ಲೀಗ ಮೀಡಿಯಾ, ಲಾಯರ್ ಹಾಗೂ ಪೋಲೀಸರ ವರ್ತನೆಗಳಲ್ಲಿ ದುಡುಕು ಹಾಗೂ ಹೊಣೆಗೇಡಿತನವೇ ಎದ್ದು ಕಾಣುತ್ತಿದೆ. ಇಲ್ಲೀಗ ಹೊಣೆಗೇಡಿತನವೇ ಒಂದು ಟ್ರೆಂಡ್ ಆಗಿ ಹೋಗಿರುವಂತಿದೆ. ಅಂತಲ್ಲೂ ನಾವು ಒಂದು ಹೊಣೆಯರಿತ ತಂಡವಾಗಿ ಇನ್ನಷ್ಟು ಮುಂದಕ್ಕೆ ಸಾಗಿ ಹೋಗಲೇಬೇಕೆಂದು ನಿರ್ಧರಿಸಿಕೊಂಡಿದ್ದೇವೆ. ಓದುಗ ಮಿತ್ರರು, ಜನಪರ ಕಾಳಜಿಗಳುಳ್ಳವರು, ಸಂಘಟನೆಗಳು, ಬರಹಗಾರರೊಂದಿಗೆ ನಾವೂ ಜೊತೆಗೂಡಿ ಹೆಜ್ಜೆ ಹಾಕಲು ಬಯಸುತ್ತಿದ್ದೇವೆ.

ಕಳೆದ ಏಳು ವರ್ಷಗಳ ಕೆಲಸದ ದಣಿವು ನಮ್ಮನ್ನೆಲ್ಲಾ ಆಗೀಗ ಬಳಲಿಸುವುದುಂಟು. ಆದರೆ ಅದೆಂದೂ ನಮ್ಮನ್ನು ನಿರುತ್ಸಾಹಗೊಳಿಸಿಲ್ಲ, ನಮ್ಮ ತಂಡದ ವಿಶೇಷವೆಂದರೆ ನಮ್ಮಲ್ಲನೇಕರು ಪತ್ರಕರ್ತರಷ್ಟೇ ಅಲ್ಲ, ಆಕ್ಟಿವಿಸ್ಟ್‌ಗಳು, ಸಾಹಿತ್ಯದ ಒಲವಿರುವವರು, ರೈತಾಪಿ ಹಿನ್ನೆಲೆಯುಳ್ಳವರು, ಚಿಕ್ಕಪುಟ್ಟ ಬ್ಯುಸಿನೆಸ್ ನಡೆಸುವವರೆಲ್ಲಾ ಸೇರಿದ್ದಾರೆ. ಪತ್ರಿಕೋದ್ಯಮ ನಮ್ಮೆಲ್ಲರ ಮೊದಲ ಆದ್ಯತೆಯ ಕೆಲಸವಾಗಿದೆ. ಅದರಾಚೆಗೆ ಅವರವರ ಆಸಕ್ತಿಯ ಓದು, ಬರವಣಿಗೆಯ ಕೆಲಸಗಳಲ್ಲಿ ತೊಡಗಬೇಕೆಂದರೆ ಅದಕ್ಕೂ ಕೊಂಚ ಬೇರೆ ಸಮಯ ಹೊಂದಿಸಿಕೊಳ್ಳಬೇಕೆಂಬುದು ಅಲಿಖಿತ ನಿಯಮ. ಹಾಗಾಗಿಯೇ ನಮ್ಮ ಟೀಂನ ಬಹುತೇಕರಿಗೆ ನಿದ್ರೆಯ ಸವಲತ್ತು ಕಡಿಮೆ. ಒಂದು ಉದಾಹರಣೆಯ ಮೂಲಕ ಹೇಳಬೇಕೆಂದರೆ ಲಂಕೇಶ್ ಪ್ರಕಾಶನದಿಂದ ಕಳೆದ **50** ತಿಂಗಳುಗಳಲ್ಲಿ **75** ಪುಸ್ತಕ ಪ್ರಕಟಿಸಲಾಗಿದೆ ಎಂದೆನಲ್ಲ, ಈ ಪುಸ್ತಕಗಳ ಸರಾಸರಿ ಪುಟ ಸಂಖ್ಯೆ ನೂರಾಐವತ್ತು ಎಂದಿಟ್ಟುಕೊಳ್ಳಿ. ಅದು ಹತ್ತಿರತ್ತಿರ ಹನ್ನೆರಡು ಸಾವಿರ ಪುಟಗಳಷ್ಟಾಗುತ್ತವೆ. ಇವಿಷ್ಟನ್ನೂ ಪ್ರಧಾನ ಸಂಪಾದಕಿ ಗೌರಿ ಲಂಕೇಶ್ ಪ್ರೂಫ್ ನೋಡಿ ತಿದ್ದಿದ್ದಾರೆ. ಅಷ್ಟೇ ಅಲ್ಲ ಪ್ರತಿ ವಾರ ಲಂಕೇಶ್ ಕೆಲಸದ ಜೊತೆಜೊತೆಗೇ ಈ ತರದ ಕೆಲಸಗಳು ನಮ್ಮಲ್ಲಿ ನಿತ್ಯ ನಡೆಯುತ್ತಿರುತ್ತವೆ. ನಾವೆಲ್ಲ ಅದನ್ನು ಹೇಗೋ ನಿಭಾಯಿಸುತ್ತಿರುತ್ತೇವೆ.

ಕಲ್ಪಿಸಿಕೊಂಡರೆ ಹೇಗನಿಸುತ್ತದೆ ಗೊತ್ತೇ?

ಬದುಕೆಂಬ ಮೋಂಬತ್ತಿಯ ಎರಡೂ ತುದಿಗೆ ಬೆಂಕಿಕೊಟ್ಟು ನಿರಂತರ ಉರಿಸಿದಂತೆ!

-ಈಗ ಈ ಹೊಸ ಕೆಲಸದ ಹೊಣೆ ಹೊತ್ತುಕೊಳ್ಳುವ ಮೂಲಕ ನನ್ನ ಬದುಕೆಂಬ ಮೋಂಬತ್ತಿಯ ಎರಡನೇ ತುದಿಯು ಜ್ವಲಿಸಲಾರಂಭಿಸಿದೆ. ಇದೆಲ್ಲಕ್ಕೂ ಸಮಯ, ಎನರ್ಜಿ ಹಾಗೂ ಸಹನೆ ಅಪಾರವಾಗಿ ಬೇಕು ನಿಜ.

ಅದೆಲ್ಲಕ್ಕೂ ಮೀರಿದ್ದು ಬದ್ಧತೆ. ನಾವೆಲ್ಲ ಒಂದು ತಂಡವಾಗಿ ಇನ್ನಷ್ಟು ಬದ್ಧತೆಯೊಂದಿಗೆ ಇರುತ್ತೇವೆ. ಕರ್ನಾಟಕದ ನಿಜವಾದ ವಿರೋಧ ಪಕ್ಷವೆಂಬ ಹೆಗ್ಗಳಿಕೆಯ ಮಾತು 'ಲಂಕೇಶ್' ವಾರ ಪತ್ರಿಕೆಗೆ ದಕ್ಕಿರುವುದು ಅದರ ಸಾಮಾಜಿಕ ಬದ್ಧತೆ ಹಾಗೂ ನಿಷ್ಪಕ್ಷಪಾತ ನಿಲುವುಗಳಿಂದಾಗಿ. ಈ ಖಚಿತ ನಿಲುವುಗಳಿಲ್ಲದೇ ಹೋದರೆ ಕೋಮುವಾದಿ ಬಿಜೆಪಿಯ ಅನಾಚಾರಗಳ ಬಗ್ಗೆ ಮಾತ್ರ ಹೇಳಿ ಕಾಂಗ್ರೆಸ್‌ನವರ ಖದೀಮ ಜನವಿರೋಧಿ ನಿಲುವುಗಳು ಹಾಗೂ ಜೆಡಿಎಸ್‌ನ ಎಡಬಿಡಂಗಿತನಗಳನ್ನೆಲ್ಲಾ ಮರೆಮಾಚಬೇಕಾದ ಕೆಟ್ಟಸ್ಥಿತಿ ಎದುರಾಗಲಿಕ್ಕೂ ಸಾಕು.

'ಲಂಕೇಶ್' ಈ ಹಿಂದೆಯೂ ಆ ಹಂಗಿನಲ್ಲಿರಲಿಲ್ಲ, ಮುಂದೆಯೂ ಇರುವುದಿಲ್ಲ.

• ಪಾರ್ವತೀಶ

▸2 ಕಥೆ ಕದ್ದ ನಿರ್ಮಾಪಕ

ಇಂದು ನನ್ನ ಕಾದಂಬರಿಯನ್ನು ತನ್ನ ಕೃತಿಯೆಂದು ಬಿಂಬಿಸುತ್ತಿರುವ 'ಇರ್ಫಾನ್ ಚೊಕ್ಕಬೆಟ್ಟು' ಎಂಬವನಿಗೆ ಕನ್ನಡದಲ್ಲಿ ಸಾಹಿತ್ಯ ಕೃತಿ ಬಿಡಿ; ಒಂದು ಪತ್ರವನ್ನಾದರೂ ಸಮನಾಗಿ ಬರೆಯಲು ಸಾಧ್ಯವಿದೆಯೇ? ತ್ರಿಶೂರಿನ ಅಂತರಾಷ್ಟ್ರೀಯ ಚಲನ ಚಿತ್ರೋತ್ಸವದ ಸಂದರ್ಭದಲ್ಲಿ ಈ ವಂಚಕನು ಪತ್ರಿಕಾಗೋಷ್ಠಿ ಕರೆದು, "ಸಾರಾ ಅಬೂಬಕ್ಕರ್ ಅವರ 'ಚಂದ್ರಗಿರಿ ತೀರದಲ್ಲಿ' ಎಂಬ ಕಾದಂಬರಿಯನ್ನಾಧರಿಸಿ 'ಬ್ಯಾರಿ' ಎಂಬ ಹೆಸರಿನ ಸಿನಿಮಾ ನಿರ್ಮಿಸಿದ್ದೇನೆ" ಎಂದದ್ದು ಕೇರಳದ ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟವಾಗಿವೆ. ನನ್ನಿಂದ ಈ ಚಿತ್ರಕ್ಕೆ ಸಹಿ ದೊರೆಯದೆಂದಾದಾಗ ಈತನು ನನ್ನ ಮನೆಗೆ ಬಂದು ನನ್ನ ಕಾಲಿಗೆ ಬಿದ್ದು ಕ್ಷಮೆ ಕೇಳಿದ್ದಾನೆ. ಮಾತ್ರವಲ್ಲ, ಬ್ಯಾರಿ ಸಮಾಜದ ಪ್ರತಿಷ್ಠಿತ ಬಿಲ್ಡರ್ ಅಬ್ದುಲ್ ರಜಾಕ್ ಎಂಬುವವರನ್ನು ನನ್ನ ಬಳಿಗೆ ಕರೆದುಕೊಂಡು ಬಂದು ಅವರಿಂದಲೂ ನನ್ನ ಸಹಿಗಾಗಿ ಬೇಡಿಕೆ ಸಲ್ಲಿಸಿ ಕೊಂಡಿದ್ದಾನೆ. ಈಗ ಈತನು "ಸಾರಾ ಅಬೂಬಕ್ಕರ್ ನನ್ನಲ್ಲಿ ಹಣ ಕೇಳಿದರು. ನಾನು ಏನನ್ನೂ ಕೊಡದೆ ಸಿನಿಮಾ ಮಾಡಿದ್ದೇನೆ" ಎಂದು ಹೇಳಿಕೊಂಡು ತಿರುಗುತ್ತಿದ್ದಾನೆ! ಇಂತಹವನನ್ನು ಇತ್ತೀಚೆಗೆ ನಡೆದ ಬ್ಯಾರಿ ಸಮ್ಮೇಳನದಲ್ಲಿ ಸನ್ಮಾನಿಸಲಾಗಿದೆ! ಸಾಹಿತ್ಯ ಕೃತಿಯೊಂದನ್ನು ಕೃತಿಚೌರ್ಯ ಮಾಡಿ ಅದನ್ನು ತನ್ನ ಸ್ವಂತ ಕೃತಿಯೆಂದು ಸಾಧಿಸಿ ಅಟ್ಟಹಾಸ ಮೆರೆಯುತ್ತಿರುವ ಕಳ್ಳನೊಬ್ಬನನ್ನು ಅಕಾಡೆಮಿಯಂತಹ ಸಂಸ್ಥೆಯೊಂದು ವೇದಿಕೆಗೆ ಕರೆದು ಸನ್ಮಾನಿಸುವುದು ಬ್ಯಾರಿ ಸಮಾಜ ತಲುಪಿದ ಅಧಃಪತನದ ಪರಮಾವಧಿ ಎನ್ನಿಸುತ್ತದೆ.

ಬ್ಯಾರಿ ಅಕಾಡೆಮಿಯಲ್ಲಿ ಹೆಸರಾಂತ ಬ್ಯಾರಿ ಲೇಖಕರು ಯಾರೂ ಸದಸ್ಯರಾಗಿಲ್ಲ; ಮಾತ್ರವಲ್ಲ ಆಮಂತ್ರಣ ಪತ್ರಿಕೆಯಲ್ಲಿ ಇಂತಹ ಯಾವ ಲೇಖಕರ ಹೆಸರೂ ಇರಲಿಲ್ಲ ಈ ಸಮ್ಮೇಳನದಲ್ಲಿ ಯಾರನ್ನು ವೇದಿಕೆಗೆ ಕರೆದು ಸನ್ಮಾನಿಸಬೇಕಾಗಿತ್ತೊ ಅವರನ್ನು ಮೂಲೆಗೊತ್ತರಿಸಲಾಗಿದೆ. ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ವೇದಿಕೆಗಳಲ್ಲಿ ಮುಸ್ಲಿಮರು ಒಬ್ಬರೊ ಇಬ್ಬರೊ ಇರುತ್ತಾರೆ. ಬ್ಯಾರಿ ಅಕಾಡೆಮಿ ಸಮ್ಮೇಳನದಲ್ಲಿ ವೇದಿಕೆಯಲ್ಲಿದ್ದ ಹೆಚ್ಚಿನವರೂ ಬ್ಯಾರಿಯೇತರರಾದ ಹಿಂದೂಗಳಾಗಿದ್ದು ವಿಶೇಷವಾಗಿತ್ತು!

ಕೊನೆಯದಾಗಿ ಕೆಲವು ವಿಷಯಗಳು. ನಾನು ಮುಸ್ಲಿಮರಿಂದ ದೂರವಾಗಿದ್ದೇನೆ ಎಂಬುದು ಕೆಲವು ಮುಸ್ಲಿಂ ಲೇಖಕರಿಗೆ ನನ್ನ ಮೇಲಿರುವ ಆ ಕೋಪ. ಮುಸ್ಲಿಮರಿಂದ ದೂರವಾಗುವುದು ಅಥವಾ ಸಮೀಪವಾಗುವುದು ಎಂದರೇನು? ಇತ್ತೀಚೆಗೆ ಮಂಗಳೂರಿನ ಮುಸ್ಲಿಮರೆಲ್ಲರೂ ಮತಾಂಧ ಗುಂಪುಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದಾರೆ. ಕಾಲೇಜಿಗೆ ಅಥವಾ ಹೈಸ್ಕೂಲಿಗೆ ಹೊರಟ ಮುಸ್ಲಿಂ ಹೆಣ್ಣುಮಕ್ಕಳ ಹಿಂದೆ ಪತ್ತೇದಾರ ಸಿಐಡಿಗಳಂತೆ ತಿರುಗುವುದೇ ಇಂತಹ ಕೆಲವು ಯುವಕರ ದಂಧೆಯಾಗಿದೆ. ಈ ಹುಡುಗಿಯರು ಯಾರೊಡನಾದರೂ ಮಾತನಾಡಿದರೆ ಆಕೆಯ ಮನೆಗೆ ತಿಳಿಸಿ ಬೆದರಿಸಿ ಆಕೆಯ ಶಿಕ್ಷಣವನ್ನೇ ಕೊನೆಗೊಳಿಸುತ್ತಾರೆ. ಇಂತಹ ಜನರ ಬೋಧನೆಗನುಸಾರವಾಗಿ, ನನ್ನ ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆದುಕೊಳ್ಳಬೇಕು ಎಂಬುದು ಈ ಸಮೀಪವಾಗುವುದು ಎಂಬುದರ ಅರ್ಥವೇ?

ಪ್ರಜಾಸತ್ತೆ (ಡೆಮೊಕ್ರಸಿ) ಬೇಡ; ದೇವರ ರಾಜ್ಯದಲ್ಲಿ ದೇವರ ಆಡಳಿತ. ಜಾತ್ಯತೀತ ಬೇಡ; ಎಲ್ಲರೂ ಮುಸ್ಲಿಮರಾಗಿರುವ ದೇಶವಾಗಬೇಕು. ರಾಷ್ಟ್ರೀಯತೆ ಎಂದರೆ ಮುಸ್ಲಿಮರಿಗೆ ಮುಸ್ಲಿಮರು ಮಾತ್ರವಿರುವ ದೇಶ. (ಈಗ ಪಾಕಿಸ್ತಾನವಿದೆಯಲ್ಲ? ಹಾಗೆ!) ದೇವರ ರಾಜ್ಯದಲ್ಲಿ ದೇವರ ಆಡಳಿತ ಎಂದರೇ ಪುರೋಹಿತರ ಆಡಳಿತ. ಯಾರಾದರೂ ನಿಯಮವನ್ನು ಪ್ರಶ್ನಿಸಿದರೆ ಅವನ ತಲೆ ಕಡಿಯಲು ಆಜ್ಞೆ ಹೊರಡಬಹುದು! ಇದನ್ನು ವಹಾಬಿಸಂ ಎನ್ನಲಾಗಿದ್ದು ಅಬುಲ್ ಅಲಾ ಮೌದೂದಿ ಎಂಬವರು ಈ ತತ್ವ ಸಿದ್ಧಾಂತದಂತೆ ಇಂಡಿಯಾದಲ್ಲಿ ಜಮಾತೆ ಇಸ್ಲಾಮಿ ಎಂಬ ಸಂಘಟನೆಯನ್ನು ಸ್ಥಾಪಿಸಿದರು.

ಇದರಂತೆ ಮಹಿಳೆಯರು ಎರಡನೇ ದರ್ಜೆ ಪ್ರಜೆಯಂತಾಗಿ ತಲೆ ತುಂಬಾ, ಮೈ ತುಂಬಾ, ಕಣ್ಣು ಬಾಯಿ, ಮೂಗು ಮುಂತಾಗಿ ಎಲ್ಲೆಡೆಗಳಲ್ಲೂ ಕಪ್ಪು ಬಟ್ಟೆ ಸುತ್ತಿಕೊಂಡು ಮನುಷ್ಯಾಕೃತಿಯನ್ನೇ ಕಳೆದುಕೊಂಡು ಬದುಕುವುದೇ ಆಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮರೆತುಬಿಡಬೇಕು. ನಾನು ಇದನ್ನೆಲ್ಲ ಒಪ್ಪಿಕೊಂಡು ಈ ರೀತಿ ನನ್ನತನ ಕಳೆದುಕೊಂಡು ಮುಸ್ಲಿಮರ ಸಮೀಪ ಬರಬೇಕಾಗಿದೆಯೇ? ಅಂತಹ ಅಗತ್ಯ ನನಗಿಲ್ಲವೆನ್ನುತ್ತೇನೆ.

ಕೇರಳದಲ್ಲಿ ನಾನು ಮುಸ್ಲಿಮರಿಂದ ದೂರವಾಗಿದ್ದೇನೆಂದು ಈವರೆಗೂ ಯಾರೂ ಹೇಳಿಲ್ಲ, ಅಲ್ಲಿನವರಲ್ಲಿ ಹೆಚ್ಚಿನವರಿಗೆ ಮತಾಂಧತೆ ಇಲ್ಲ, ಅಲ್ಲಿನವರು ಮಾನವೀಯತೆ ಮತ್ತು ಜಾತ್ಯತೀತತೆಯನ್ನು ಮೈಗೂಡಿಸಿಕೊಂಡಿದ್ದಾರೆ. ಹೀಗಾಗಿಯೇ ಅಲ್ಲಿ ನನಗೆ ಯಾವಾಗಲೂ ಸ್ವಾಗತವಿದೆ ಎಂದಷ್ಟೇ ಹೇಳುತ್ತಿದ್ದೇನೆ.

• ಸಾರಾ ಅಬೂಬಕ್ಕರ್






2002 ರ ನಂತರ ನಮ್ಮ ನೈತಿಕ ಲೋಕವೇ ಬದಲಾಗಿಬಿಟ್ಟಿತು. ಗುಜರಾತ್ 2002 ನ್ನು ನೆನಪಿಸಿಕೊಳ್ಳುವುದು ಎಂದರೆ ನಮ್ಮ ಸುತ್ತಲಿನ ಅಸಮಾನತೆಯ ಜೊತೆ ಈ ಬದಲಾದ ನೈತಿಕ ಲೋಕವನ್ನು ಎದುರಿಸುವುದೂ ಆಗಿದೆ. ಇದರ ಒಂದು ಪ್ರಾಥಮಿಕ ಅವಶ್ಯಕತೆ ಎಂದರೆ, ಸದ್ಯಕ್ಕೆ ಜನರಿಗೆ ಅಪ್ರಿಯವಾಗಿರುವುದನ್ನು ಹೇಳಲು ಹಿಂದೆಮುಂದೆ ನೋಡದಿರುವುದು.

ಗುಜರಾತ್ 2002ರ ನೆನಪು

ಲಂಕೇಶ್ 77

• ಜಿ. ರಾಜಶೇಖರ



2002 ರ ಗುಜರಾತ್ ಹಿಂಸಾಕಾಂಡದ ದಿನಗಳಲ್ಲಿ ಆ ರಾಜ್ಯದ ವಡೋದರ ಜಿಲ್ಲೆಯ ತೇಜ್‌ಗರ್ ಎಂಬ ಆದಿವಾಸಿ ಹಳ್ಳಿಯ ಮುಸ್ಲಿಮರ ಅಂಗಡಿಗಳನ್ನು ಸುಟ್ಟು ಹಾಕಲಾಯಿತು. ಅಂಗಡಿಗಳಿಗೆ ಹಚ್ಚಿದ ಬೆಂಕಿಯಲ್ಲಿ ಅಲ್ಲೇ ಸಮೀಪದಲ್ಲಿದ್ದ ಒಂದು ಮುದಿ ಕಹಿ ಬೇವಿನ ಮರವೂ ಸುಟ್ಟು ಹೋಯಿತು. ಆಗ ಹಳ್ಳಿಯ ಆದಿವಾಸಿ ಕವಿ, ಅರ್ಜುನ್ ಬರೆದ ಕವಿತೆಯೊಂದರ ಸಾಲುಗಳು ಹೀಗಿವೆ:

"ನಿನ್ನ ನೆರಳಲ್ಲಿದ್ದ ಮುಸ್ಲಿಮ್ ಅಂಗಡಿಗಳನ್ನು
ಸುಟ್ಟಿದ್ದು ನೀನಲ್ಲ,
ನಿನ್ನ ಕೊಂಬೆರೆಂಬೆಗಳಿಗೆ ತಗಲಿದ ಬೆಂಕಿ
ಆ ಅಂಗಡಿಗಳನ್ನೂ ಸುಟ್ಟಿದ್ದು ಸಹ
ನಿನಗೆ ಗೊತ್ತಾಗಲಿಲ್ಲ,
ನೀನು ಉರಿಯುತ್ತಿದ್ದಾಗ ನಾನು ನೊಂದುಕೊಂಡೆ
ಆದರೆ ಬೆಂಕಿ ನಂದಿಸಲು ಮಾತ್ರ ಮುಂದಾಗಲಿಲ್ಲ
ನಾನು ಸುಮ್ಮನಿದ್ದೆ: ಥೇಟು ಗುಜರಾತ್‌ನ ಬುದ್ಧಿಜೀವಿಗಳ ಹಾಗೆ."

2002 ರ ಗುಜರಾತ್ ಹಿಂಸೆಯನ್ನು ಈಗ ನಾವು ಯಾಕೆ ನೆನಪು ಮಾಡಿಕೊಳ್ಳಬೇಕು? ಆ ಹಿಂಸೆಗೆ ನಮ್ಮ ಜವಾಬ್ದಾರಿ ಏನು ಎಂಬುದನ್ನು ಈ ಕವಿತೆ ಸೂಚ್ಯವಾಗಿ ಹೇಳುತ್ತದೆ. ಗುಜರಾತ್ 2002 ಕುರಿತ ನಮ್ಮ ನೆನಪು ಕೇವಲ ಶ್ರದ್ಧಾಂಜಲಿ ಅಷ್ಟೇ ಆದರೆ, ನಮಗೆ ನೆಮ್ಮದಿ ಅನಿಸಬಹುದು; ಆದರೆ ಅದರಿಂದ ಮೃತರ ಆತ್ಮಕ್ಕೆ ಶಾಂತಿ ದೊರೆಯಲಾರದು. ಅದು ಆ ಹಿಂಸಾಕಾಂಡದಲ್ಲಿ ಬದುಕಿ ಉಳಿದವರ ನೋವಿಗೆ ಉಪಶಮನವೂ ಅಲ್ಲ. ಮಾರ್ಕ್ಸ್‌ನ ಬಹು ಉಲ್ಲೇಖಿತ ಮಾತೊಂದಿದೆ: "ತತ್ವಜ್ಞಾನಿಗಳು ಈ ಜಗತ್ತನ್ನು ವಿಧವಿಧವಾಗಿ ವಿವರಿಸಿದ್ದಾರೆ, ಅಷ್ಟೆ. ಮುಖ್ಯವಾದ ಸಂಗತಿ ಎಂದರೆ ಈ ಜಗತ್ತನ್ನು ಬದಲಾಯಿಸಬೇಕಾಗಿದೆ." 2012 ರ ಈ ದಿನಗಳಲ್ಲಿ ನಾವು ಗುಜರಾತ್ 2002 ನ್ನು ನೆನಪಿಸಿಕೊಳ್ಳಬೇಕು. ಯಾಕೆಂದರೆ ನಾವು ಕರ್ನಾಟಕವನ್ನೂ ಭಾರತವನ್ನೂ ಬದಲಾಯಿಸಬೇಕಾಗಿದೆ. ಈ ದೃಷ್ಟಿಯಿಂದ ನೋಡಿದರೆ ಗುಜರಾತ್ 2002 ರ "ಸಂಸ್ಮರಣೆಗೆ"–ಅದನ್ನು ಹಾಗೆಂದು ಕರೆಯಬಹುದಾದರೆ–ಪ್ರಧಾನವಾಗಿ ಮೂರು ಕಾರಣಗಳಿವೆ:

1. ಗುಜರಾತ್‌ನಲ್ಲಿ ನಡೆದ ಹಿಂಸಾಚಾರವನ್ನು ಪ್ರತಿಭಟಿಸುವುದು ಹಾಗೂ ಆ ಹಿಂಸಾಚಾರವನ್ನು ಪ್ರಾಯೋಜಿಸಿದ ಸಂಘಟನೆಗಳಿಗೆ ಪ್ರತಿರೋಧ ವ್ಯಕ್ತಪಡಿಸುವುದು.

2. ಸಂತ್ರಸ್ತರಿಗೆ ಸೂಕ್ತ ಪರಿಹಾರ ಮತ್ತು ಅಪರಾಧಿಗಳಿಗೆ ಶಿಕ್ಷೆ ನೀಡಲು ಪ್ರಭುತ್ವವನ್ನೂ ನಾಗರಿಕ ಸಮಾಜವನ್ನೂ ಆಗ್ರಹಿಸುವುದು.

3. ಹಿಂಸೆ ಮತ್ತು ಅದರ ಹಿಂದಿರುವ ರಾಜಕೀಯ ಒತ್ತಾಸೆಗಳಿಂದ ಮುಕ್ತವಾದ ಸಮಾಜವೊಂದರ ನಿರ್ಮಾಣಕ್ಕೆ ಸಂಕಲ್ಪ ಮಾಡುವುದು.

ಗುಜರಾತ್ 2002 ರ ನೆನಪು, ಅದನ್ನು ಸೃಷ್ಟಿಸಿದ ಬಿಜೆಪಿ ಮತ್ತು ಸಂಘಪರಿವಾರದ ಫ್ಯಾಸಿಸ್ಟ್ ರಾಜಕೀಯಕ್ಕೆ ಸಂಘಟಿತ ಪ್ರತಿರೋಧವನ್ನು ಒಳಗೊಳ್ಳದಿದ್ದರೆ, ಆ ನೆನಪು, ಕವಿ ಅರ್ಜುನ್ ಹೇಳುವ ಗುಜರಾತ್‌ನ ಬುದ್ಧಿಜೀವಿಗಳ ವಿಷಾದವಷ್ಟೇ ಆಗುತ್ತದೆ. ಗುಜರಾತ್‌ನ ಬಹುತೇಕ ಬುದ್ಧಿಜೀವಿಗಳು 2002 ರ ಘಟನೆಗಳ ಬಗ್ಗೆ ವಿಷಾದ ಕೂಡ ವ್ಯಕ್ತಪಡಿಸಲಿಲ್ಲ, ಅವರು ಆ ಧೈರ್ಯ ತೋರಿಸಲಿಲ್ಲವೆ? ಅಥವಾ ಅವರ ಮೌನ ಗುಜರಾತ್‌ನ "ಜನಮನ"ದ





ಜೊತೆ ಅವರು ಹೊಂದಿರುವ ಒಮ್ಮತವನ್ನು ಸೂಚಿಸುತ್ತದೆಯೆ? ಫ್ಯಾಸಿಸಂ ಸದಾ ನಮ್ಮ ಮುಂದೆ ಒಡ್ಡುವ ಸವಾಲು ಇದು. ಗುಜರಾತ್ 2002 ನೆನಪಿಸಿಕೊಳ್ಳುವುದು ಎಂದರೆ ಅಲ್ಲಿ ಬುದ್ಧಿಜೀವಿಗಳ ಮೌನದ ಅರ್ಥವೇನು ಎಂದು ಯೋಚಿಸುವುದು.


2002 ರ ನಂತರ ಆ ರಾಜ್ಯದಲ್ಲಿ ನಡೆದ ಎಲ್ಲ ಚುನಾವಣೆಗಳಲ್ಲೂ ಬಿಜೆಪಿ ಭಾರೀ ಬಹುಮತದಿಂದ ಗೆದ್ದಿದೆ ಎಂಬ ಸತ್ಯ ನಾವು ಎದುರಿಸಲೇಬೇಕಾದ ಸವಾಲು. ಈ ಗೆಲುವು ನೈತಿಕವಾಗಿ ಎಂತಹ ಸೋಲು ಎಂದು ಮನಗಾಣಲು ನಾವು ಗುಜರಾತ್ 2002 ರ ಹಿಂಸೆಯ ಸ್ಥೂಲ ಅಂಕಿ ಅಂಶಗಳನ್ನಾದರೂ ಗಮನಿಸಬೇಕು. ಒಂದು ಕನಿಷ್ಠ ಅಂದಾಜಿನ ಪ್ರಕಾರ ಆ ಸೀರಿಯಲ್ ದುರಂತದಲ್ಲಿ ಹತ್ತಿರಹತ್ತಿರ 2000 ಜನ ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. 50000 ಜನರನ್ನು ಅಂದರೆ ಸುಮಾರು 10 ಸಾವಿರ ಕುಟುಂಬಗಳನ್ನು ಅವರ ಊರುಮನೆಗಳಿಂದ ಒಕ್ಕಲೆಬ್ಬಿಸಲಾಗಿದೆ. ಅವರು ಈಗ ತಮ್ಮದೇ ದೇಶದಲ್ಲಿ ನಿರಾಶ್ರಿತರು. ಗುಜರಾತ್ ಸರ್ಕಾರದ ಗುಪ್ತಚರ ವಿಭಾಗ ಸಂಗ್ರಹಿಸಿರುವ ಮಾಹಿತಿ ಪ್ರಕಾರವೇ, 2002ರ ಹಿಂಸಾಚಾರದಲ್ಲಿ 10427 ಮನೆಗಳು ಧ್ವಂಸವಾಗಿವೆ. 12588 ಅಂಗಡಿ ಮುಂಗಟ್ಟುಗಳು, 2724 ತಳ್ಳು ಕೈಗಾಡಿಗಳು ಮತ್ತು 3110 ವಾಹನಗಳನ್ನು ನಾಶಪಡಿಸಲಾಗಿದೆ. 1337 ಅಂಗಡಿಗಳು ಲೂಟಿಯಾಗಿವೆ. ಗುಜರಾತ್‌ನ ರಾಷ್ಟ್ರಕವಿ ಎಂದೇ ಭಾವಿಸಲಾಗಿರುವ ವಲೀ ಗುಜರಾತಿಯ ಹೆಸರಿನಲ್ಲಿರುವ ದರ್ಗಾವೂ ಸೇರಿದಂತೆ 302 ದರ್ಗಾ, 209 ಮಸೀದಿ, 30 ಮದ್ರಸ 18 ದೇವಸ್ಥಾನ ಮತ್ತು 3 ಚರ್ಚುಗಳನ್ನು ನಾಶ ಮಾಡಲಾಗಿದೆ. ಸಾವಿರಾರು ಜನ ಶಾಶ್ವತವಾಗಿ ಅಂಗವಿಕಲರಾಗಿದ್ದಾರೆ,. ಅತ್ಯಾಚಾರ ಮತ್ತು ಇತರ ದೈಹಿಕ ಹಿಂಸೆಗೆ ಒಳಗಾದ ಹೆಂಗಸರು ಹಾಗೂ ತಮ್ಮ ಕೃಷಿಭೂಮಿ, ಉದ್ಯೋಗ ಮತ್ತು ವ್ಯವಹಾರಗಳನ್ನು ಶಾಶ್ವತವಾಗಿ ಕಳೆದುಕೊಂಡು ಬೀದಿಪಾಲಾದವರ ಲೆಕ್ಕವನ್ನು ಯಾರೂ ಇಟ್ಟಂತೆ ಕಾಣುವುದಿಲ್ಲ, ಈ ಸಂಖ್ಯೆ "ಸಾವಿರಾರು" ಎಂಬ ದುಂಡಗಿನ ಸಂಖ್ಯೆಯಲ್ಲಿ ಹೇಳುವಷ್ಟು ದೊಡ್ಡದಿದೆ ಎಂಬುದರಲ್ಲಿ ಸಂದೇಹವಿಲ್ಲ,

ಈ ವಿವರಗಳು ಏನನ್ನು ಸೂಚಿಸುತ್ತವೆ? ಗುಜರಾತ್‌ನ ಮುಸ್ಲಿಮರ ಮೇಲೆ ನಡೆದ ಆಕ್ರಮಣ, ಅವರ ಧಾರ್ಮಿಕ ಶ್ರದ್ಧೆಯ ಮೇಲೆ ಮಾತ್ರ ನಡೆದಿರುವಂತಹದ್ದಲ್ಲ; ಮುಸ್ಲಿಮರ ದೇಹಗಳ ಮೇಲೆ ಮಾತಿಗೆ ಮೀರಿದ ಹಿಂಸಾಚಾರ ನಡೆದಿದೆ. ಅವರ ನೆನಪುಗಳ ಜೊತೆಗೆ, ಅವರ ಭೌತಿಕ ಜಗತ್ತನ್ನು ಕೂಡ ನಾಶಪಡಿಸಲಾಗಿದೆ. ಸಾಲದ್ದಕ್ಕೆ ಗುಜರಾತ್ ಸರ್ಕಾರ ತನ್ನ ಮುಸ್ಲಿಮ್ ಪ್ರಜೆಗಳ ಮೇಲೆ ಅಷ್ಟೆಲ್ಲ ಹಿಂಸೆ ನಡೆಸಿದ ನಂತರವೂ ಅವರನ್ನು ಮತ್ತೆಮತ್ತೆ ಹಂಗಿಸಿ ಅವಮಾನಿಸಿದೆ.


ಗುಜರಾತ್ 2002 ಎಂದರೆ 2002 ಫೆಬ್ರವರಿ 27 ರ ಗೋಧ್ರಾ ರೈಲು ನಿಲ್ದಾಣದ ದುರ್ಘಟನೆಯ ನಂತರ ರಾಜ್ಯದ ಮುಸ್ಲಿಮರ ಮೇಲೆ ನಡೆದ ಹಿಂಸಾಚಾರವಷ್ಟೇ ಅಲ್ಲ; ಅದು ಒಂದು ಮುಗಿದುಹೋದ ವಿದ್ಯಮಾನವೂ ಅಲ್ಲ, ರಾಜ್ಯದ ಮುಸ್ಲಿಮ್ ಸಂತ್ರಸ್ತರಿಗಂತೂ ಗುಜರಾತ್ 2002 ಇಂದಿಗೂ ಮುಂದುವರಿದಿರುವ ಒಂದು ಪ್ರಕ್ರಿಯೆ. ತಮ್ಮ ಮನೆ ಮಾರು, ಬೇಸಾಯ, ಉದ್ಯೋಗ–ಎಲ್ಲವನ್ನೂ ಕಳೆದುಕೊಂಡ ಮುಸ್ಲಿಮರಲ್ಲಿ ಹೆಚ್ಚಿನವರಿಗೆ ಗುಜರಾತ್ ಸರ್ಕಾರ ಕಿಂಚಿತ್ತೂ ಪರಿಹಾರ ಕೊಟ್ಟಿಲ್ಲ, ಪರಿಹಾರದ ಹೆಸರಿನಲ್ಲಿ ಅದು ಎಲ್ಲೋ ಕೆಲವರಿಗೆ ಕೊಟ್ಟ ಬಿಡಿಗಾಸಿನ ಉದ್ದೇಶವೂ ಮೊದಲೇ ನೊಂದವರನ್ನು ಇನ್ನಷ್ಟು ನೋಯಿಸುವುದಷ್ಟೇ ಆಗಿತ್ತು, ಈ ಕೃಪಣತೆ ಕೇವಲ ಗುಜರಾತ್ ಸರ್ಕಾರಕ್ಕೆ ಮಾತ್ರ ಸೀಮಿತವಾಗಿಲ್ಲ, 2001 ರ ಜನವರಿಯಲ್ಲಿ ಗುಜರಾತ್‌ನ ಕಛ್ ಪ್ರಾಂತ್ಯದಲ್ಲಿ ಸಂಭವಿಸಿದ ಭೂಕಂಪದ ನಂತರ, ಅಲ್ಲಿನ ಸಂತ್ರಸ್ತರ ನೆರವಿಗೆ ದೇಶದ ಸಾಮೂಹಿಕ ಸಂಘಟನೆಗಳು ಮಾತ್ರವಲ್ಲ, ಇಡೀ ನಾಗರಿಕ ಸಮಾಜವೇ ಧಾವಿಸಿತು. ಸ್ವಾತಂತ್ರ್ಯಾ ನಂತರ ದೇಶದಲ್ಲಿ ಸಂಭವಿಸಿದ ಪ್ರವಾಹ, ಭೂಕಂಪ ಇತ್ಯಾದಿ ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿಯೂ, ದೇಶದ ಧಾರ್ಮಿಕ ಸಂಸ್ಥೆಗಳು, ನಾಗರಿಕ ಸಮಾಜದ ಸಂಸ್ಥೆಗಳು, ಕಾರ್ಮಿಕ ಸಂಘಟನೆಗಳು, ಶೈಕ್ಷಣಿಕ ಸಂಸ್ಥೆಗಳು, ಪ್ರಮುಖ ವೃತ್ತ ಪತ್ರಿಕೆಗಳು ಪರಿಹಾರನಿಧಿಗಳನ್ನು ಪ್ರಾಯೋಜಿಸಿವೆ. ಆದರೆ ಗುಜರಾತ್‌ನ ಮಾನವ ನಿರ್ಮಿತ ದುರಂತದ ಸಂತ್ರಸ್ತರಿಗೆ ಮಾತ್ರ ಮುಸ್ಲಿಮ್ ಸಂಘಟನೆಗಳನ್ನು ಹೊರತುಪಡಿಸಿ ಉಳಿದ ಯಾವ ರಾಜಕೀಯ ಪಕ್ಷ, ಸಂಘಟನೆ, ಸಂಘಸಂಸ್ಥೆಗಳೂ ಚಿಕ್ಕಾಸಿನ ನೆರವು ಸಹ ಕೊಡಲಿಲ್ಲ, ಎಡಪಕ್ಷ ಮತ್ತು ಕಾರ್ಮಿಕ ಸಂಘಟನೆಗಳು ಗುಜರಾತ್‌ನ ಸಂತ್ರಸ್ತರಿಗೆ ನೆರವು ಸಂಗ್ರಹಿಸಲು ನಿರ್ಧರಿಸಿದ್ದರೆ ಅವುಗಳ ಸಾಮಾನ್ಯ ಸದಸ್ಯರೇ ಆ ಸಂಘಟನೆಗಳಿಂದ ಹೊರ ನಡೆಯುತ್ತಿದ್ದರು. ಈ ಕಠೋರ ಸತ್ಯ ದೇಶದ ಹಾಲಿ ಎಡ ಪ್ರಜಾಸತ್ತಾತ್ಮಕ ರಾಜಕೀಯದ ಮತ್ತು ತಥಾಕಥಿತ ಲಿಬರಲ್ ಸಂಸ್ಕೃತಿಯ ಒಂದು worst kept secret. ಗುಜರಾತ್‌ನ ಹಿಂಸೆಯ ದಿನಗಳಲ್ಲಿ ಅಹಮದಾಬಾದ್‌ನ ಸಬರ್ಮತಿ ಆಶ್ರಮ ಸಂತ್ರಸ್ತರಿಗೆ ಮುಚ್ಚಿತ್ತು, ದೇಶದ ಅತಿದೊಡ್ಡ ಮತ್ತು ಪ್ರತಿಷ್ಠಿತ ಹಾಲು ಉತ್ಪಾದಕರ ಸಹಕಾರಿ ಸಂಘಟನೆ ಗುಜರಾತ್ ಆನಂದ್‌ನಲ್ಲಿರುವ ಅಮುಲ್ ಅಲ್ಲಿನ ಮುಸ್ಲಿಮ ನಿರಾಶ್ರಿತ ಶಿಬಿರಕ್ಕೆ ಹಾಲು ಕೊಡಲು ನಿರಾಕರಿಸಿತು. ಗುಜರಾತ್‌ನ ಎಲ್ಲ 81 ನಿರಾಶ್ರಿತ ಶಿಬಿರಗಳನ್ನೂ ಜಮಾಯತ್ ಇಸ್ಲಾಂ, ಜಮಿಯಾತ್ ಉಲೇಮಾ ಇ ಹಿಂದ್ ಮುಂತಾದ ಇಸ್ಲಾಮಿಕ್ ಸಂಘಟನೆಗಳೇ ನಿರ್ವಹಿಸಿದವು. ಎಡಪಂಥೀಯರು ಅಂದರೆ ಅಫಿಷಿಯಲ್ ಎಡಪಂಥೀಯರು ಹಾಗೂ ಲಿಬರಲ್‌ಗಳು ಇಸ್ಲಾಮಿಕ್ ಮೂಲಭೂತವಾದದ ಬಗ್ಗೆ ಕಾಳಜಿಯಿಂದ ಮಾತಾಡುತ್ತಾರೆ. ಕೆಲವರಂತೂ ಇಸ್ಲಾಂನಲ್ಲೇ ಸಮಸ್ಯೆ ಇದೆ ಎನ್ನುವಷ್ಟು ಮುಂದೆ ಹೋಗುತ್ತಾರೆ. ಆದರೆ ಇವರು ಭಾರತದ ಸಾಮಾನ್ಯ ಮುಸ್ಲಿಮರ ಬದುಕಿಗೆ ಹಿಂದೂ ಕೋಮುವಾದಿಗಳಷ್ಟೇ ಪರಕೀಯರೂ, 'ಅನ್ಯ'ರೂ ಆಗಿದ್ದಾರೆ. ಈ ದೇಶದ ಮುಸ್ಲಿಮರು ದೇವರ ನ್ಯಾಯ ಮತ್ತು ಕರುಣೆಯ ಬದಲು ಮನುಷ್ಯರ ನ್ಯಾಯ ಮತ್ತು ಸಹಾನುಭೂತಿಗಳಲ್ಲಿ ಯಾಕಾದರೂ ವಿಶ್ವಾಸವಿಡಬೇಕು ಎಂಬ ಸರಳ ವಿಚಾರವೂ ಇವರಿಗೆ ಹೊಳೆಯುವುದಿಲ್ಲ.




ಜಯಲಲಿತಾ




ಕುಮಾರಸ್ವಾಮಿ



ದೇವೇಗೌಡ



ರಾಮಕೃಷ್ಣ



ಮಮತಾ

ನರಮೇಧದ ಹೆಣಗಳ ಸಮ್ಮುಖದಲ್ಲೇ ಬಿಜೆಪಿ ಜೊತೆ ಉಂಡವರು


ನಾಗರಿಕ ಸಮಾಜದ ಸೆಕ್ಯುಲರ್ ಸಂಘಟನೆಗಳು ಮಾತ್ರವಲ್ಲ, ಸೋಕಾಲ್ಡ್ ಸೆಕ್ಯುಲರ್ ರಾಜಕೀಯ ಪಕ್ಷಗಳು ಸಹ ಗುಜರಾತ್ 2002 ರ ನಂತರ ಒಂದಲ್ಲ ಒಂದು ಸಂದರ್ಭದಲ್ಲಿ ಬಿಜೆಪಿ ಜೊತೆ ಕೈಜೋಡಿಸಿವೆ. ಜಯಲಲಿತಾ, ಅವರ ಆಜನ್ಮವೈರಿ ಕರುಣಾನಿಧಿ ಕರ್ನಾಟಕದ ಮೌಲ್ಯಾಧಾರಿತ ರಾಜಕಾರಣಿ ರಾಮಕೃಷ್ಣ ಹೆಗಡೆ, ಅವರ ವೈರಿ ದೇವೇಗೌಡ ಮತ್ತು ಅವರ ಮಕ್ಕಳು ಚಂದ್ರಬಾಬು ನಾಯ್ಡು ನಿತೀಶ್ ಕುಮಾರ್, ಶರದ್ ಯಾದವ್, ಜಾರ್ಜ್ ಫೆರ್ನಾಂಡಿಸ್, ಮಮತಾ ಬ್ಯಾನರ್ಜಿ, ನವೀನ್ ಪಟ್ನಾಯಕ್ ಎಲ್ಲರೂ ಗುಜರಾತ್ ನರಮೇಧದ ಹೆಣಗಳ ಸಮ್ಮುಖದಲ್ಲೇ ಬಿಜೆಪಿ ಜೊತೆ ಉಂಡವರು. ಗುಜರಾತ್ 2002 ರ ನಂತರ ನಮ್ಮ ನೈತಿಕ ಲೋಕವೇ ಬದಲಾಗಿಬಿಟ್ಟಿತು. ಗುಜರಾತ್ 2002 ನ್ನು ನೆನಪಿಸಿಕೊಳ್ಳುವುದು ಎಂದರೆ ನಮ್ಮ ಸುತ್ತಲಿನ ಅಸಮಾನತೆಯ ಜೊತೆ ಈ ಬದಲಾದ ನೈತಿಕ ಲೋಕವನ್ನು ಎದುರಿಸುವುದೂ ಆಗಿದೆ. ಇದರ ಒಂದು ಪ್ರಾಥಮಿಕ ಅವಶ್ಯಕತೆ ಎಂದರೆ, ಸದ್ಯಕ್ಕೆ ಜನರಿಗೆ ಅಪ್ರಿಯವಾಗಿರುವುದನ್ನು ಹೇಳಲು ಹಿಂದೆಮುಂದೆ ನೋಡದಿರುವುದು.


ಹಿಂಸೆಯ ತೀವ್ರತೆ, ವ್ಯಾಪಕತೆ ಮತ್ತು ರಾಜಕೀಯ ಪ್ರಾಯೋಜಕತ್ವಗಳಲ್ಲಿ ಗುಜರಾತ್ 2002 ರ ಜೊತೆ ಹೋಲಿಸಬಹುದಾದ ಇತರ ಹಿಂಸಾಕಾಂಡಗಳೆಂದರೆ:


* 1984 ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ದೇಹಾಂತ್ಯದ ನಂತರ ದೆಹಲಿ ಮತ್ತು ಇತರ ಕಡೆಗಳಲ್ಲಿ ನಡೆದ ಸಿಖ್ ನರಮೇಧ.



* ಬಾಬರಿ ಮಸೀದಿ ಧ್ವಂಸದ ನಂತರ 1992 ಡಿಸೆಂಬರ್ ಮತ್ತು 93

...ದರಿ ತಿಂಗಳುಗಳಲ್ಲಿ ಮುಂಬಯಿಯಲ್ಲಿ ...ಮರನ್ನು ಗುರಿಯಾಗಿಸಿಕೊಂಡು ... ಹಿಂಸಾಚಾರ.
... 2008 ರಲ್ಲಿ ಒರಿಸ್ಸಾದ ...ಮಾಲ್ ಜಿಲ್ಲೆಯ ಆದಿವಾಸಿ ಕ್ರೈಸ್ತರ ...ರಿ ಹಲವು ತಿಂಗಳುಗಳ ಕಾಲ ... ಹಿಂಸಾಚಾರ.
...ಬಹುಶಃ ಈ ಕಪ್ಪುಪಟ್ಟಿಗೆ ...ಾಜನ್ಮಭೂಮಿ ಚಳವಳಿಯ ...ವಾಗಿ ನಡೆದ ಅಡ್ವಾಣಿ ...ಯಾತ್ರೆಯ ಹಾದಿಯುದ್ದಕ್ಕೂ ನಡೆದ ...ಹತ್ಯೆಯನ್ನೂ, ಬಿಹಾರದ ಭಾಗಲ್ಪುರ ...ಕಾಂಡವನ್ನೂ ಸೇರಿಸಿಕೊಳ್ಳಬೇಕು. ...4 ರ ದೆಹಲಿಯ ಸಿಖ್ ...ೀಧವನ್ನು ಹೊರತುಪಡಿಸಿ ಉಳಿದ ...ವನ್ನೂ ನಡೆಸಿದ್ದು ಬಿಜೆಪಿ ಮತ್ತು ಸಂಘಪರಿವಾರ ಎಂಬುದನ್ನು ಅಗತ್ಯ ಗಮನಿಸಬೇಕು.
...ಗುಜರಾತ್ 2002 ಪ್ರತಿನಿಧಿಸುವ ...ಮುಹಿಂಸೆ ಮತ್ತು ಸಂವಿಧಾನಾತ್ಮಕ ...ಗಳ ಮೇಲಿನ ಆಕ್ರಮಣ, 2002 ... ಬಹಳ ಮೊದಲೇ ...ಂಭವಾಗಿದೆ. 1992-93 ರ ...ಬಯಿ ಹಿಂಸಾಚಾರದ ಹಾಗೆ ...ರಾತ್ 2002 ಕೂಡ ಬಿಜೆಪಿಯ ...ಜನ್ಮಭೂಮಿ ಚಳವಳಿ ಜೊತೆಗೆ ...ಸಂಬಂಧ ಹೊಂದಿದೆ. ಕಳೆದ ...ಾನದ 80 ಮತ್ತು 90 ರ ...ದಲ್ಲೇ ಮುಸ್ಲಿಮ್ ಸಮುದಾಯದ ...ದ್ಧ ದ್ವೇಷ ಪ್ರಚೋದನೆಯ ಬಿಜೆಪಿ ...ಯಾನ ನಡೆದಿತ್ತು.
...ರಾತ್‌ನಲ್ಲಂತೂ ಮುಸ್ಲಿಮರ ...ಡಿಗಳು, ಟೈಲರಿಂಗ್ ಶಾಪುಗಳು, ...ಫೋನು ಬೂತುಗಳು ...ತಾದವುಗಳಿಂದ ಹಿಂದೂಗಳು ...ವಿರಬೇಕು; ವಿಶೇಷವಾಗಿ ಹಿಂದೂ ...ವತಿಯರು ಎಚ್ಚರ ವಹಿಸಬೇಕು ... ಬೋಧಿಸುವ ಕರಪತ್ರಗಳನ್ನು ...ಿಂದೂ ಪರಿಷತ್ ವ್ಯಾಪಕವಾಗಿ ...ತ್ತು, ಕರ್ನಾಟಕದಲ್ಲೂ ಹಲವು ...ಾಗಗಳಲ್ಲಿ ಆಗ ಅಂತಹ ಕರಪತ್ರಗಳು ...ಕೊಂಡಿದ್ದವು. ಈಗ ರಾಜ್ಯದಲ್ಲಿ ... ಹಬ್ಬಿಸುತ್ತಿರುವ ಲವ್ ಜೆಹಾದ್ ... ಕಟ್ಟುಕತೆಯ ಮೊದಲ ...ರೂಯೇ ಆ ಕರಪತ್ರಗಳು!
...ಮಾನ್ಯರನ್ನು ಸಾಮೂಹಿಕ ಹಿಂಸೆಗೆ ...ಳಿಸುವುದೇ ಅವುಗಳ ಉದ್ದೇಶ ...ಯು ಈ ದೃಢಸಂಕಲ್ಪವನ್ನು ...ಸುವುದು ಹೇಗೆ?
...ಿ.ಎಸ್. ಬಂದೂಕುವಾಲ ...ರಾತ್‌ನ ಓರ್ವ ಮುಸ್ಲಿಮ್ ...ಸ್ತ. ವೃತ್ತಿಯಲ್ಲಿ ಅವರು ಬರೋಡ ...ದ್ಯಾಲಯದ ಕೆಮಿಸ್ಟ್ರಿ ಪ್ರಾಧ್ಯಾಪಕರು. ...ಕುವಾಲ, ಮಾನವಹಕ್ಕು ಮತ್ತು ...ಮು ಸೌಹಾರ್ದಗಳಿಗಾಗಿ ...ುತ್ತಿರುವ ಓರ್ವ ಕ್ರಿಯಾಶೀಲ ಚಿಂತಕ. ...ರಾತ್ 2002 ರ ಸಂದರ್ಭದಲ್ಲಿ ಅವರ ...ದ ಮೇಲೂ ದಾಳಿ ನಡೆದಿತ್ತು, ಕೆಲವು ...ಗಳ ಕೆಳಗೆ ಬಂದೂಕ್‌ವಾಲ ಗುಜರಾತ್‌ನಲ್ಲಿ ... ನಡೆಸಿದವರು ಆ ಬಗ್ಗೆ ಪಶ್ಚಾತ್ತಾಪ ಪಡಬೇಕು; ... ಹಿಂಸೆಗೆ ತುತ್ತಾದವರು ಅದನ್ನು ಕ್ಷಮಿಸಬೇಕು; ...ರಾತ್ 2002 ರ ದುರಂತವನ್ನು ಮರೆತು ...ಮರು ಮುನ್ನಡೆಯಬೇಕು ಎಂದು ಕರೆ ...ರು. ಆದರೆ ಹಿಂದೂ ರಾಜಕಾರಣಿಗಳು, ...ಾಜಿಕ ಧುರೀಣರು ಮತ್ತು ಧಾರ್ಮಿಕ ...ಂದರು ಅವರ ಕರೆಗೆ ...ಸಲಿಲ್ಲ. ಆಗ, ...ಶರಾಗಿ ಬಂದೂಕುವಾಲ ...ದರು, "ಮುಸ್ಲಿಮರಿಗೆ ...ಕ್ತೀಯವಾಗಿ ಗುಜರಾತ್ ಹಿಂಸೆಯ ...ಶಕರನ್ನು ಕ್ಷಮಿಸುವುದು ಬಿಟ್ಟು ಬೇರೆ ...ಯೇ ಇಲ್ಲ, ಈ ರೀತಿಯ ಕ್ಷಮೆ ಇಸ್ಲಾಂನ ...ವರಿಗೆ ಹೊರತಾದದ್ದೇನೂ ಅಲ್ಲ. ಕ್ಷಮೆ ಹಿಂಸೆಗೆ ...ದವರ ವ್ಯಕ್ತಿತ್ವವನ್ನು ಬೆಳಗುತ್ತದೆ; ಹಿಂಸಕರನ್ನು ...ತ ಭಾವನೆಗಳಿಂದ ರಕ್ಷಿಸುತ್ತದೆ ಮತ್ತು ...ರುವನ್ನು ಸಂಪ್ರೀತಗೊಳಿಸುತ್ತದೆ. ಅಲ್ಲಾನು ...ವನ ಅಂತಿಮ ನಿರ್ಣಾಯಕ ಎಂಬುದು ಇಸ್ಲಾಂನ ...ೆ. ಗುಜರಾತ್‌ನಲ್ಲಿ ಹಿಂಸೆ ಎಸಗಿದವರು ...ನಾದರೂ ತಮ್ಮ ಕೃತ್ಯವನ್ನು ಎದುರಿಸಲೇಬೇಕು.





ನರಮೇಧದ ಹೆಣಗಳ ಸಮ್ಮುಖದಲ್ಲೇ ಬಿಜೆಪಿ ಜೊತೆ ಉಂಡವರು

ದೇವರ ಬಳಿ ರಾಜಕೀಯ ಒತ್ತಡ ಅಥವಾ ಕಾನೂನಿನ ಕಸರತ್ತು ನಡೆಯುವುದಿಲ್ಲ, ಒಳಿತು ಮತ್ತು ಕೆಡಕು ಎಂದಿಗೂ ಸಮಾನವಲ್ಲ, ಮುಸ್ಲಿಮರು ಸದಾ ಕರುಣೆಗೆ ಮಾತ್ರ ಪಾತ್ರವಾಗಿ ಬಾಳುವೆ ನಡೆಸುವುದು ಸಾಧ್ಯವಿಲ್ಲ, ನಾವು 2002 ನ್ನು ಬದಿಗಿಟ್ಟು ಜೀವನದಲ್ಲಿ ತೊಡಗಿಕೊಳ್ಳಬೇಕು."

ಬಂದೂಕುವಾಲಾ ಅವರ ಬಗ್ಗೆ ಗೌರವವಿರಿಸಿಕೊಂಡೇ ಅವರ ನಿಲುವು ಪ್ರಜಾಪ್ರಭುತ್ವದ ಕಾನೂನಿನ ಆಳ್ವಿಕೆ ಮತ್ತು ಕಾನೂನಿನ ಸಮಾನತೆಗಳಿಗೆ ಅನುಗುಣವಾಗಿಲ್ಲ ಎಂದು ಹೇಳಬೇಕಾಗಿದೆ. ಮುಸ್ಲಿಮರು ಸದಾ ಕರುಣೆಗೆ ಪಾತ್ರರಾಗಿರುವುದು ಸಾಧ್ಯವಿಲ್ಲ ಸರಿ. ಆದರೆ ಮುಸ್ಲಿಮರೇ ಆಗಲಿ, ಯಾರೇ ಆಗಲಿ, ದೇವತೆಗಳಂತೆ ಉದಾರಿಗಳಾಗಿರಬೇಕು ಎಂದು ಬಯಸುವುದು ಸಹ ಒಂದು ಬಗೆಯ ಕ್ರೌರ್ಯವೇ ಸರಿ. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಾಮಾನ್ಯರಾಗಿದ್ದುಕೊಂಡೇ ಬಾಳುವ ಹಕ್ಕು ಮತ್ತು ಸ್ವಾತಂತ್ರ್ಯವಿದೆ. ಮುಸ್ಲಿಮರಿಗೆ ಈಗ ಅದನ್ನು ನಿರಾಕರಿಸಲಾಗಿದೆ. ಆ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಮುಸ್ಲಿಮ್ ಸಮುದಾಯ ಮರಳಿ ಪಡೆಯದೆ ನೈಜ ಸೌಹಾರ್ದ ಸಾಧ್ಯವಿಲ್ಲ. ಖ್ಯಾತ ಚಿಂತಕ ಹಾಗೂ ಮಾನವ ಹಕ್ಕು ಹೋರಾಟಗಾರ ಹರ್ಷ್ ಮಾಂದೆರ್ ಪ್ರಕಾರ ಕೋಮು ಸೌಹಾರ್ದಕ್ಕೆ ಪೂರ್ವಭಾವಿಯಾಗಿ ಆಗಲೇಬೇಕಾದ ನಾಲ್ಕು ಕೆಲಸಗಳಿವೆ:

1. ಹಿಂಸೆಯನ್ನು ಎಸಗಿದವರು ತಮ್ಮ ಕೃತ್ಯವನ್ನು ಹಿಂಸೆ ಎಂದು ಒಪ್ಪಿಕೊಳ್ಳಬೇಕು. ದೇಶ-ಧರ್ಮ ಮತ್ತು ಚರಿತ್ರೆಗಳ ಹೆಸರಿನಲ್ಲಿ ಹಿಂಸೆಯನ್ನು ವೈಭವೀಕರಿಸಕೂಡದು.


2. ಹಿಂಸೆಯ ಬಗ್ಗೆ ಪಶ್ಚಾತ್ತಾಪ.

3. ಹಿಂಸೆಯ ಸಂತ್ರಸ್ತರಿಗೆ ಸೂಕ್ತ ಪರಿಹಾರ ಅಥವಾ ಅಂತರಾಷ್ಟ್ರೀಯ ಕಾನೂನುಗಳು ನಿಗದಿಗೊಳಿಸಿರುವಂತೆ, "ಹಿಂಸೆ ಸಂಭವಿಸುವುದಕ್ಕಿಂತ ಮೊದಲು ಇದ್ದ ಸಾಮಾನ್ಯ ಸ್ಥಿತಿಯನ್ನು ಮರಳಿ ಸ್ಥಾಪಿಸುವುದು."

4. ಹಿಂಸೆ ಎಸಗಿದವರಿಗೆ ಕಾನೂನುರೀತ್ಯ ಶಿಕ್ಷೆ ವಿಧಿಸುವುದು.

ಸ್ವತಃ ಹಿಂಸೆ ಅನುಭವಿಸಿದವರನ್ನು ಹೊರತುಪಡಿಸಿ, ಇತರರು ಈ ಕಾಲದಲ್ಲಿ ಹಿಂಸೆಯನ್ನು ಹಿಂಸೆ ಎಂದು ಗುರುತಿಸುವುದಿಲ್ಲ, ಬಹುಶಃ ಪ್ರಾಣಿದಯಾ ಸಂಘದವರೂ ಹಾಗೆ ಮಾಡುವುದಿಲ್ಲ, ತನ್ನ ಪ್ರಾಣಿ ದಯೆಗೆ ಹೆಸರು ಮಾಡಿರುವ ಶ್ರೀಮತಿ ಮನೇಕಾ ಗಾಂಧಿ ಗುಜರಾತ್ ನರಮೇಧದ ದಿನಗಳಲ್ಲಿ ಕೇಂದ್ರದ ಎನ್‌ಡಿಎ ಸರ್ಕಾರದಲ್ಲಿ ಮಂತ್ರಿಯಾಗಿದ್ದರು. ಆದರೆ ಗುಜರಾತ್‌ನ ಜೀವಹಿಂಸೆಯ ಬಗ್ಗೆ ಅವರು ಒಂದು ಮಾತೂ ಆಡಲಿಲ್ಲ. ಸಾಮೂಹಿಕ ಹಿಂಸೆಗೆ ಈಗ ಆಕರ್ಷಕ ಹೆಸರುಗಳಿವೆ. ಜನಬೆಂಬಲವೂ ಇದೆ. ಉದಾಹರಣೆಗೆ ಮಣಿಪುರ, ಕಾಶ್ಮೀರ ಮುಂತಾದ ಗಡಿ ಪ್ರಾಂತ್ಯಗಳಲ್ಲಿ ಸಾಮಾನ್ಯ ಪ್ರಜೆಗಳನ್ನು ಸೈನ್ಯ ಕೊಲ್ಲುವುದು ದೇಶ ರಕ್ಷಣೆ ಎನ್ನಿಸಿಕೊಳ್ಳುತ್ತದೆ. ಗಣಿಗಾರಿಕೆ, ಅಣೆಕಟ್ಟು ಮುಂತಾದ ಯೋಜನೆಗಳಿಗಾಗಿ ಆದಿವಾಸಿಗಳನ್ನೂ ರೈತರನ್ನೂ ಬಲಾತ್ಕಾರವಾಗಿ ಒಕ್ಕಲೆಬ್ಬಿಸುವುದು ಅಭಿವೃದ್ಧಿ ಎಂದು ಕರೆಸಿಕೊಳ್ಳುತ್ತದೆ.

ಗುಜರಾತ್‌ನಲ್ಲೂ ಹಿಂಸೆ ಎಸಗಿದ ರಾಜಕೀಯ ಪಕ್ಷ ಅದನ್ನು ಹಿಂಸೆ ಎಂದು ಒಪ್ಪಿಕೊಳ್ಳುವುದಿಲ್ಲ, ಆ ಬಗ್ಗೆ ಆ ಪಕ್ಷದವರಿಗೆ ಪಶ್ಚಾತ್ತಾಪವೂ ಇಲ್ಲ, ಅದನ್ನು ಅವರಿಂದ ನಿರೀಕ್ಷಿಸಲು ಸಾಧ್ಯವೂ ಇಲ್ಲ; ಸಬ್‌ಕೋ ಸನ್ಮತಿ ದೇ ಭಗವಾನ್ ಎಂದು ಪ್ರಾರ್ಥಿಸಲು ನಾವು ಮಹಾತ್ಮರಲ್ಲ, ಆದರೆ ಗುಜರಾತ್ 2002 ರ ಸಂತ್ರಸ್ತರಿಗೆ ಈಗಲಾದರೂ ಸೂಕ್ತ ಪರಿಹಾರ ಒದಗಿಸಿ ಮತ್ತು ಅಪರಾಧಿಗಳಿಗೆ ಶಿಕ್ಷೆ ವಿಧಿಸಿ ಎಂದು ಆಗ್ರಹಿಸುವುದು ನಮ್ಮ ಕರ್ತವ್ಯ, ಸಂಕಲ್ಪ ಬಲವಿದ್ದರೆ ಅದು ಅಸಾಧ್ಯವೂ ಅಲ್ಲ. ❖




▸4 ಚೆಡ್ಡಿ ಸಂಚು; ಜೆಪಿ ಮಿಂಚು

ಇಲ್ಲಿಯವನು. ಅಲ್ಲದೇ ಇಲ್ಲಿ ಬಿಲ್ಲವರೇ ನಿರ್ಣಾಯಕರು. ತಾನು ಬಿಲ್ಲವನೆಂದು ಈತ ಭಾವನಾತ್ಮಕ ಆಟ ಸುನಿಲ್ ಆಡುತ್ತಿದ್ದಾನೆ. ಈತನ ತಾಯಿ ಸ್ಥಳೀಯ ಬಿಲ್ಲವ ಸಮುದಾಯದವರಾದರೂ ಅಪ್ಪ ಮಾತ್ರ ಬಿಲ್ಲವನಲ್ಲ, ಆದರೆ ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಸುನಿಲ್ ಸೋತಿದ್ದಾನೆ. ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಡೀವಿಗೆ ಹೆಚ್ಚು ಓಟು ಬಂದಿದೆ. ಆದರೆ ಸ್ವತಃ ಸುನಿಲ್‌ನೇ ಕ್ಯಾಂಡಿಡೇಟಾಗಿರುವುದು ಸ್ಥಳೀಯ ಕೊಂಕಣಿ-ಬ್ರಾಹ್ಮಣ ಮತ್ತು ಬಂಟರು ಮುಂತಾದ ಜಾತಿಯವರನ್ನು ಕೆರಳಿಸಿದೆ. ಹೀಗಾಗಿ ಕಳೆದ ಬಾರಿಗಿಂತಲೂ ಜೆಪಿ ಈ ಸಲ ಕಾರ್ಕಳದಲ್ಲಿ ಹೆಚ್ಚು ಮತ ಬಾಚಲಿದ್ದಾರೆ. ಇದಕ್ಕೆ ಸ್ಥಳೀಯ ಕಾಂಗ್ರೆಸ್ ಶಾಸಕ ಗೋಪಾಲ ಭಂಡಾರಿಯ ಜನಾನುರಾಗಿ ಅಂಶವೂ ಕಾರಣವಾಗಲಿದೆ!

ಘಟ್ಟದಲ್ಲಿ ಕಾಂಗ್ರೆಸ್ ಗಾಳಿ

ಚಿಕ್ಕಮಗಳೂರಿನ ನಾಲ್ಕೂ ವಿಧಾನಸಭಾ ಕ್ಷೇತ್ರಗಳಲ್ಲಿ ಕಮಲ ಕಳೆದ ಪಾರ್ಲಿಮೆಂಟ್ ಚುನಾವಣೆ ಹೊತ್ತಲ್ಲೇ ಕಮರಿಹೋಗಿದೆ! ಕಮಲಕ್ಕೀಗ ಮತಾಂಧ ಗೊಬ್ಬರ ಸಿಗುತ್ತಿಲ್ಲ. ದತ್ತ ಅವಧೂತನ ಹೆಸರಲ್ಲಿ ಸಿ.ಟಿ. ರವಿಯ ಗೂಂಡಾಪಡೆ ಮಾಡಿದ ಅಕ್ರಮ-ಅನ್ಯಾಯ-ಅವಾಂತರ ಒಂದೆರಡಲ್ಲ, ಹೀಗಾಗಿ ಚಿಕ್ಕಮಗಳೂರು ಅಸೆಂಬ್ಲಿ ಕ್ಷೇತ್ರದ ಬಿಜೆಪಿ ಕಾರ್ಯಕರ್ತರೇ ಈಗ ತಿರುಗಿಬಿದ್ದಿದ್ದಾರೆ. ಈ ರವಿ ಅನಂತ್‌ಕುಮಾರ್ ಶಿಷ್ಯ. ಅರ್ಥಾತ್ ಯಡ್ಡಿ ಮತ್ತು ಸಿಎಂ ಡೀವಿ ವಿರೋಧಿ. ಭಜರಂಗಿ ಸುನಿಲ್‌ನ ಗೆಳೆಯನಾದರೂ ಆತ ಗೆದ್ದರೆ ಡೀವಿಗೆ ಕ್ರೆಡಿಟ್ ಎಂಬ ಕಾರಣಕ್ಕೆ ಈತ ಒಳಗೊಳಗೇ ಬತ್ತಿ ಇಡುತ್ತಿದ್ದಾನೆ. ಲಿಂಗಾಯತರ ರಂಭಾಪುರಿ ಸ್ವಾಮಿಯೂ ಯಡ್ಡಿ ಪರವಿರುವುದರಿಂದ ಅವರು ಡೀವಿಗೆ ಟಾಂಗ್ ಕೊಡುವ ರಹಸ್ಯ "ಜಾತಿಕಾರಣ" ನಡೆಸಿದ್ದಾರೆ. ಇದು ಲಿಂಗಾಯತರ ಓಟು ಕಾಂಗ್ರೆಸ್ ಕಡೆ ಹರಿದುಬರುವಂತೆ ಮಾಡುವುದು ಗ್ಯಾರಂಟಿ! ರವಿ ಚಹರೆ ಬಿಜೆಪಿಗೆ ಮಾರಕ. ತನ್ನನ್ನು ಮಂತ್ರಿ ಮಾಡದ ಸೇಡು ತೀರಿಸಿಕೊಳ್ಳಲು ರವಿ ಹವಣಿಸುತ್ತಿದ್ದಾನೆ.



ದೊಡ್ಡ ಕ್ಷೇತ್ರವಾದ ಶೃಂಗೇರಿ ಬಿಜೆಪಿ ಶಾಸಕ ಜೀವರಾಜ್‌ನ ಉಂಡಾಡಿ ಗುಂಡಣ್ಣತನದಿಂದ ರೋಸಿಹೋಗಿದೆ. ಕಳೆದ ಬಾರಿ ಇಲ್ಲಿ ಬಿಜೆಪಿಗೆ ದೊಡ್ಡ ಹೊಡೆತವೇ ಬಿದ್ದಿದೆ. ಈಗಂತೂ ಇಲ್ಲಿ ಗಣನೀಯವಾಗಿರುವ ಬ್ರಾಹ್ಮಣರು ಬಿಜೆಪಿ ವಿರುದ್ಧ ತಿರುಗಿ ಬಿದ್ದಿದ್ದಾರೆ. ಮೊನ್ನೆ ಕೇಂದ್ರ ಮಂತ್ರಿ ಎಸ್.ಎಂ.ಕೃಷ್ಣ ಬಂದಾಗ 70 ಸಾವಿರದಷ್ಟಿರುವ ಬ್ರಾಹ್ಮಣರ ಮುಖಂಡರು ಕಾಂಗ್ರೆಸ್ ಬೆಂಬಲಿಸುವ 'ನೈಚ್ಯಾನುಸಂಧಾನ' ಮಾಡಿಕೊಂಡಿದ್ದಾರೆ. ಬಿಜೆಪಿ ಶಾಸಕ ಜೀವರಾಜ್ ಇತ್ತ ಯಡ್ಡಿ ಮಹಾತ್ಮನ ಪಕ್ಕಾ ಅನುಯಾಯಿ ಅತ್ತ ಸಿ.ಟಿ.ರವಿಯ ಪರಮ ಶತ್ರು. ಈ ಗುಂಪುಗಾರಿಕೆ ಶೃಂಗೇರಿಯಲ್ಲಿ ಬಿಜೆಪಿಗೆ ಭರ್ಜರಿ ಹೊಡೆತ ಕೊಡಲಿದೆ. ಡಿ.ಬಿ.ಚಂದ್ರೇಗೌಡನೆಂಬ ಭ್ರಷ್ಟ ಭೂಪ-ಯಡ್ಡಿಯ ವಕೀಲನಿಗೆ ಶೃಂಗೇರಿಯಲ್ಲಿ ಮೂರು ಬಿಲ್ಲಿ ಕಿಮ್ಮತ್ತಿಲ್ಲ, ಆತನಿಂದ ಬಿಜೆಪಿಗೆ ಲಾಭಕ್ಕಿಂತ ಹಾನಿಯೇ ಜಾಸ್ತಿ.

ಮೂಡಿಗೆರೆಯಲ್ಲಿ ಕಾಂಗ್ರೆಸ್ ಬಲಾಢ್ಯವಾಗಿದೆ. ಬಿಜೆಪಿ ಶಾಸಕ ಕುಮಾರಸ್ವಾಮಿ ಯಡ್ಡಿ ಬಣದಲ್ಲಿರುವುದರಿಂದ, ಆತ ಡೀವಿ ವಿರುದ್ಧ ನಿಂತಿದ್ದಾರೆ. ಮೋಟಮ್ಮ, ತಾರಾದೇವಿ, ಬಿ.ಎಲ್. ಶಂಕರ್ ಒಂದಾಗಿ ಕೆಲಸ ಮಾಡುತ್ತಿರುವುದು ಕಾಂಗ್ರೆಸ್‌ಗೆ ಅನುಕೂಲಕರವಾಗಿದೆ. ಇನ್ನು ಜನರಿಗೆ ಬೇಡದ ಭದ್ರಾ ಮೇಲ್ದಂಡೆ ಯೋಜನೆ ಬಿಜೆಪಿಗೆ ತರೀಕೆರೆಯಲ್ಲಿ ಗೂಸಾ ಕೊಡಲಿದೆ. ಭೂಮಿ ಕಳಕೊಂಡವರು ಕಾಂಗ್ರೆಸ್ ಪರ ನಿಂತಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು-ಬಯಲು ಸೀಮೆಯ ಸಂಘಪರಿವಾರದ ದಾಯಾದಿಗಳಾದ ಹಿಂಜಾವೇ, ಭಜರಂಗದಳ, ಶ್ರೀರಾಮಸೇನೆ, ಆರೆಸ್ಸೆಸ್ ನಡುವೆಯೇ ಜಗಳ ನಡೆಯುತ್ತಿದೆ. ದತ್ತ ಅವಧೂತನ ಮ್ಯಾಜಿಕ್ಕೂ ಇಲ್ಲಿ ನಡೆಯುತ್ತಿಲ್ಲ. ಒಟ್ಟನಲ್ಲಿ ಮಲೆನಾಡು-ಬಯಲು ಸೀಮೆಯಲ್ಲಿ ಬಿಜೆಪಿ ಬಣ್ಣಗೆಟ್ಟಿದೆ; ಕಾಂಗ್ರೆಸ್‌ಗೆ ಕಸುವು ಬಂದಿದೆ!

ಗೆಲ್ಲೋರ್ಯಾರು ಬಲ್ಲಿರೇನಯ್ಯ?

ಕಳೆದ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆಗೆ ಕರಾವಳಿಯಲ್ಲಿ ಹಿನ್ನಡೆಯಾಗಿತ್ತು, ಈ ಬಾರಿ ಬಿಜೆಪಿ ವ್ಯಭಿಚಾರ-ಭ್ರಷ್ಟಾಚಾರ-ಕೋಮು ಕ್ರೌರ್ಯ-ಉಡುಪಿ ಮಠಾಧೀಶರ ನಖರಾ, ಆಚಾರ್ಯ ಮಾಡಿಹೋಗಿರುವ ಅನಾಚಾರದಿಂದ ಬಿಜೆಪಿ ದೊಡ್ಡ ದಂಡ ತೆರಬೇಕಾಗಿದೆ. ಘಟ್ಟದ ಮೇಲೆ ಹೇಗೆ ಕಳೆದ ಬಾರಿ ಜೆಪಿ ಪರ ಅಲೆ ಎದ್ದಿತ್ತೋ ಅದೇರೀತಿಯ ಹವಾ ಈ ಬಾರಿ ಕರಾವಳಿಯಲ್ಲಿ ಬೀಸುತ್ತಿದೆ. ಬ್ರಹ್ಮಾವರ ಭಾಗದಲ್ಲಿ ಸುಚಿತಾ ಎಂಬ ಹುಡುಗಿಯ ಮರ್ಡರ್ ಕೇಸ್ ಅನ್ನೇ ಹಿಂದೆ ಬಳಸಿಕೊಂಡು ಶಾಸಕನಾಗಿದ್ದ ಸುನಿಲ್‌ಗೆ ತಿರುಗುಬಾಣವಾಗಿದೆ. ಆತನಿಗೆ ಸ್ಯಾಂಡಲ್‌ವುಡ್ ಮಾಫಿಯಾದ ಜತೆಗಿರುವ ಸಂಪರ್ಕವೂ ಈಗ ಕಾರ್ಕಳ ಭಾಗದಲ್ಲಿ ಕಾಂಗ್ರೆಸ್‌ಗೆ ಅನುಕೂಲ ಕಲ್ಪಿಸುತ್ತಿದೆ.

ಕಾಂಗ್ರೆಸ್‌ನ ಜೆಪಿ ತನ್ನ ಸರಳತೆ, ದೂರದೃಷ್ಟಿ, ಅಭಿವೃದ್ಧಿಯ ಯೋಜನೆ, ಸಮಸ್ಯೆ ಪರಿಹರಿಸುವ ಇಚ್ಛಾಶಕ್ತಿ ಮತ್ತು ಜಂಟಲ್‌ಮನ್‌ಗಿರಿಯಿಂದ ಜನರನ್ನು ಆಕರ್ಷಿಸುತ್ತಿದ್ದಾರೆ. ಸ್ವಪಕ್ಷೀಯ ವೈರಿ ಯಡ್ಡಿ ಬಣದ ಕಾಲೆಳೆತ ಕಿತಾಪತಿಯಿಂದ ಹೈರಾಣಾಗಿರುವ ಸಿಎಂ ಡೀವಿಯ ಪ್ರತಿಷ್ಠೆ ಪಣಕ್ಕೆ ಬಿದ್ದಿದೆ. ಪಾಪ ಹತಾಶವಾಗಿರುವ ಡೀವಿ ಮತ್ತವನ ಕ್ಯಾಂಡಿಡೇಟ್ ಸುನಿಲ್‌ಕುಮಾರ್ ಎಂಬ 'ಬೆರಕೆ' ಬಾಯಿಗೆ ಬಂದಂತೆ ಮಾತಾಡಿ ತೂಕ ಕಳಕೊಳ್ಳುತ್ತಿದ್ದಾರೆ. ಜನಹಿತದ ಯೋಜನೆ-ಯೋಚನೆಯೇ ಇಲ್ಲದ ಮತಾಂಧ ರಾಜಕಾರಣಿ ಡೀವಿ-ಸುನಿಲ್ ಬಳಗದ ನಡೆ-ನುಡಿ ಮತದಾರರಿಗೆ ಹೇಸಿಗೆ ಹುಟ್ಟಿಸುತ್ತಿದೆ. ಕಾಂಗ್ರೆಸ್‌ನ ಜನಪರ ಜೆಪಿ ಮತ್ತು ಬಿಜೆಪಿಯ ಬಾಯಿಬಡುಕ ಡೀವಿ-ಸುನಿಲ್-ಈಶ್ವರಪ್ಪನನ್ನು ತೂಗಿ ನೋಡುತ್ತಿರುವ ಮತದಾರರು ಜೆಪಿಯೇ ಫಾರ್ ಬೆಟರ್ ಎಂಬ ತೀರ್ಮಾನಕ್ಕೆ ಬಂದುಬಿಟ್ಟಿದ್ದಾರೆ. ಈ ಬಾರಿಯ ವಿಶೇಷವೆಂದರೆ, ಕಾಂಗ್ರೆಸ್‌ನ ಘಟಾನುಘಟಿ ನಾಯಕರಾದ ಸ್ಥಳೀಯ ಶಂಕರ್, ತಾರಾದೇವಿ, ಸೊರಕೆ, ಮೊಯ್ಲಿ, ಪೂಜಾರಿಗಳೆಲ್ಲ ತಮ್ಮ ಹೊಟ್ಟೆಕಿಚ್ಚು ಬಿಟ್ಟು ಒಂದಾಗಿ ಕೆಲಸ ಮಾಡುತ್ತಿದ್ದಾರೆ. ಅತ್ತ ಬಿಜೆಪಿಯಲ್ಲಿ ಯಡ್ಡಿ, ಡೀವಿ, ಸಿ.ಟಿ.ರವಿ, ರಘುಪತಿ ಭಟ್ಟ, ಹಾಲಾಡಿ ಶ್ರೀನಿವಾಸ ಶೆಟ್ಟಿ, ಎ.ಜಿ.ಕೊಡಗಿ, ಬಟ್ಟರ ಜುಟ್ಟು ಮತ್ತೊಬ್ಬ ಹಿಡಿದುಕೊಂಡು 'ತಮ್ಮತನ' ತೋರಿಸಲು ಕ್ಯಾಂಡಿಡೇಟ್ ಸುನೀಲ್‌ಕುಮಾರ್‌ನನ್ನೇ ಬಲಿಪಶು ಮಾಡುತ್ತಿದ್ದಾರೆ, ಪಾಪ ಇದೆಲ್ಲ ಅರ್ಥವಾಗಿರುವ ಸುನಿಲ್ ಪಾರ್ಟಿ ಫಂಡನ್ನೇ ಗಂಟುಕಟ್ಟಿಕೊಳ್ಳುವ ಸ್ಕೆಚ್ ಹಾಕಿದ್ದಾನೆಂದು ಬಿಜೆಪಿ ಬಿಡಾರದಲ್ಲೇ ಗುಸುಗುಸು ಎದ್ದಿದೆ!

ಇದೊಂದು ಪಕ್ಕಾ ಜಾತಿ ಆಧಾರದ ಅಖಾಡ. ಕರಾವಳಿಯಲ್ಲಿ ಬಿಲ್ಲವ, ಬಂಟ, ಬೆಸ್ತರ ಬಾಹುಳ್ಯವಾದರೆ, ಘಟ್ಟದ ಮೇಲೆ ಒಕ್ಕಲಿಗ, ಲಿಂಗಾಯತ, ಮುಸ್ಲಿಮರ ಪ್ರಾಬಲ್ಯ ಇದೆ. ಕರಾವಳಿಯಲ್ಲಿ ಸ್ವಜಾತಿ ಬಂಟರ ಮತದೊಂದಿಗೆ ಮೀನುಗಾರರ ಮತ ಕಾಂಗ್ರೆಸ್‌ನ ಜೆಪಿ ಪಾಲಾಗಲಿದೆ. ಕರಾವಳಿ-ಮಲೆನಾಡು-ಬಯಲು ಸೀಮೆಯ ಮುಸ್ಲಿಮರ ಓಟೆಲ್ಲ ಗೆಲ್ಲುವ ಕುದುರೆಯಾದ ಜೆಪಿಗೆ ಬರಲಿದೆ. ಜೆಡಿಎಸ್ ಬಗ್ಗೆ ಒಲವಿರುವ ಸಾಬಿಗಳೂ ಭೋಜೇಗೌಡ ಸೋಲುವ ಕುದುರೆಯಾದ್ದರಿಂದ ಕಾಂಗ್ರೆಸ್ ಕೈಹಿಡಿಯುತ್ತಾರೆ. ಇದು ಅಲ್ಪಸಂಖ್ಯಾತರು ಬಿಜೆಪಿಯಿಂದ ಬಚಾವಾಗಲು ಮಾಡಬೇಕಾದ ಅನಿವಾರ್ಯ ಉಪಾಯವೂ ಹೌದು. ದಕ್ಷಿಣ ಕನ್ನಡದ ವಲಸಿಗರು ಕಾಫಿ ತೋಟದಲ್ಲಿ ಕಾರ್ಮಿಕರಾಗಿದ್ದಾರೆ. ಈ ಬಂಟರು-ಬಿಲ್ಲವರು ಜೆಪಿಯನ್ನೇ ಮೆಚ್ಚುತ್ತಾರೆ; ಒಪ್ಪುತ್ತಾರೆ. ಸುನಿಲ್ ತರಲೆ-ಪುಂಡನೆಂಬ ಅಭಿಪ್ರಾಯ ಈ ವಲಸಿಗರಲ್ಲಿದೆ.

ಕರಾವಳಿಯ ಬಿಲ್ಲವರಲ್ಲಿ ಬಹುತೇಕ ಮತ ಬಿಜೆಪಿಯ ಹುಸಿ ಬಿಲ್ಲವ ಸುನಿಲ್‌ಗೆ ಹೋಗುವ ಅಪಾಯವಿದೆ. ಆ ಥರ ಆತ ಜಾತಿ ಕೆರಳಿಸಿಬಿಟ್ಟಿದ್ದಾನೆ. ಹಾಗೆ ನೋಡಿದರೆ ಎಂಪಿಯಾಗುವ ಯಾವ ಅರ್ಹತೆಯೂ ಇಲ್ಲದ ಸುನಿಲ್‌ಗೆ ಹಿಂದೂತ್ವದ ಮತ್ತು ಬಿಲ್ಲವರ ಮತ ಬಿಟ್ಟರೆ ಇನ್ನಾವುದೂ ಬರಲಾರದು. ಬಿಜೆಪಿಯ ಪಕ್ಕಾ ಬೆಂಬಲಿಗರಾದ ಬ್ರಾಹ್ಮಣರು, ಕೊಂಕಣಿಗರು, ರಾಜಾಪೂತ ಕೊಂಕಣಿಗರು ಈ ಬಾರಿ ಬಿಜೆಪಿಯಿಂದ ವಿಮುಖರಾಗಿದ್ದಾರೆ. ಸಮತೋಲನದಲ್ಲಿರುವ ಒಕ್ಕಲಿಗ-ಲಿಂಗಾಯತರು ಯಡ್ಡಿ-ದೇಗೌರ ಜಾತಿ ಸಮೀಕರಣವೂ ಸದ್ಯಕ್ಕೆ ಹೊಯ್ದಾಡುತ್ತಿವೆ. ಎಸ್.ಎಂ.ಕೃಷ್ಣ ಬಿ.ಎಲ್.ಶಂಕರ್, ಡಿ.ಕೆ.ತಾರಾದೇವಿ ಮುಂತಾದ ಕಾಂಗ್ರೆಸ್‌ನ ಒಕ್ಕಲಿಗ ಲೀಡರ್‌ಗಳು ಸ್ವಜಾತಿ ಓಟಲ್ಲಿ ದೊಡ್ಡ ಪಾಲು ತರಲಿದ್ದಾರೆಂಬ ಲೆಕ್ಕಾಚಾರ ಹಾಕಲಾಗಿದೆ. ಹಾಗೊಮ್ಮೆ ದೇವೇಗೌಡರಿಂದಾಗಿ ಈ ಮತಗಳು ಬಿಜೆಪಿ ಪಾಲಾದರೆ ಲಿಂಗಾಯತರ ಓಟು ಕಾಂಗ್ರೆಸ್‌ಗೆ ಖಂಡಿತ ದಕ್ಕುತ್ತದೆ!!

ಪ್ರಚಾರದಲ್ಲೂ ಬಿಜೆಪಿ ದಲ್ಲಾಗಿಯೇ ಇದೆ. ಕಾಂಗ್ರೆಸ್ ಮುಂದಿದೆ. ಜನರ ಬೆಂಬಲವೂ ಕಾಂಗ್ರೆಸ್‌ಗೆ ಇರುವಂತಿದೆ. ಆದರೆ ಕೊನೇಕ್ಷಣದಲ್ಲಿ ಬಿಜೆಪಿ ಕೊಳ್ಳಿದೆವ್ವಗಳು ಹಣದ ಚೀಲ, ಕೋಮು ಕೊಳ್ಳಿ ಹಿಡಿದುಕೊಂಡು ಬರುವ ಅಪಾಯ ಇದೆ. ಆದರೆ ಈ ಬಾರಿ ಚೆಡ್ಡಿಗಳ ಈ 'ಆಟ' ನಡೆಯುವ ಸಾಧ್ಯತೆಯಿಲ್ಲ.

ಎಲ್ಲಿಂದಲ್ಲಿಗೆ ಲೆಕ್ಕಹಾಕಿ ತಾಳೆ ನೋಡಿದರೂ ಕಾಂಗ್ರೆಸ್‌ನ ಕ್ಯಾಂಡಿಡೇಟ್ ಜೆಪಿ ಬಿಜೆಪಿ ಭೂಪ ಸುನಿಲ್‌ಗಿಂತ ತುಂಬ ಮುಂದಿದ್ದಾರೆ. ಬಿಜೆಪಿಯ ವ್ಯಭಿಚಾರ-ಭ್ರಷ್ಟಾಚಾರ-ಕೋಮು ಅನಾಚಾರದಿಂದ ಬೇಸತ್ತ ಕರಾವಳಿ-ಮಲೆನಾಡು ಮತ್ತು ಬಯಲುಸೀಮೆ ಮತದಾರರು ಬಿಜೆಪಿಗೆ ಮಣ್ಣು ಮುಕ್ಕಿಸಲು, ತನ್ಮೂಲಕ ಕಾಂಗ್ರೆಸ್‌ನ ಕೆಲಸಗಾರ-ಯೋಗ್ಯ ಜಯಪ್ರಕಾಶ್ ಹೆಗ್ಡೆಗೊಂದು ಅವಕಾಶ ಕೊಡಲು ನಿರ್ಧರಿಸಿರುವುದು ಕ್ಷೇತ್ರದಲ್ಲಿ ಒಂದು ರೌಂಡ್ ಹಾಕಿದರೆ ಯಾರಿಗಾದರೂ ಅರ್ಥವಾಗುತ್ತದೆ. ಕ್ಷೇತ್ರವೂ ಕಾಂಗ್ರೆಸ್ ಪರವೇ ಹದಗೊಂಡಿದೆ. ಜಾತಿ ರಾಜಕಾರಣ, ಧರ್ಮಕಾರಣಗಳೂ ಬಿಜೆಪಿಗೆ ವಿರುದ್ಧವಾಗೇ ಮೇಳೈಸಿದೆ. ಕ್ಯಾಂಡಿಡೇಟ್‌ಗಳ ಸಾಮರ್ಥ್ಯ, ವ್ಯಕ್ತಿತ್ವದಲ್ಲೂ ಕಾಂಗ್ರೆಸ್‌ನ ಜೆಪಿಯೇ ಬೆಟರ್.

ಅಂತಿಮವಾಗಿ ಜೆಪಿಗೇ ಜೈಹೋ!! ❖

ಸುಗಂಧಿ ಶೋರಿಯಾ ಲಂಕೇಶ್ ಒಂದು ನೆನಪು



ಕಳೆದ ವಾರ ನಾನೊಂದು ಹೂಮರವನ್ನು ಹುಡುಕಿಕೊಂಡು ಚಾಮುಂಡಿ ಬೆಟ್ಟಕ್ಕೆ ಹೋಗಿದ್ದೆ. ನಾಲ್ಕೈದು ವರ್ಷಗಳ ಹಿಂದೆ ಇದೇ ಶೋರಿಯಾ ಟಲುರಾ (ಜಾಲರಿ ಮರ) ಎಂಬ ಮರವನ್ನು ನೋಡಲು ಹೋಗಿದ್ದಾಗ ಅದರ ಹೂಗಳು ಒಣಗಿ ಕೈಕೊಟ್ಟಿತ್ತು. ಆದ್ದರಿಂದ ಈ ವರ್ಷ ಬೇಗನೆ ಹೊರಟು ನಮ್ಮ ಪ್ರೊಫೆಸರ್ ಸದಾನಂದರು ಹೇಳಿದ್ದ ಜಾಗಕ್ಕೆ ಹೋಗಿ ಅತ್ತಿತ್ತ ಕಣ್ಣು ಹಾಯಿಸಿದೆ. ಹೂವೂ ಇಲ್ಲ, ಏನೂ ಇಲ್ಲ, ಈ ಬಾರಿಯೂ ಹೀಗೇ ಆಯ್ತಲ್ಲಾ ಎಂದು ಮುಂದೆ ಕೆಲವು ಹೆಜ್ಜೆ ಸಾಗಿದಾಗ ಅಕ್ಕೊ! ನಮ್ಮ ಎಡಗಡೆ ಬೆಟ್ಟದ ಹಳ್ಳದಲ್ಲಿ, ಬಲಕ್ಕೆ ನಮ್ಮಿಂದ ಕೆಲವೇ ಅಡಿಗಳ ಎತ್ತರದಲ್ಲಿ ಥಳಥಳ ಹಸಿರು ಎಲೆಗಳ ನಡುವೆ ಬಿಳಿಬಿಳಿ ದೊಡ್ಡ ಹೂಗೊಂಚಲುಗಳನ್ನು ಹೊತ್ತಮರಗಳು ಹನ್ನೆರಡರ ಬಿಸಿಲಿನಲ್ಲಿ ಅದ್ಭುತವಾಗಿ ಹೊಳೆಯುತ್ತಿವೆ! ನಮ್ಮ ಆಟೋವಾಲನ ದೆಸೆಯಿಂದ ಒಂದೆರಡು ಹೂಗೊಂಚಲುಗಳು ನನಗೆ ಸಿಕ್ಕಿತು. ಹೂಗಳ ಜೋಡಣೆ, ಅವುಗಳ ಅಂದ, ಸುಮಧುರ ಕಂಪು ನನ್ನನ್ನು ಆನಂದದ ಒಂದು ಉನ್ಮಾದ ಸ್ಥಿತಿಗೆ ಮುಟ್ಟಿಸಿಬಿಟ್ಟಿತು.

ಸುಮಧುರ ಸುವಾಸನೆಯ ಈ ಶೋರಿಯಾ ಟಲುರಾ ಹೂಮರಕ್ಕೂ ಲಂಕೇಶ್‌ರಿಗೂ ಅದ್ಯಾವ ನಂಟು! ಅದು ನನ್ನ ನೆನಪಿನ ನಂಟು. ಹಲವು ವರ್ಷಗಳ ಹಿಂದೆ ಬಹುಶಃ ಒಂದು ಬೇಸಿಗೆಯಲ್ಲಿ ಲಂಕೇಶ್ ಪ್ರತಿವಾರ ತಮ್ಮ ಸಂಪಾದಕೀಯದಲ್ಲಿ ಅನೇಕ ಹೂಮರಗ[ಳ] ಬಗ್ಗೆ ಬರೆದಿದ್ದರು. ಮರದ ಕಾಂಡದ ಮೇಲೇ ಹೂಬಿಡುವ ನಾಗಲಿಂಗ ಪುಷ್ಪ, ಅಪರಿಮಿತ ನೀಲವರ್ಣದ ಜಕರಾಂಡ ಇನ್ನೂ ಮುಂತಾದವು. ಒಮ್ಮೆಯಂತೂ ಪರಿಮಳಭರಿತ ಸುರಗಿ ಹೂವಿನ ಬಗ್ಗೆ ಪ್ರಸ್ತಾಪಿಸಿ, 'ಯಾರಾದರೂ ಸುರಗಿ ಹೂವನ್ನಾಗಲಿ, ಕಡೆಪಕ್ಷ ಸುರಗಿ ಮರದ ಎಲೆಯನ್ನಾಗಲಿ ಕಳಿಸಿ. ನಾನು ನೋಡಬೇಕು'ಎಂದು ಬರೆದಿದ್ದರು. ನಾನೊಂದು ಸುರಗಿ ಎಲೆಯನ್ನು ಕವರ್‌ಗೆ ಹಾಕಿ ಪೋಸ್ಟ್ ಮಾಡಿಬಿಟ್ಟಿದ್ದೆ!

• ಪದ್ಮ ಶ್ರೀರಾಮ್


ಹೂವುಗಳ ಬಗ್ಗೆ ಏಕೆ ಹೇಳುತ್ತಿದ್ದೇನೆಂದರೆ ಲಂಕೇಶ್‌ರವರು ಒಬ್ಬ ಅಸಾಧಾರಣ ಪ್ರತಿಭೆಯ ಸಾಹಿತಿ, ಅದ್ಭುತ ಮುನ್ನೋಟದ ಪತ್ರಕರ್ತನಾಗಿ ನಮ್ಮ ನಾಡಿನಲ್ಲಿ ಪ್ರಸಿದ್ಧರಾಗಿದ್ದವರು. ಇಂತಹ ವ್ಯಕ್ತಿಯ ಅನೇಕ ಅಭಿರುಚಿಗಳು ಖಾಸಗಿಯಾಗಿ ಹತ್ತಿರದಿಂದ ನೋಡಿದವರಿಗೆ ಗೊತ್ತಿರುತ್ತದೆ. ನಾವು ಹತ್ತಿರದಿಂದ ನೋಡುವ ಹೊತ್ತಿಗೆ ಅವರೊಬ್ಬ ಬಿಡುವಿಲ್ಲದ ಪತ್ರಕರ್ತನಾಗಿದ್ದರು. ಆದರೂ ಬದುಕಿನ ಸೌಂದರ್ಯಗಳಾದ ಹೂವು, ಹುಲ್ಲು ಇಂಥ ಸಾಮಾನ್ಯ ವಿವರಗಳನ್ನೂ ಅವರು ಗಮನಿಸುತ್ತಿದ್ದರು ಎನ್ನುವುದಕ್ಕಾಗಿ ಹೂಮರಗಳ ಬಗ್ಗೆ ಕೊಂಚ ಹೊರತಾಗಿ ಕಂಡರೂ ವಿಶೇಷವಾಗಿ ಪ್ರಸ್ತಾಪಿಸಬೇಕಾ ಯಿತು.

ಲಂಕೇಶರದ್ದು ಬಹಳ ಸಂಕೀರ್ಣ ...ಕ್ತಿತ್ವ ಎನ್ನುವುದನ್ನು ಅದರ ...ದುಗರು ಹಾಗೂ ಆಪ್ತ ಸ್ನೇಹಿತರು ...ರಿತಿದ್ದರು. ಇವರೊಂದಿಗಿನ ಸ್ನೇಹ ...ರ್ಭಿಡೆಯಿಂದ ಹೆಗಲ ಮೇಲೆ ...ಹಾಕುವಂತಹದ್ದಾಗಿರಲಿಲ್ಲ. "ಸ್ವಲ್ಪ ...ಂದೆಮುಂದೆ ನೋಡಿ ...ಮಾತಾಡಬೇಕು" ...ನ್ನುವಂತಹದ್ದಾಗಿತ್ತು. ಇಂತಹ ವ್ಯಕ್ತಿ ನಮ್ಮದೊಂದು ಸ್ನೇಹಿತರ ಸಮುದಾಯದೊಡನೆ ಹೇಗಿದ್ದರು ಎಂದು ನೆನೆಸಿಕೊಂಡಾಗ ಅಚ್ಚರಿಯಾಗುತ್ತದೆ. ಅವರು ಮೈಸೂರಿನ ತಮ್ಮ ಸ್ನೇಹಿತರನ್ನು ಬಹಳ ಆಪ್ತತೆ, ಪ್ರೀತಿಯಿಂದ ಕಾಣುತ್ತಿದ್ದರು. ನಮ್ಮನ್ನು ನೋಡಲು ಮೈಸೂರಿಗೆ ಬರುತ್ತಿದ್ದರು ಮತ್ತು ವಿಶೇಷ ಸಂದರ್ಭಗಳಲ್ಲಿ ನಾವು ಬೆಂಗಳೂರಿಗೆ ಹೋಗಬೇಕಾಗಿತ್ತು. ಮೈಸೂರಿನ ಫ್ರೆಂಡ್ಸ್ ಎಂದರೆ ಅವರಿಗೆ ಚೂರು ಹೆಚ್ಚಿನ ಪ್ರೀತಿ ಇತ್ತು. ಹೀಗಾಗಿ ನಮ್ಮ ಸ್ನೇಹ ವಲಯದ ರಾಮದಾಸ್, ನಿರ್ಮಲಾ, ಶ್ರೀರಾಮ್ ಮತ್ತು ನಾನು, ಶಿವತೀರ್ಥನ್, ವೈ. ಮಹೇಶ್, ಮಂಡ್ಯದ ಗೆಳೆಯ ಕೇಶವಮೂರ್ತಿಯವರು ಇವರಲ್ಲದೆ ಅಂದಿನ ಎಳೆಯರಾದ ಸ್ವಾಮಿ ಆನಂದ್ ಹೀಗೆ ಸೈನ್ಯದ ಒಂದು ತುಕಡಿಯಂತೆ ಲಂಕೇಶರಲ್ಲಿಗೆ ಹೋದರೆ ಅವರು ಏರ್ಪಡಿಸುತ್ತಿದ್ದ ಸಂತೋಷಕೂಟಗಳ ಕಳೆ ಏರುತ್ತಿತ್ತು.


ಇಂತಹ ಅನೇಕ ಸಂತೋಷಕೂಟಗಳಲ್ಲಿ ಭಾಗವಹಿಸಿದ್ದು ನೆನಪಿಗೆ ಬರುತ್ತಿದೆ. ಲಂಕೇಶ್‌ರವರು ತಮ್ಮ ಹುಟ್ಟುಹಬ್ಬ ಡಿಸೆಂಬರ್ 31 ರ ಮಧ್ಯರಾತ್ರಿ ಹೊಸ ವರ್ಷವನ್ನು ಎದುರುಗೊಳ್ಳುವುದು, ಪತ್ರಿಕೆಯ ದಿನಾಚರಣೆ, ಇನ್ನೂ ಹಲವು ಕಾರ್ಯಕ್ರಮಗಳನ್ನು ಏರ್ಪಡಿಸಿ ಸ್ನೇಹಿತರೊಂದಿಗೆ ಸಂತಸಪಡುತ್ತಿದ್ದರು. ಆತ್ಮೀಯ ಸ್ನೇಹಿತರನ್ನು ಒಬ್ಬೊಬ್ಬರನ್ನಾಗಿ ಕಳೆದುಕೊಂಡ ಮೇಲೆ ಕಳೆದ ಕ್ಷಣಗಳು ಮನಸ್ಸಿನಲ್ಲಿ ಮರುಕಳಿಸಿದಾಗ ಇಷ್ಟು ಸ್ನೇಹ ಸಮೃದ್ಧವಾಗಿದ್ದ ಜೀವನ ನಮ್ಮದಾಗಿತ್ತು ಎಂಬ ಸಂತಸ ಇದ್ದಕ್ಕಿದ್ದ ಹಾಗೆ ಎಲ್ಲವೂ ಬರಿದಾಗಿದೆ ಎಂಬ ರಿಕ್ತಭಾವ, ಮುನ್ನಡೆಯಬೇಕಾದ ದಾರಿಯ ದೂರ ಎಲ್ಲವೂ ಒಂದು ಸಮ್ಮಿಶ್ರ ನೆನಪುಗಳ ಪಾಕ.

ಲಂಕೇಶರ ಸಂತೋಷ ಸಮಾರಂಭಗಳಲ್ಲಿ ನಾವು ಮೈಸೂರಿನ ಸ್ನೇಹಿತರು ನಮ್ಮ ಮಕ್ಕಳೊಡನೆಯೂ ಭಾಗವಹಿಸಿದ್ದೇನೆ. ಹೊಸ ವರ್ಷವನ್ನು ಎದುರುಗೊಳ್ಳುವುದು, ಹುಟ್ಟುಹಬ್ಬ ಇವೆಲ್ಲಾ ಆಮೋದ ಪ್ರಮೋದಗಳ ಹುಚ್ಚು ಮಜಾ. ಪಾನೀಯ ಸೇವನೆ; ಒಲ್ಲದವರಿಗೆ ಸಾಫ್ಟ್ ಡ್ರಿಂಕ್ಸ್ ಅಂತೆ! ಕವಿತೆ ಓದುವ ಕವಿಗಳು, ಸಾಹಿತ್ಯ ಲೋಕದ ಹಿರಿಯರು, ನುರಿತವರು, ಅಂಬೆಗಾಲಿಡುತ್ತಿದ್ದವರು ಎಲ್ಲರೂ ಅವರಿಗಿಷ್ಟವಾದಂತೆ ಕಾಲ ಕಳೆಯಬಹುದಾಗಿದ್ದ ಈ ಕೂಟಗಳಲ್ಲಿ ಮನರಂಜನೆಗೇನೂ ಕೊರತೆಯಿರುತ್ತಿರಲಿಲ್ಲ. ಒಮ್ಮೆ ಗುಬ್ಬಿ ವೀರಣ್ಣನವರ ಮಗಳು ಶ್ರೀಮತಿ ಮಾಲತಮ್ಮ ಹಾಗೂ ಅವರ ಮಗಳು ಜಯಶ್ರೀಯವರು ತಮ್ಮ ಒಡನಾಡಿಗಳೊಡನೆ ಅನೇಕ ರಂಗಗೀತೆಗಳನ್ನು ಹಾಡಿ ನಮ್ಮನ್ನು ಹಿಂದಿನ ಜಮಾನಕ್ಕೆ ಕೊಂಡೊಯ್ದರು. ಇನ್ನೊಂದು ಸಲ ಕೆರೆಮನೆ ಶಂಭು ಹೆಗಡೆಯವರಿಂದ ಯಕ್ಷಗಾನ; ಅಂತಹ ಪ್ರಸಿದ್ಧ ಕಲಾವಿದರ ಕಲೆಯ ಪ್ರದರ್ಶನವನ್ನು ನಾವು ಅತ್ಯಂತ ಖಾಸಗಿಯಾಗಿ, ಹಿಂದೆ ರಾಜಮಹಾರಾಜರು ತಮ್ಮ ದರ್ಬಾರಿನಲ್ಲಿ ಏರ್ಪಡಿಸಿಕೊಳ್ಳುತ್ತಿದ್ದ ನೃತ್ಯ ಸಂಗೀತಗಳ ಸಮಾರಾಧನೆಯಂತೆ ಅನುಭವಿಸಿದೆವು. ಒಮ್ಮೊಮ್ಮೆ ತಮ್ಮ ಆಫೀಸಿನಲ್ಲೇ ತಿಂಗಳಿಗೊಮ್ಮೆ ಏನಾದರೂ ಬೋಧಪ್ರದ ಸಭೆಗಳನ್ನು ಲಂಕೇಶ್‌ರವರು ಏರ್ಪಡಿಸುತ್ತಿದ್ದರು. ಇಂಥ ಒಂದು ಸಂದರ್ಭದಲ್ಲಿ ಸುಪ್ರಸಿದ್ಧ ರಂಗನಟಿ ಹಾಗೂ ಗಾಯಕಿ ಸುಭದ್ರಮ್ಮ ಮನ್ಸೂರ್ ಅದ್ಭುತ ಗಾಯನವನ್ನು ಕೇಳುವ ಸದವಕಾಶ ನನಗೆ ಸಿಕ್ಕಿತ್ತು. ಇದೇರೀತಿ ಪ್ರಸಿದ್ಧ ಕೀಟತಜ್ಞ, ಗಾಂವ್‌ಕರ್ ಎನ್ನುವವರು ಪತ್ರಿಕೆಯ ಆಫೀಸಿನಲ್ಲಿ ಚಿಟ್ಟೆಗಳ ಬಗ್ಗೆ ಮಾತನಾಡಿದರು. ಹೋಗಲು ಸಾಧ್ಯವಾಗಲಿಲ್ಲ ಎಂದು ಪರಿತಪಿಸಿದೆ. ಸಾಹಿತಿ ಲಂಕೇಶರು ಎಲ್ಲ ರೀತಿಯ ಜ್ಞಾನಸೀಮೆಯ ಬಾಗಿಲುಗಳನ್ನು ತೆರೆದಿರಿಸುತ್ತಿದ್ದರು ಎಂಬುದನ್ನು ನೆನೆಸಿಕೊಂಡು ಇವೆಲ್ಲವನ್ನು ಹೇಳಬೇಕಾಯಿತು.

ಮೊದಮೊದಲು ಒಂದೆರಡು ಸಣ್ಣಪುಟ್ಟ ಲೇಖನಗಳನ್ನು ಬರೆದು ಪತ್ರಿಕೆಗೆ ಕಳಿಸಲಾರಂಭಿಸಿದೆ. ಅನನುಭವಿ ಎಂದು



ಪರಿಗಣಿಸದೆ ಪ್ರಕಟಿಸಿದರು. ಲೇಖನಗಳು, ಪ್ರಬಂಧಗಳನ್ನು ಪ್ರಕಟಿಸಿದ ಮೇಲೆ, ಪ್ರಬಂಧ ಇನ್ನು ಸಾಕು ಕತೆ ಬರೆಯಿರಿ ಎಂದು ಪ್ರೋತ್ಸಾಹಿಸಿದರು. ನನ್ನ ಪ್ರಥಮ ಕ[ಥೆ] ಪ್ರಬಂಧಗಾರ್ತಿಯ ಮೊದಲ ಕಥೆ ಎಂದು ಪ್ರಕಟವಾಯಿತ[ು]. ಒಮ್ಮೆ ಮಾದಕವಸ್ತುಗಳ ಬಗ್ಗೆ ನಿಡಿದಾದ ಒಂದು ಲೇಖನವ[ನ್ನು] ಬರೆದೆ. ಅದು ಹಿಂತಿರುಗಿ ಬಂತು ಲಂಕೇಶರ ಪತ್ರದೊಡ[ನೆ]. ವಿಷಯವನ್ನು ಸಮಗ್ರವಾಗಿ ಚಿಕ್ಕದಾಗಿ ಚೊಕ್ಕವಾಗಿ ಹೇ[ಳಿ] ಬರೆಯಬೇಕೆಂಬ ಸಲಹೆ ಪತ್ರದಲ್ಲಿತ್ತು! ಇದು ಮುಂ[ದೆ] ನನ್ನ ಎಲ್ಲ ಬರವಣಿಗೆಗಳನ್ನು ತಿದ್ದಿಕೊಳ್ಳಲು ಮಾರ್ಗದರ್ಶ[ನ]ವಾಯಿತು. ಎಷ್ಟೋ ವೇಳೆ ಕೆಲವು ಪುಸ್ತಕ ಗಳನ್ನು ಕಳ[ಿ]...



ಎಲ್ಲರೊಳಗೊಬ್ಬ ಮನು ಇರುತ್ತಾನೆ. ಅವರೊಳಗಿನ ಮನುವನ್ನು ಅವರೇ ತೆಗೆದು ಹೊರಹಾಕಬೇಕು. ಇಲ್ಲದಿದ್ದರೆ ಯಾವ ಮನುಷ್ಯ ಸಂವೇದನೆಯೂ ಮುಕ್ತವಾಗಿ ಒಳ ನುಸುಳಲು ಸಾಧ್ಯವಿಲ್ಲ,

ನನ್ನೊಳಗಿದ್ದ ಮನುವಿನಿಂದ ನಾ ಕಳಚಿಕೊಳ್ಳುವಂತೆ ಮಾಡಿದ ಮೊದಲ ಗುರು ಲಂಕೇಶ್.

ಪ್ರಾಯ ಬರುವ ದಿನಗಳವು. ದೇಹದ-ಸಮಾಜದ ಅರಿವು ನಿಧನಿಧಾನಕ್ಕೆ ಸ್ಫೋಟಗೊಳ್ಳುತ್ತಿದ್ದ ಕಾಲ. ನನ್ನ ಸುಂದರ ಜಗತ್ತಿನೊಳಗೆ ಎಲ್ಲವೂ ಪ್ರವೇಶ ಪಡೆಯತೊಡಗಿದ್ದವು. ಕಾಲ ನಡುವೆ ನೇತಾಡುತ್ತಿದ್ದ ಗರ್ಭಕೋಶ ಲೆಕ್ಕಿಸದೆ ನಗ್ನಳಾಗಿ ಊರೂರು ಅಲೆಯುತ್ತಿದ್ದ ಪದೇಪದೇ ಅತ್ಯಾಚಾರ ಕ್ಕೊಳಗಾಗಿ ರಕ್ತ ಹರಿಸುತ್ತಿದ್ದ ಹುಚ್ಚಿ ಭೀಭತ್ಸವೆಂಬು ದನ್ನು ನನ್ನ ಜಗತ್ತಿಗೆ ಮೊದಲು ಪರಿಚಯಿಸಿದಳು. ಗಂಡನ ಹೊಡೆತ, ಕುಡಿತ ವಿಕೃತಿಗೆ ನಗುನಗುತ್ತಿದ್ದವಳು ಶವವಾದದ್ದು; ಎಂಟನೇ ಇಯತ್ತೆಗೆ ಶಾಲೆಬಿಟ್ಟ ಗೆಳತಿ ಬಿಕ್ಕುತ್ತ ಗಂಡನ ಮನೆಗೆ ಹೋದದ್ದು; ಮಚ್ಚುಗಳ ರಕ್ತಸಿಕ್ತ ಕತೆಗಳು - ಇವೆಲ್ಲವೂ ನೋವು, ಭಯ, ಅಸಹಾಯಕತೆಗಳನ್ನು ಪ್ರಜ್ಞೆಯೊಳಗೆ ನುಗ್ಗಿಸಿ ಗೊಂದಲಗೊಂಡ ಹೊತ್ತು ಅದು. ಆಗ ಬದುಕೆಂದರೆ ಇದೆಲ್ಲವೂ; ಅಲ್ಲಿ ಬೆಚ್ಚನೆಯ ಪ್ರೀತಿ, ಉರಿವ ದ್ವೇಷ, ತಣ್ಣಗಿನ ಕ್ರೌರ್ಯ, ಸುಡುವ ಕಾಮ ಎಲ್ಲವೂ ಇದೆ, ಇರಲೇಬೇಕು ಎಂದು ಹೇಳಿದ ಗುರು ಲಂಕೇಶ್.

ಕುಗ್ರಾಮದ ಮೂಲೆಯೊಂದರಲ್ಲಿ ಕುಳಿತು, ಶುರುವಾದ ದಿನದಿಂದ ಪ್ರತಿವಾರ ತಪ್ಪದೇ ಓದುತ್ತಿದ್ದ ಲಂಕೇಶ್ ಪತ್ರಿಕೆ ಬೊಗಸೆಯಲ್ಲಿ ಆಕಾಶ ಹಿಡಿದ ಸಂಭ್ರಮ ನೀಡಿದ್ದು, ವಿಸ್ತಾರ ಓದಿಗೆ ಹಂಬಲಿಸುವಂತೆ ಮಾಡಿದ್ದು ನಿಜ. ಪತ್ರಿಕೆ ಓದಿದರೆ ಪಾಕೆಟ್ ಎನ್‌ಸೈಕ್ಲೋಪಿಡಿಯಾ ಹಿಡಿದಂತಾಗುತ್ತಿತ್ತು. ಹೈಸ್ಕೂಲು ಓದುವ ದಿನಗಳಲ್ಲೇ ದೇಶದ ಯಾವ್ಯಾವುದೋ ರಾಜ್ಯಗಳ ರಾಜಕೀಯ ಲೆಕ್ಕಾಚಾರ, ಚುನಾವಣೆ, ಲಜ್ಜೆಗೆಟ್ಟ ರಾಜಕಾರಣದ ಬಗೆಗೆ ಅರಿವು ಮೂಡಿಸಿದ್ದೂ ಪತ್ರಿಕೆಯ ಬರಹಗಳೇ. ಸಿನಿಮಾ, ಆಟ, ಸಾಹಿತ್ಯ, ರಾಜಕೀಯ, ಇತಿಹಾಸ, ಮನೋವಿಜ್ಞಾನ, ಭೂಗೋಳ... ಎಲ ಎಲಾ! ಈ ಲಂಕೇಶೆಂದರೆ ಅತಿ ಮಹಾನವನೇ ಇರಬೇಕು. ಪಿಕಾಸೋ, ನೆರೂಡ, ಗ್ರೆಟಾ ಗಾರ್ಬೋ, ಜೆಫ್ರಿ ಬರ್ನಾರ್ಡ್, ಬೋದಿಲೇರ್, ಆಡ್ರೆ ಹೆಬರ್ನ್ ಎಂಬ ಕೇಳೇ ಇರದ ಚಿತ್ರವಿಚಿತ್ರ ಹೆಸರಿನ ವ್ಯಕ್ತಿಗಳ ಬಗೆಗೆಲ್ಲ ಲೀಲಾಜಾಲವಾಗಿ, ರೋಚಕವಾಗಿ ಬರೆದು ತಿಳಿಸುತ್ತಿದ್ದವರು ಲಂಕೇಶ್. ಅಲ್ಲದಿದ್ದರೆ ಆ ವಯಸ್ಸಿನಲ್ಲಿ ಆ ಕಾಲದಲ್ಲಿ ಅವೆಲ್ಲದರ ಬಗೆಗೆ ತಿಳಿದುಕೊಳ್ಳುವ ಸಾಧ್ಯತೆಯೇ ಇರಲಿಲ್ಲ. ಹಳ್ಳಿಯಲ್ಲೇ ಹುಟ್ಟಿ ಬೆಳೆದು, ಬರೀ ಕನ್ನಡ ಮಾತ್ರ ಓದಿ, ನಗರವಾಸಿಯಾದಾಗಲೂ ಹಳ್ಳಿತನ ಬಿಡದಂತೆ, ಕೀಳರಿಮೆ ಬೆಳೆಯದಂತೆ ಲಂಕೇಶ್ ಜ್ಞಾನ ಕೈಹಿಡಿದು ನಡೆಸಿತು. ಇಂಗ್ಲಿಷ್ ಕಂದಮ್ಮಗಳಿಗಿಂತ ಕಡಿಮೆಯಿಲ್ಲವೆಂಬ ಆತ್ಮವಿಶ್ವಾಸವನ್ನೂ, ಕೊಂಚ ಮೇಲರಿಮೆಯನ್ನೂ ಇದು ಹುಟ್ಟಿಸಿರಬಹುದು. ಬರಬರುತ್ತ ಲಂಕೇಶ್ ಪ್ರಭಾವ ಕಡಿಮೆಯಾದರೂ ಬಿಡುವಿರದ ಮೆಡಿಕಲ್ ಓದು, ಪ್ರಾಕ್ಟೀಸ್‌ಗಳ ನಡುವೆಯೂ ಮನಕಂಟಿ ಕುಳಿತದ್ದು ಅವರ ಬರಹಗಳೇ.



• ಡಾ. ಎಚ್.ಎಸ್.ಅನುಪಮಾ

ಮಹಾತ್ಮನೇ ಆಗಲೀ, ಸಾಮಾನ್ಯ ಮನುಷ್ಯನೇ ಆಗಲೀ, ಯಾರದೇ ಸ್ವಭಾವ-ನಡತೆಗೂ ಒಮ್ಮೆಲೇ ಕ್ಲೀನ್‌ಚಿಟ್ ಕೊಡದೇ ಸ್ವತಃ ತನ್ನ ಬಗೆಗೂ ನಿಷ್ಠುರ ಅನುಮಾನಗಳನ್ನಿಟ್ಟುಕೊಂಡು ಬರೆದವರು ಲಂಕೇಶ್. ಈ ಲಂಕೇಶ್‌ತನ ನಿಜದ ಅವರಲ್ಲಿ ಎಷ್ಟಿತ್ತೋ, ಆದರೆ ನನ್ನ ಮಟ್ಟಿಗದು ಅಳತೆಗೋಲು. ನನ್ನ ಹಾದಿಯಲ್ಲಿ ನಂತರ ಕೆಲವಾರು ಗುರುಗಳ ಭೇಟಿಯಾದರೂ ಅವರನ್ನು ಲಂಕೇಶ್ ಅಳತೆಗೋಲಿನಿಂದಲೇ ಅಳೆದು ಸ್ವೀಕರಿಸಿದ್ದೇನೆ, ನಿರಾಕರಿಸಿದ್ದೇನೆ.

ಒಮ್ಮೆಯೂ ನೋಡಲಿಲ್ಲ, ಪಾಠ ಕೇಳಲಿಲ್ಲ, ಪತ್ರ ವ್ಯವಹಾರ ಮಾಡಲಿಲ್ಲ, ಫೋನಿಲ್ಲದ್ದರಿಂದ ಸಂಭಾಷಣೆ ದೂರವೇ ಉಳಿಯಿತು. ಆದರೂ ಪತ್ರಿಕೆಯ ಮೂಲಕ ನಿರಂತರ ಸಂಪರ್ಕದಲ್ಲಿದ್ದ ವ್ಯಕ್ತಿ ಲಂಕೇಶ್. ಅವರ ಪ್ರಭಾವ ಇಷ್ಟಿಷ್ಟೆಂದು ಪಟ್ಟಿಮಾಡಿ ಹೇಳಹೊರಟರೆ ಅಜ್ಞಾತ ಗುರು-ಶಿಷ್ಯ ಸಂಬಂಧ ಸವಕಲಾಗಿಬಿಡುವ ಭಯ.

ಈ ಏಕಲವ್ಯ ಶಿಷ್ಯೆಗೆ ಒದಗಿಬಂದ ಏಕಲವ್ಯನಂಥ ಗುರು ಲಂಕೇಶ್.



...ಯು ಹೇಳುತ್ತಿದ್ದರು. ಹೀಗೆ ನನಗೆ ಸಿಕ್ಕಿದ್ದು ಕ್ಯಾಥರೀನ್ ...ಪೋರ್ಟರಳ ಒಂದು ಕಥಾ ಸಂಗ್ರಹ ಹಾಗೂ ...ರ್ಮನ್ ಕಸ್ಸಿನ್ಸ್‌ನ An anatomy of illness ...ವ ಪುಸ್ತಕಗಳು. ಆನ್‌ಪೋರ್ಟರಳ ಯಾವುದಾದರೂ ...ವನ್ನು ಭಾಷಾಂತರಿಸಲು ಲಂಕೇಶ್‌ರವರು ಹೇಳಿದ್ದರು. ಪೋರ್ಟರಳ `The fig tree' ಎಂಬ ಕಥೆ ತುಂಬಾ ಹಿಡಿಸಿತ್ತು. ಪ್ರಯತ್ನಪಟ್ಟೆ, ಸಾಧ್ಯವಾಗಲಿಲ್ಲ. ...ವನ್ನು ಅವರಿಗೇ ಕಳಿಸಿ, ಇದರ ಅನುವಾದ ನಿಮ್ಮಂತಹ ...ಶೀಲ ಲೇಖಕರಿಗೆ ಮಾತ್ರ ಸಾಧ್ಯ ಎಂದು ಹೇಳಿದೆ. ಪೋರ್ಟರಳ 'He' ಎಂಬ ಕಥೆಯನ್ನೂ, ...rman Cousins ಬಗ್ಗೆ ಲೇಖನವನ್ನೂ ಲಂಕೇಶ್ ...ು ಬರೆದದ್ದು ನೆನಪಾಗು ತ್ತದೆ. ಈ ತರಹದ ಓದು ...ರ ಚುಡಾಯಿಸುವಿಕೆಗೂ ಕಾರಣಗಳಾಗುತ್ತಿದ್ದವು. ನಾವು ...ು ಸಾರ್ ಆನ್ ಪೋರ್ಟರ್ ನಿಮ್ಮ ಪ್ರೀತಿಯ ...ಕಿಯಾಗಬೇಕಿದ್ದರೆ ಅವಳು ಹಂಚಕಡ್ಡಿಯೆ ಹಾಗೆ ...ಕಲಿಯಾಗಿದ್ದಳೇನೊ" ಎಂದು ರೇಗಿಸಿದರೆ "ಛೀ, ...ಸಿಲ್ಲಿ" ಎಂದು ನಗುತ್ತಿದ್ದರು.


...ಒಂದು ದಿನ ಒಂದು ಪುಸ್ತಕಗಳ ಬಂಡಲ್ ಲಂಕೇಶರ ...ೂಡನೆ ನಮ್ಮ ಮನೆಗೆ ಬಂದಿತು. ಆ ಪುಸ್ತಕಗಳನ್ನು ಪತ್ರಿಕೆಗಾಗಿ ಚಿಕ್ಕದಾಗಿ ಪುಸ್ತಕ ಪರಿಚಯ ಮಾಡಿ ...ು ಆದೇಶ ಪತ್ರದಲ್ಲಿತ್ತು. ಈ ಕೆಲಸವನ್ನೂ ಮಾಡಿದೆ. ಬರೆಯಲು ಪ್ರೋತ್ಸಾಹ, ಅವಕಾಶ ಪಡೆದ ಅನೇಕ ...ಕಿಯರು ಇಂದು ಸುಪ್ರಸಿದ್ಧರಾಗಿದ್ದಾರೆ.

...ಮತ್ತೊಂದು ವಿಷಯ. ಮೈಸೂರಿನ ಲಂಕೇಶ್ ...ಯ ಏಜೆಂಟ್ ಅವರ ಆದೇಶದಂತೆ ಪ್ರತಿ ತಿಂಗಳು ...ಯ ಆದಾಯದ ಕೆಲವು ಅಂಶಗಳನ್ನು ಶ್ರೀರಾಮ್ ...ತಲ್ಲಿ ಇರಿಸಬೇಕಾಗಿತ್ತು. ಈ ಹಣವನ್ನು ಅವಶ್ಯಕತೆ ...ದ್ದವರಿಗೆ ಲಂಕೇಶರ ಹೇಳಿಕೆಯಂತೆ ಕೊಡಬೇಕಾಗಿತ್ತು. ಸಂಕಷ್ಟದಲ್ಲಿದ್ದವರಿಗೆ ತೆರೆಮರೆಯ ಸಹಾಯ.

...ಕ್ರಮೇಣ ಲಂಕೇಶರ ಆರೋಗ್ಯದ ಪರಿಸ್ಥಿತಿ, ಕಣ್ಣಿನ ...ದರೆ ಹೆಚ್ಚಾಯಿತು. ಆದರೂ ಅವರದ್ದೇ ಸ್ಪೆಷಲ್ ...ಾದಕೀಯ, ಇತರ ವಿದ್ಯಮಾನಗಳ ಬಗ್ಗೆ ಬರೆಯುತ್ತಲೇ ...ರು. ಸ್ನೇಹಿತರು "ನಿಮ್ಮ ಕಣ್ಣಿಗೆ ಇಷ್ಟು ...ದರೆಯಾದರೂ ಬರೆಯುತ್ತೀರಲ್ಲಾ" ಎಂದು ಕೇಳಿದಾಗ ...ೇಶರು ಹೇಳಿದ್ದು "The day I can't read, I ...not be here."

...ನಾವು ಅನುಭವಿಸಿದ್ದೆಲ್ಲಾ ಕಾಲದೊಂದಿಗೆ ಕಳೆದು ...ಯಿತು. ನೆನಸಿಕೊಂಡಾಗ ಮಾತ್ರ ಅವು ನಾವಿದ್ದೇವೆ ...ಮನದ ಮೂಲೆಯಲ್ಲಿ ಎಂದು ಹೇಳುತ್ತದೆ.

ಲಂಕೇಶ್ ಪತ್ರಿಕೆಯೇ ನನ್ನ ಮುಕ್ತ ವಿಶ್ವವಿದ್ಯಾಲಯ



1993ರಲ್ಲಿ ಲಂಕೇಶರು ಬರೆದ 'ಗುಣಮುಖ' ನಾಟಕವನ್ನು 1998ರಲ್ಲಿ ಓದದಿದ್ದಿದ್ದರೆ, ಅಲಾವಿಖಾನ್ ಎಂಬ ಬಡ ಹಕೀಮನನ್ನು ಅಷ್ಟು ಹತ್ತಿರದಿಂದ ಮುಟ್ಟದಿದ್ದಿದ್ದರೆ ಬಹುಶಃ ನನಗೆ ಲಂಕೇಶರು ಇಡಿಯಾಗಿ ದಕ್ಕುತ್ತಿರಲೇ ಇಲ್ಲವೇನೋ. ಸೋಲಿಗಿಂತಲೂ ಭೀಕರ ಅನ್ನಿಸುವ ಅವಮಾನದಿಂದ ಪಾರಾಗುವ ದಾರಿಗಳಿಗಾಗಿ ಹುಡುಕಿ ಹಸಿದಿದ್ದ ನನಗೆ ಇವತ್ತೋ ನಾಳೆಯೋ ಏನೋ ಘಟಿಸಲಿದೆ ಎಂಬ ನಿರೀಕ್ಷೆಯನ್ನಾದರೂ ಇಟ್ಟುಕೊಳ್ಳುವಂತೆ ಯಾರಾದರೂ ಬಂದು ಹೇಳಬಾರದೆ ಎಂದು ಕಾಯುತ್ತಿದ್ದೆ. ಹಾಗೇ ಕಾದು ಬೇಸತ್ತು ಕೊನೆಗೆ ಏನೊಂದು ಘಟಿಸದೆ ನಮ್ಮೂರಿನ ಲೈಬ್ರರಿಯ ಮೂಲೆಯೊಂದರಲ್ಲಿ ಕೂತು ಒಂದೇ ಗುಕ್ಕಿಗೆ ಓದಿ ಮುಗಿಸಿದ 'ಗುಣಮುಖ' ನನ್ನನ್ನು ಎಲ್ಲಿಂದೆಲ್ಲಿಗೋ ದಾಟಿಸಿದೆ. ಬರೀ ಲಂಕೇಶರ ಹೆಸರು ಕೇಳಿದ್ದ ನಾನು 'ಗುಣಮುಖ' ಓದುವತನಕ ಅವರನ್ನು ಗಂಭೀರವಾಗಿ ಪರಿಗಣಿಸಿರಲೇ ಇಲ್ಲ. ಅದು 1999. ದೇಶದ ತುಂಬಾ ಕಾರ್ಗಿಲ್ ಯುದ್ಧದ ಬಿಸಿ. ಇಡೀ ದೇಶ ಯುದ್ಧ ಗೆದ್ದ ಸಂಭ್ರಮದಲ್ಲಿತ್ತು. ಓದುಗನ ನಾಲಿಗೆ ತಣಿಸಲು ಅನುವಾಗುವಂತೆ ಪತ್ರಿಕೆಗಳು ಯುದ್ಧಭೂಮಿಯಿಂದ ತಂದ ವರದಿಗಳಿಗೆ ರೋಚಕತೆಯ ಬಣ್ಣ ಮೆತ್ತುತ್ತಿದ್ದವು. 'ಇಂಥ ಯುದ್ಧ ಕೂಡಲೇ ಕೊನೆಗೊಳ್ಳಬೇಕು. ಒಂದೊಂದು ಆಟೋಮ್ಯಾಟಿಕ್ ಬಂದೂಕು, ಎಕೆ-50, ಅಣುಮೂತಿಯ ರಾಕೆಟ್, ಒಂದೊಂದು ಜೆಲ್ಲಿಯನ್ನು ರೂಪಿಸಲು ತುರ್ತಾಗಿ ಬೇಕಾಗಿದೆ. ಇದು ರಾಜಕಾರಣಿಗಳಿಗೆ, ಜಾತಿವಾದಿಗಳಾದ ಉದ್ಧಟರಿಗೆ, ಯುದ್ಧವನ್ನು ಪ್ರೇಕ್ಷಕರಂತೆ ನೋಡುತ್ತ ಚಪ್ಪಾಳೆ ತಟ್ಟುವ ಷಂಡರಿಗೆ ಬೇಗ ತಿಳಿಯಲಿ' ಎಂದು ಲಂಕೇಶ್ ತಮ್ಮ 'ಟೀಕೆ ಟಿಪ್ಪಣಿ' ಅಂಕಣದಲ್ಲಿ ಬರೆದಿದ್ದರು. ಯುದ್ಧಪೀಡಿತ ಸುದ್ದಿಗಳನ್ನು, ಯುದ್ಧಚಿತ್ರಗಳನ್ನು ತರುವ ಪತ್ರಕರ್ತರ ದುರಾಸೆ ಎಂಥದ್ದು ಎಂಬುದನ್ನು ಲಂಕೇಶರು ಆ ಲೇಖನದಲ್ಲಿ ವಿವರಿಸಿದ್ದರು. ಇಂಥ ಹುಡಿ ಪತ್ರಕರ್ತರು ನನಗೆ ಒಂದು ಕಾಲದಲ್ಲಿ ದೊಡ್ಡ ಸ್ಟಾರ್‌ಗಳಂತೆ ಕಂಡಿದ್ದರು. ಈ ದೇಶದಲ್ಲಿ ಇನ್ನೂ ಜೀವಂತವಾಗಿರುವ ಬಡತನ, ಅಸ್ಪೃಶ್ಯತೆ, ಜಾತೀಯತೆ, ಮೇಲು-ಕೀಳುಗಳ ಬಗ್ಗೆ ಯಾವತ್ತೂ ಏನೊಂದು ಮಾತನಾಡದ ಪತ್ರಕರ್ತರ ಹುಸಿ ದೇಶಪ್ರೇಮದ ಹೆಸರಿನ ಬೊಗಳೆ ಎಂಥದ್ದು ಎಂಬುದನ್ನು ಲಂಕೇಶ್ ತಮ್ಮ ಎಂದಿನ ಚುಚ್ಚುಧಾಟಿಯಲ್ಲಿ ಅವತ್ತು ಬರೆದಿದ್ದರು.

• ಕೆ.ಎಲ್.ಚಂದ್ರಶೇಖರ್ ಐಜೂರ್



ಮುಂದೆ ಹೆಚ್ಚಿನ ಓದಿನ ಸಲುವಾಗಿ ಬೆಂಗಳೂರಿಗೆ ಬಂದಾಗ ಇಲ್ಲಿನ ಅತಿ ಶಿಸ್ತಿನ ರಸ್ತೆಗಳನ್ನು ಕಂಡು ಬೆಚ್ಚಿದ್ದೆ. ಯಾವತ್ತೋ ಓದಿಕೊಂಡಿದ್ದ ನೀಲು, ಮರೆಯುವ ಮುನ್ನ, ಅವ್ವ, ಅಲಾವಿಖಾನ್ ನನ್ನನ್ನು ಬೆಂಗಳೂರಿನಲ್ಲಿ ತಬ್ಬಲಿಯನ್ನಾಗಿಸಲಿಲ್ಲ. ಲಂಕೇಶರ ಬರಹದಿಂದ ಪ್ರಭಾವಿತಗೊಂಡ ಮೂರ್‍ನಾಲ್ಕು ತಲೆಮಾರುಗಳ ಅನೇಕ ಲೇಖಕರನ್ನು ಹುಡುಕಿ ಹೊರಟೆ. ಈ ಹಾದಿಯಲ್ಲಿ ಮನುಷ್ಯನನ್ನು ಅರ್ಧ ನಂಬಿ ಉಳಿದರ್ಧ ಅನುಮಾನವಿಟ್ಟುಕೊಳ್ಳಬೇಕೆಂಬ ದಿವ್ಯಸತ್ಯಗಳು ಗೊತ್ತಾದವು. ತೀರಾ ಹತಾಶೆ ತುಂಬಿಕೊಂಡ ದಿನಗಳಲ್ಲಿ 'ಹುಳಿಮಾವಿನ ಮರ' ತೆರೆದು ಆ ಎರಡು ಪುಟಗಳನ್ನು ಮತ್ತೆಮತ್ತೆ ಓದಿ ಕಣ್ಣೀರಾಗಿ ಹಗುರಾಗುತ್ತಿದ್ದೆ. ತಮ್ಮ ತಾಯಿ ಮತ್ತು ತಂದೆಯರ ಸಾವು ತಮ್ಮನ್ನು ತಟ್ಟಿದ ಕ್ಷಣಗಳನ್ನು ನೆನೆದು ಲಂಕೇಶ್ ಆರ್ದ್ರರಾಗುವ ಎರಡು ಚಿತ್ರಣಗಳು ಅವರ ಆತ್ಮಕತೆಯಲ್ಲಿವೆ: 'ನಾನು ಆಗ ಬಡವನಾಗಿದ್ದೆ. ಅದಕ್ಕಿಂತ ಹೆಚ್ಚಾಗಿ ನಾನು ಸರಿಯಾಗಿ ಬದುಕುತ್ತಲೇ ಇರಲಿಲ್ಲ. ಹೊಸ ಅನುಭವಗಳಿಗಾಗಿ ಹಸಿದುಹೋಗಿದ್ದೆ. ನನ್ನ ಅವ್ವ ನನಗೆ ಕೊಟ್ಟಿದ್ದರಲ್ಲಿ ಒಂದು ಪಾಲನ್ನೂ ಹಿಂದಿರುಗಿಸಲಿಲ್ಲ ಅನ್ನಿಸಿತು.' 'ಹೆಣವನ್ನು ಮಣ್ಣು ಮಾಡುವ ಸಮಯ. ಮಳೆ ಹೆಚ್ಚಾಯಿತು. ಆತನನ್ನು ಸಮಾಧಿ ಮಾಡುತ್ತಿದ್ದ ಗದ್ದೆ ಅವನು ಮಾಡಿದ್ದು... ಬೀಳುಬಿದ್ದ ಗದ್ದೆಯಲ್ಲಿ ನಿತ್ಯ ದುಡಿದ ತಂದೆಯ ಹೆಣ ದಫನ್ ಆಯಿತು. ಮಳೆ ಬರುತ್ತಲೇ ಇತ್ತು.' ಲಂಕೇಶರನ್ನು ತೀವ್ರವಾಗಿ ಓದಿಕೊಂಡಿದ್ದರಿಂದಲೋ ಏನೋ ಕಾಡುಹರಟೆಯಲ್ಲಿ ನಾಶವಾಗುವ ಸೋಗಲಾಡಿಗಳಿಂದ ದೂರವೇ ಉಳಿದೆ. ತೋರಿಕೆಯ ಪ್ರೀತಿ, ವಿಶ್ವಾಸ ಬಡ್ಡಿ ಆಸೆಯ ಡಿಪಾಜಿಟ್‌ಗಳು; ಏಕಾಂತವೆಂಬುದು ಬದುಕಿನ ಏಕೈಕ ಸ್ವರ್ಗವೆಂಬ ಲಂಕೇಶರ ಪಾಠಗಳು ನಾನು ಬೆಂಗಳೂರಿನಲ್ಲಿ ಇದ್ದಷ್ಟು ದಿನವೂ ನನ್ನನ್ನು ಪೊರೆದವು. ಕಾಲದ ಹೊಡೆತಕ್ಕೆ ಸಿಕ್ಕಿ ಎಲ್ಲೋ ಕಳೆದು ಹೋಗಿದ್ದ ಗಾಂಧಿ ಎಂಬ ಮಹಾತ್ಮ ಕರ್ನಾಟಕದಲ್ಲಿ ಮತ್ತೆ ನವೀಕರಣಗೊಂಡದ್ದೇ ಲಂಕೇಶರಿಂದ ಎಂಬುದಕ್ಕೆ ಅವರ ಟೀಕೆ-ಟಿಪ್ಪಣಿಗಳಿಗಿಂತ ದೊಡ್ಡ ಪುರಾವೆ ಬೇಕೇ?

'ಲಂಕೇಶ್ ಪತ್ರಿಕೆ'ಯೇ ನನ್ನ ಮುಕ್ತ ವಿಶ್ವವಿದ್ಯಾಲಯ. ಇಲ್ಲಿ ನಾನು ಪಡೆದದ್ದು, ಕಲಿತದ್ದು ಅಪಾರ. ಲಂಕೇಶರು ತೀರಿಕೊಂಡ ಸುದ್ದಿ ಕಿವಿಗೆ ಬಿದ್ದಾಗ ತತ್ತರಿಸಿ ಹೋಗಿದ್ದೆ. ರಾಮನಗರದಿಂದ ಬೆಂಗಳೂರು ತಲುಪಿ ಲಂಕೇಶರನ್ನು ಕೊನೆಯ ಸಲವಾದರೂ ಕಾಣಬೇಕೆನ್ನುವ ನನ್ನ ತಹತಹ ನೋಡಿ ನನ್ನದೇ ಖಾಲಿಜೇಬು ನಗುತ್ತಿತ್ತು. ಅದೇ ಹೊತ್ತಿಗೆ ಗೆಳೆಯನೊಬ್ಬನ ನೆರವಿನಿಂದ ನನ್ನ ಗುರು ಎಮ್.ಆರ್.ಕಮಲರಿಗೆ ಪೋನ್ ಮಾಡಿದೆ. ಅವರೊಂದಿಗೆ ಮಾತನಾಡಿ ಪೋನ್ ಕೆಳಗಿಡುವಾಗ ಅವರು ನನ್ನ ಆ ಸಂದರ್ಭದ ಮುಗ್ಧತೆಯನ್ನು ಕಂಡೋ ಏನೋ 'ಹತ್ತು ವರ್ಷಗಳ ನಂತರ ನಿನಗೆ ಲಂಕೇಶ್ ಇನ್ನೂ ಸ್ಪಷ್ಟವಾಗಿ ಅರ್ಥವಾಗಬಹುದು' ಎಂದಿದ್ದರು. ಹಾಗೇ ಅವರು ಹೇಳಿ ಹೆಚ್ಚೂಕಮ್ಮಿ ಹನ್ನೆರಡು ವರ್ಷಗಳಾಯಿತು. ಕೇವಲ ನೀಲು ಪದ್ಯಗಳಿಗಾಗಿ, ಅವ್ವನ ಸಾಲುಗಳಿಗಾಗಿ ಲಂಕೇಶರೆಡೆಗೆ ಚಡಪಡಿಸುತ್ತಿದ್ದ ಅವತ್ತಿನ ನನ್ನ ಎಳೆಯ ಮನಸ್ಸು ಇವತ್ತು ಕೋಮು ನಂಜುಕಾರುವ ವಿಕೃತರೆದುರು ಹೇಗೆ ನಿಲ್ಲಬೇಕೆಂಬ ಅರಿವನ್ನು ಲಂಕೇಶರಿಂದಲೇ ದಕ್ಕಿಸಿಕೊಂಡಿದೆ.



...ಮ್ಮಲ್ಲಿ ಮೇಷ್ಟ್ರು ಇದ್ದಾರೆ



• ಬಸವರಾಜ ಹಳ್ಳಿ, ಹಸಮಕಲ್

ಹುಳಿಮಾವಿನ ಮರದ ಗಾಢ ನೆರಳಿಗೆ ಒಡ್ಡಿಕೊಳ್ಳುತ್ತಿದ್ದಂತೆ; ಲಂಕೇಶ್ ನನ್ನಲ್ಲಿ ಟಿಸಿಲೊಡೆಯುತ್ತಾ ಹೋದರು. ಚೂರು-ಚಾರು ಅಲ್ಲಲ್ಲಿ ವ್ಯಕ್ತಿಗತ ಓದಿಕೊಂಡಿದ್ದೆನಾದರೂ, ಲೈಬ್ರರಿಯಲ್ಲಿ ದೊರೆತ ಟೀಕೆ-ಟಿಪ್ಪಣಿ ಪುಟಗಳು ನನ್ನಿಂದ ಪಟಪಟ ತಿರುಗಿಸಿಕೊಂಡವು. ನೀಲುವಿನ ಪೋಲಿ ಪದ್ಯಗಳು ಹೊಸ ಗುಂಗು ಹಿಡಿಸಿದವು.

ಯಾವ ಲೇಖಕರು ವ್ಯಕ್ತಿಯ ಬದುಕಿಗೆ ಹೆಚ್ಚು ಮುಖಾಮುಖಿಯಾಗುತ್ತಾರೋ ಆಪ್ತವಾಗುತ್ತಾರೆ. ಇಂತವರಲ್ಲಿ ಲಂಕೇಶರದು ಮೊದಲ ಸಾಲು. ಅವರ ತಳಮಳಗಳು ಕೆಲವೊಂದು ಸಲ ನನ್ನವೂ ಆಗಿವೆ. ಆ ಕಾರಣ ಪದೇ ಪದೇ ನೆಪ್ಪಿಗೆ ಬರುತ್ತಾರೆ. ಅವರ ಸಾಹಿತ್ಯ ಜೊತೆಗೆ ರಾಜಕೀಯ ಚಿಂತನೆ, ಸಾಹಿತ್ಯ ವಿಮರ್ಶೆ, ಸಮಾಜ-ಸಂಸ್ಕೃತಿ ಮತ್ತು ಎಚ್ಚರ ಪ್ರಜ್ಞೆ ಅವುಗಳ ಒಟ್ಟು ಮೊತ್ತ ಪ್ರಭಾವಕ್ಕೆ ಕಾರಣ. ಮನುಜ ಸಹಜ ದೌರ್ಬಲ್ಯಗಳ ನಡುವೆಯೇ ವ್ಯಕ್ತಿ ನಿಲ್ಲಬಹುದಾದ ಎತ್ತರವನ್ನು ತೋರಿಸಿದವರು ಅವರು.

ಪೋಲಿ ಪದ್ಯಗಳ ಮೂಲಕವೇ ಚಿಗುರು ಮೀಸೆ ಹುಡುಗರನ್ನು ಮತ್ತೆ ಮತ್ತೆ ಚಿಂತನೆಗೆ ಹಚ್ಚುವ ತಾಕತ್ತು ಲಂಕೇಶರಿಗಿತ್ತು, ಹಳ್ಳಿಯಿಂದ ದೂರದ ಪಟ್ಟಣದಲ್ಲಿ ಬದುಕುತ್ತಾ ಭಾವತೀವ್ರತೆಯೊಂದಿಗೆ ಬರೆದ ಕಥೆ, ಕಾದಂಬರಿ ಹಾಗೂ ಅವ್ವ, ಅಪ್ಪರ ಕುರಿತ ಅನೇಕ ಟಿಪ್ಪಣಿಗಳು ನನಗೆ ಮುದ ನೀಡಿವೆ.


ಸವಾಲುಗಳನ್ನು ಅವರು ಇಚ್ಛೆಪಟ್ಟು ತೆಗೆದುಕೊಂಡ ಪರಿ ನನ್ನಲ್ಲಿ ಬೆರಗಿಗೆ ಕಾರಣವಾಗಿದೆ. ಓರ್ವ ಪತ್ರಕರ್ತನಾಗಿದ್ದುಕೊಂಡು ಸಿನಿಮಾ, ಕೃಷಿ, ಕ್ರೀಡೆ ಹೀಗೆ ವಿಭಿನ್ನ ಕ್ಷೇತ್ರಗಳಲ್ಲಿ ಬಲು ಚೈತನ್ಯದಿಂದ ತೊಡಗಿಸಿಕೊಂಡಿದ್ದು ಅವರಲ್ಲಿನ ಚಿಂತನಾದೃಷ್ಟಿಯ ವಿಸ್ತಾರತೆಗೆ ಕುರುಹು. ಸೃಜನಶೀಲ ಮನಸ್ಸು ಬದುಕಿನ ಸೌಂದರ್ಯಕ್ಕೆ ತುಡಿಯುತ್ತಿರುತ್ತದೆ ಎನ್ನುವುದಕ್ಕೆ ಲಂಕೇಶರು ಪ್ರಗತಿರಂಗದ ಮೂಲಕ ಹೊಸ ಸಂಚಲನ ಸೃಷ್ಟಿಮಾಡಿದ್ದೇ ಸಾಕ್ಷಿ. ಲಂಕೇಶರೆಂಬ ದಿಕ್ಸೂಚಿಯ ಹಿಂದೆ ಓಡುತ್ತಲೇ ಹೋದಂತೆ ಸಮಾಜ, ಸಂಸ್ಕೃತಿ, ಸಾಹಿತ್ಯ, ರಾಜಕೀಯದ ಹದರುಗಳು ಬಿಚ್ಚಿಕೊಳ್ಳುತ್ತಲೇ ಹೋಗುತ್ತವೆ.

ನಾನು ಹೈಸ್ಕೂಲು ದಿನಗಳಲ್ಲಿ ಲಂಕೇಶರು ಹಾಗೂ ಪತ್ರಿಕೆ ಕುರಿತು ನಮ್ಮೂರಿನ ಕುದುರೆಕಟ್ಟೆಯಲ್ಲಿ ಕುಳಿತು ಮಾತನಾಡುತ್ತಿದ್ದ ಹಿರಿತಲೆಗಳಿಂದ ವಿಷಯ ಕೇಳುತ್ತಿದ್ದೆ. ಮಸ್ಕಿ ಪಟ್ಟಣಕ್ಕೆ ಶಾಲೆಗೆ ಹೋಗುವಾಗ ಪುಸ್ತಕದ ಅಂಗಡಿ ಮುಂದೆ ಸಿಗೇ ಹಾಕಿದ್ದ ಪ್ರತಿಗಳನ್ನು ಆಸೆಬುರುಕನಾಗಿ ನೋಡಿ ಸುಮ್ಮನಾಗುತ್ತಿದ್ದೆ. ಆ ನಂತರ ಪತ್ರಿಕೆಗಳನ್ನು ತಡಕಾಡಿ ಓದಿದ್ದು ಇದೆ.

ನಾನು ಈಚೆಗೆ ಬೆಂಗಳೂರಿಗೆ ಬಂದಿದ್ದೆ, ಇಡೀ ದಿನ ಅಣ್ಣ ಮಂಜುನಾಥ.ವಿ.ಎಂ. ಅವರ ಮನೆಯಲ್ಲಿ ಕಳೆಯಬೇಕಾಗಿ ಬಂತು. ಅಣ್ಣ ತಾನು ಸಂಗ್ರಹಿಸಿಟ್ಟಿದ್ದ ಲಂಕೇಶ್ ಪತ್ರಿಕೆಯ ಹಳೆಯ ಸಂಚಿಕೆಗಳು, ವಿಶೇಷ ಸಂಚಿಕೆ, ಮೇಷ್ಟ್ರ ಬರವಣಿಗೆ ಒಂದೊಂದೇ ತೋರಿಸುತ್ತಾ ಹೋದಂತೆ ಮತ್ತು ಸಂಗ್ರಹಾಲಯವೇ ನೋಡಿದಂತೆ ಭಾಸವಾಯಿತು. ಮೇಷ್ಟ್ರ ಬರವಣಿಗೆಯ ದೈತ್ಯ ಶಕ್ತಿಯ ಕುರಿತ ಅಣ್ಣಾ ಹೇಳಿದ ಮಾತುಗಳು ನನ್ನಲ್ಲಿ ಹೊಸ ಚೈತನ್ಯ ಮೂಡಿಸಿದವು. ಲಂಕೇಶರ ಕುರಿತು ಜಗ್ಗ ಓದಿಕೊಂಡಿರುವ ಸ್ನೇಹಿತರಾದ ವಿ.ಆರ್.ಕಾರ್ಪೆಂಟರ್, ಬಸವರಾಜ ಹೃತ್ಸಾಕ್ಷಿ, ಸಿರಿವಾರ, ಅಣ್ಣ ಆರೀಫ್ ರಾಜಾ, ಲಂಕೇಶರ ನೀಲು ಕಾವ್ಯದ ಕುರಿತು ಪುಸ್ತಕ ಹೊರತಂದಿರುವ ನಾಗಣ್ಣ ಕಿಲಾರಿ ಮತ್ತೆ ಮತ್ತೆ ಲಂಕೇಶ್ ಮೇಷ್ಟ್ರ ಇರುವಿಕೆಯನ್ನು ಸಾಬೀತುಪಡಿಸುತ್ತಿದ್ದಾರೆ. ಮೇಷ್ಟ್ರ ಸದಾಶಯಗಳ ಹಾದಿಯಲ್ಲಿ ನಡೆಯುತ್ತಿರುವ 'ಗೌರಿ ಲಂಕೇಶ್' ಬಳಗಕ್ಕೆ ಕೃತಜ್ಞತೆ ಹೇಳುತ್ತಾ... ಸದಾ ಎಚ್ಚರ ಪ್ರಜ್ಞೆಯ ಪ್ರತೀಕದಂತಿದ್ದ ಲಂಕೇಶ್ ಅವರ ನೆನಪು ಇಲ್ಲಿಗೆ ಮುಗಿಸುತ್ತೇನೆ...



ಬಯಲ ಬೆಂಕಿ



ನಾನು ಪುಟ್ಟ ಲಗೇಜ್ ಎತ್ತಿಕೊಂಡು ಹೊರಡುವಾಗ ಮತ್ತಾವ ಸುದ್ದಿ ಹೊತ್ತು ತರುವೆ ಈ ಹೆಗಲ ಜೋಳಿಗೆಯಲ್ಲಿ ಎಂದು ಗೆಳತಿ ಕೇಳಿದ್ದನ್ನು ನೆನಪಿಸಿಕೊಂಡು ಟ್ರೇನು ಹತ್ತಿರುವೆನು. ಆಕಾಶದ ಅಂಗಳಕ್ಕೆ ಎಷ್ಟೊಂದು ನಕ್ಷತ್ರಗಳ ರಂಗೋಲಿ.... ಮುಗಿಲ ಮಗ್ಗುಲಲ್ಲಿ ಹಾಲ್ದಿಂಗಳ ಮುಗುಳ್ನಗೆ ಚೆಲ್ಲುವ ಚಂದ್ರಾಮ. ಹೆಗಲಿಗೆ ನೇತಾಡುವ ಬ್ಯಾಗು ಕೆಳಗಿಟ್ಟು ಓಡುತ್ತಿರುವ ಟ್ರೇನಿನ ದಡಬಡ ಸದ್ದಿನ ನಡುವೆಯೂ ತೆರೆದ ಬಾಗಿಲಿನ ತೋಳಿಗೆ ಕೈ ಹಿಡಿದು ಬಯಲೆಲ್ಲ ಆವರಿಸಿಕೊಂಡ ಹುಣ್ಣಿಮೆಯ ಬೆಳಕಿಗೆ ಮುಖವೊಡ್ಡಿದೆ. ಎಲ್ಲ ಜಂಜಡಗಳ ನಡುವೆಯೂ ಹೀಗೆ ಗಾಳಿ, ಬೆಳದಿಂಗಳು, ತೂಗುವ ಮರದೆಲೆಗಳು, ಎಲೆಗಳ ಮರೆಯಲ್ಲಿ ಕಣ್ಣು ಪಿಳುಕಿಸುವ ಹಕ್ಕಿ, ಮರಿಹಕ್ಕಿಗೆ ತುತ್ತಿಡುವ ತಾಯಿ ಹಕ್ಕಿಯ ಮಮತೆ, ಸುಳಿವ ಗಾಳಿಯಲ್ಲಿ ಹಾರುವ ಹಕ್ಕಿಗಳ ಹೆಜ್ಜೆ ಗುರುತುಗಳು, ಜಾಡು ಹಿಡಿದು ಹಾರುವ ಹುಚ್ಚು ಬಯಕೆ. ಈ ಹುಚ್ಚುತನವೇ ದೀರ್ಘ ಕಾಲದ ಲೋಕಾಂತದ ದಂದುಗಕ್ಕೆ ಶಕ್ತಿಯಾಗುತ್ತದೆ. ಏಕಾಂತ ಮತ್ತು ಲೋಕಾಂತವು ಜೊತೆ ಪಯಣಿಗರೇ......

ಮಹಿಳಾ ಬೋಗಿಯೆಂಬ ಅದ್ಭುತ ಡಬ್ಬಿಯಲ್ಲಿ ನಿಂತು ಬಯಲ ಮೌನವನ್ನೂ ಬರುವ ಸಮೂಹವನ್ನೂ ನೋಡುತ್ತಿರುವೆನು. ತೆವಳಲು ಆರಂಭವಾದ ಟ್ರೇನು ಕ್ರಮೇಣ ಯಾರನ್ನೋ ಬೆನ್ನಟ್ಟುವಂತೆ ಧಾವಿಸತೊಡಗಿತು. ಹಗಲು ಹೊತ್ತಿನಲ್ಲಾದರೆ ವಿಚಿತ್ರ ನಮೂನೆಯ ವಿರೂಪಗಳನ್ನು ಮೈಗಂಟಿಸಿಕೊಂಡು ಅಕರಾಳ-ವಿಕರಾಳ ಚೆಲ್ಲಾಡಿಕೊಂಡ ಬೆಂಗಳೂರಿನ ತುಣುಕು ಗೋಚರಿಸುತಿತ್ತು. ಒಂದು ಮುಗಿಲೆತ್ತರ ಬಂಗಲೆ ಕಂಡರೆ ಒಂದೇ ಕೌದಿ ಅಳತೆಯ ಖೋಲಿಯಲ್ಲಿ ಬದುಕು ಹೂಡಿದವರು ಚಲಿಸುವ ಟ್ರೇನಿಗೆ ಸವಾಲಾಗಿ ಕುಂತವರು, ನಿಂತವರು, ನಶೆಯಲ್ಲಿ ನಡೆದಾಡುತ್ತಿರುವವರು. ಇನ್ನೊಂದೆಡೆ ಎಲ್ಲಿಂದಲೋ ಹೇಂಟಿನ ವಾಸನೆ ಮೂಗು ಸೋಕಿದರೆ ಥಟ್ಟನೆ ಮುಲಾಜಿಲ್ಲದೆ ಅಡ್ಡಾದಿಡ್ಡಿಯಾಗಿ ಹರಿದ ಚರಂಡಿಗಳ ವಿರಾಟ್‌ದರ್ಶನವಾಗುತ್ತದೆ. ಎಲ್ಲವುಗಳನ್ನೂ ದಾಟಿ ನಮ್ಮ ಟ್ರೇನು ಯಲಹಂಕದಲ್ಲಿ ನಿಂತು ಬಿಟ್ಟಿತು. ಮಹಿಳಾ ಬೋಗಿ ಎಂಬ ಲಕ್ಷ್ಯವೇ ಇಲ್ಲದೆ ಹತ್ತಬೇಕೆನ್ನುವ ಗಂಡಸರು. ಅವರನ್ನು ತಡೆಯಲು ತೆರೆದ ಬಾಗಿಲಿನತ್ತ ಹೆಜ್ಜೆ ಹಾಕಿದೆ. ಮುಖ್ಯ ಸ್ಟೇಷನ್ನಿನಲ್ಲಿ ಲಾಠಿ ಹಿಡಿದು ಕಳಾಯಿಸುವ ಪೋಲೀಸರು ಬೇಕೋ ಬೇಡವೋ ಮಹಿಳಾ ಬೋಗಿಯಲ್ಲಿ ಗಂಡಸರನ್ನು ಹತ್ತಲು ಬಿಡುವುದಿಲ್ಲ, ಆದರೆ ಮುಂದಿನ ರೈಲು ನಿಲ್ದಾಣಗಳಲ್ಲಿ ಮಹಿಳಾ ಬೋಗಿಯ ಅಂಚಿಗೆಲ್ಲ ಗಂಡಸರ ಪಹರೆ ನಿರ್ಮಾಣವಾಗುತ್ತದೆ. ಮಹಿಳೆಯರಿಗೆ ಪ್ರತ್ಯೇಕ ಬೋಗಿ ಸಹಿಸುವುದು ಕೂಲಿಕಾರ ಗಂಡಸಿಗೂ ಸಾಧ್ಯವಿಲ್ಲ, ಬೋಗಿ ಹತ್ತಿಯೇ ಬಿಡುವನು. ನಾನಾದರೋ ಹಾಳು ಬೆನ್ನುನೋವು ಬರುವವರೆಗೂ ಈ ಮಹಿಳಾ ಬೋಗಿಯನ್ನೇ ನೆಚ್ಚಿಕೊಂಡು ಊರುಗಳನ್ನು ಸುತ್ತಿದವಳು. ಬೆನ್ನಿನ ಮಾತುಕೇಳಿ ರಿಜರ್ವೇಶನ್ ಮಾಡಲು ಆರಂಭಿಸಿದ ದಿನಗಳಲ್ಲಿ ರೆಗ್‌ಜಿನ್ ಬರ್ತಿಗೆ ಹೊಂದಿಕೊಳ್ಳುವುದು ಕಷ್ಟವಾಗುತ್ತಿತ್ತು.

ತರಹೇವಾರಿ ಅನುಭವಗಳ ಆಗರವಾಗಿರುವ ಮಹಿಳಾ ಬೋಗಿಯನ್ನು ಅವಕಾಶ ಸಿಕ್ಕಾಗೆಲ್ಲ ಹತ್ತಿಯೇ ಬಿಡುತ್ತೇನೆ. ನಮ್ಮ ನಾಡಿನ ಹೆಂಗಸರ ಇಳಕಲ್ ಸೀರೆಗಳ ಸರಭರ, ಅವರು ತರುವ ರೊಟ್ಟಿ ಘುಂಡಿ ಪಲ್ಯದ ಘಮ,-ಸೀಟು ಸಿಗದೆ ಇದ್ದಾಗ ಸ್ಫೋಟಗೊಳ್ಳುವ ಸಿಟ್ಟು, ಮುಗಿಲು ಮುರಿದು ಬೀಳುವಂತೆ ಮಾಡುವ ಜಗಳ, ಆನಂತರ ಜಗಳವಾಡಿದ ಇಬ್ಬರೂ ಹೊತ್ತು ಸರಿಯುತ್ತಿದ್ದಂತೆಯೇ ಕ್ರಮೇಣ ಗೆಳತಿಯರಾಗುವ ಬೆರಗು, ಯಾರದೋ ತೊಡೆಯ ಮೇಲೆ ಇನ್ನಾರದೋ ಕೂಸು ಕನಸಿನಲ್ಲಿ ತುಟಿಯರಳಿಸಿ ಪಸರಿಸುವ ಪ್ರೇಮ, ಅಂಗೈಯಗಲ ಬೋಗಿಯಲ್ಲಿ ರಾಶಿ ಹೆಂಗಸರು ಸುಖ ನಿದ್ದೆ ತೆಗೆಯುವ ಚಮತ್ಕಾರ......ಓಹ್ ಇಂದು ಸಹ ಇಂಥ ಸಂತಸದ ಕ್ಷಣಗಳನ್ನು ಸೂರೆ ಹೊಡೆಯಲು ಬೋಗಿ ಹತ್ತಿರುವೆನು.

ಈಚೆಗೆ ಮಹಿಳಾ ಬೋಗಿ ಭರ್ತಿಯಾಗುವುದನ್ನು ಗಮನಿಸಿದರೆ ಎಷ್ಟೊಂದು ನಾಲ್ಕು ಗೋಡೆಗಳ ಗಡಿಗಳು ಮುರಿದು ಹೋಗಿವೆ ಎಂಬುದು ಅಂದಾಜಿಗೆ ಸಿಗುತ್ತದೆ. ಮನೆಗೆಲಸ, ಮನೆ ಜನರ ಚಾಕರಿ, ಮಕ್ಕಳು-ಮರಿಗಳಿಗೆಲ್ಲ ತುತ್ತಿಟ್ಟು, ನಕ್ಕು, ನಲಿದಾಡುವಂತೆ ಮಾಡಿರುವುದಲ್ಲದೆ ಹಿಂಗೆಲ್ಲ ಓಡಾಡಿ ಸಂಸಾರದ ಬಂಡಿ ಹೊಡೆಯುತ್ತಿರುವರಲ್ಲ..... ಇದು ಸುಮ್ಮನೆ ಅಲ್ಲ.

ಇನ್ನು ಮುಂದೆ ಇನ್ನಷ್ಟು ಬೋಗಿಗಳು ಬೇಕು. ಇವರೆಲ್ಲರನ್ನು ಒಟ್ಟಾಗಿಸಿಕೊಂಡು ಕಣ್ಣು ದಿಟ್ಟಿಯ ಆಚೆಗೂ ಹರಿದುಹೋದ ಹಳಿಗಳ ಮೇಲೆ ಕುಂತು ಬೋಗಿಗಳಿಗಾಗಿ ಜಿಂದಾಬಾದ್ ಅನ್ನುವ ಉಮೇದು ಬಂದುಬಿಡುತ್ತದೆ. ಛೇ.. ತಮ್ಮ ಬದುಕಿನ ಬಡಿದಾಟಕ್ಕೆ ಒಡ್ಡಿಕೊಂಡ ಅಪರಿಚಿತರೆಲ್ಲ ಕರೆದ ಕೂಡಲೆ ಜಿಂದಾಬಾದ್ ಅನ್ನಲು ಹೇಗೆ ಸಾಧ್ಯ..? ಆದರೂ ಇವರೆಲ್ಲ ಧೀರರೇ..... ಗೇಣು ಹೊಟ್ಟೆಯೊಳಗಡಗಿದ ಹಸಿವೆಂಬ ಗುರುವಿನಿಂದ ದೀಕ್ಷೆ ಪಡೆದು ತುತ್ತಿನ ಚೀಲ ತುಂಬು ಆಜ್ಞೆ ಪಾಲಿಸಲು ಹೊರಟೇಬಿಡುವರು ನೆಲದಗಲ...... ನನ್ನೊಂದಿಗೆ ಜಿಂದಾಬಾದ್ ಅನ್ನದಿದ್ದರೂ ಪರವಾಯಿಲ್ಲ..... ಈ ಬೋಗಿಯೊಳಗೆ ನುಗ್ಗುವ ಗಂಡಸರನ್ನು ತಡೆಯಲು ದನಿಗೂಡಿಸಿದರೆ ಸಾಕು. ಹೀಗೆ ತಡೆಯುವ ಭಾವ ಖಂಡಿತ ಗಂಡಸರ ಮೇಲಿನ ದ್ವೇಷಕ್ಕಲ್ಲ, ಸ್ವಲ್ಪ ರಿಯಾಯಿತಿ ಕೊಟ್ಟರೂ ಕತ್ತಲೆಯ ಹುತ್ತದೊಳಗಿನ ಹಾವುಗಳಂತೆ ವಿಷ ಕಕ್ಕಿದ ಕತೆಗಳನ್ನು ಈ ಹೆಂಗಸರ ಬಾಯಿಯಿಂದಲೇ ಕೇಳಬೇಕು. ಇಷ್ಟಕ್ಕೂ ಬೋಗಿ ಮಹಿಳೆಯರದ್ದೇ.....

ಯಲಹಂಕದಲ್ಲಿ ಬೋಗಿ ಹತ್ತುವವರು ಬಹಳಿಲ್ಲ, ಇಬ್ಬರು ಹೆಂಗಸರು ತಮ್ಮ ಒಂದೆರಡು ಕೂಸುಗಳನ್ನು ಎಳೆದುಕೊಂಡು ಕುಂತವರ ಕಾಲು ತುಳಿಯುತ, ತುಳಿದಿದ್ದಕ್ಕೆ ವಿಷಾದವನ್ನೂ ವ್ಯಕ್ತಿಸದೆ ಅಲ್ಲೆಲ್ಲೊ ಎರಡು ಸೀಟುಗಳ ನಡುವೆ ನೆಲೆ ಕಂಡುಕೊಂಡರು. ನಾನು ಬಾಗಿಲನು ತೆರೆದು ಬರುವ ಅತಿಥಿಣಿಯರನ್ನೆಲ್ಲ ಸ್ವಾಗತಿಸಿ ಇನ್ನೇನು ಬಾಗಿಲಿಕ್ಕಬೇಕು ಅಷ್ಟರಲ್ಲಿ ಕಾಲ ಗೆಜ್ಜೆಗಳ ಘಲ್ಲೆಂಬ ಶಬ್ದದ ಕಿವಿ ಸೋಕಿತು. ಎತ್ತರದ ಹೆಂಗಸೊಬ್ಬಳು ಬೀಸು ನಡಿಗೆಯಲ್ಲಿ ಬಂದಳು. ಅವಳು ಒಳ ಹೊಕ್ಕಿದ ಪರಿ ಒಂದೇ ಒಂದುಕ್ಷಣ ಝಲ್ಲೆಂಬ ಭಾವ ಬಂದು ಹೋಯಿತು. ಎಂಥದೋ ಒಂದು ನಮೂನೆಯ ವಾಸನೆಗೆ ಅವಳ ಥಾಳು ಮೆಕಪ್ಪಿನ ಕಾರಣವಿರಬೇಕು. ಟ್ರೇನು ಮಂದಗತಿಯಲ್ಲಿ ಚಲಿಸತೊಡಗಿತು. ಅವಳು ಉದ್ದ ಜಡೆಯನ್ನು ರೊಯ್ಯನೇ ಸರಿಸಿಕೊಳ್ಳುತ್ತಾ ನಡೆದಳು. ಸುಂದರ ಹೂಗಳಿರುವ ಒಡಲಿನ ಸೀರೆಗೆ ಚೆಂದದ ಅಂಚು ಲಕಲಕ ಹೊಳೆಯುತಿದೆ. ಟ್ರೇನಿನಲ್ಲಿನ ಡಿಮ್ಮು ಬೆಳಕು ಮತ್ತಷ್ಟು ಕಳೆಗುಂದಿತು. ಅವಳು ಒಳಬಂದ ಮೇಲೆ ಒಂದು ಹರೆಯದ ಹುಡುಗಿ ಒಳನುಗ್ಗಿದಳು. ಆದರೆ ಇವಳ ನಡಿಗೆಯ ಗತ್ತಿನಲ್ಲಿ ಅವಳಿಗಿರುವ ಧ್ರಾಷ್ಟತನವಿಲ್ಲ, ಟ್ರೇನಿನ ವೇಗ ಹೆಚ್ಚಾಯಿತು. ಹುಡುಗಿಯು ಕೈ ತೊಳೆಯುವ ವಾಷ್ಬೇಸಿನ್ ಹತ್ತಿರ ಕೂತಳು. ಮೊದಲು ಬಂದವಳು ಎತ್ತ ಹೋದಳೆಂದು ಬೋಗಿಯುದ್ದಕ್ಕೂ ಕಣ್ಣು ಹಾಕಿದೆ. ಎಂಥ ಹೆಂಗುಸು?! ಬಂದವಳೇ ಜೊತೆಯಲ್ಲಿ ಬಿರುಗಾಳಿಯೂ ಹೊತ್ತು ತಂದಂತೆ ಇಡೀ ಬೋಗಿಯನ್ನು ಬೆರಳ ತುದಿಗೆ ಅಂಟಿಸಿ ಗಿರ್ರೆನಿಸುವಂತೆ ಗರ್ವ ವ್ಯಕ್ತಪಡಿಸುತ್ತಲೇ ಬಂದಳು. ಇರಲಿ, ನೋಡೋಣ. ಎಂತೆಂಥವರನ್ನು ಎದುರಿಸಿದ ಹಿಮ್ಮತ್ತಿರುವವಳು ನಾನು. ಇವಳ್ಯಾವ ಲೆಕ್ಕ...... ಮೇಲೆ ಹಿಡಿದ ಸೀಟಿನತ್ತ ನಡೆದೆ. ನೆಲಕ್ಕೆ ಅಡ್ಡಾದಿಡ್ಡಿ ಮಲಗಿದವರ ಮೇಲೆ ಉಪಕಾರ ಮಾಡುತ್ತಿರುವೆನೆಂಬಂತೆ ದಾಟುತ್ತ ಹೋಗುವಾಗ ಛಮಕ್ ಹೆಂಗುಸು ನನ್ನ ಎದುರು, ಲಗೇಜಿನಿಂದ ತುಂಬಿಕೊಂಡ ಸೀಟಿನ ಮೇಲೆ ಹುಡುಗರಂತೆ ಹಾರಿ ಕುಳಿತಳು. ಯಾಕೋ ಮನಸು ಒಂದು ಅಸಹಜ ಅನುಭವ ವ್ಯಕ್ತಿಸಿತು. ಕಿಟಕಿಯ ಮೇಲೆ ಕಾಲಿಟ್ಟು ನನ್ನ ಸೀಟು ಹತ್ತಿದೆ. ಈಗ ಅವಳು ನಾನು ಎದುರಾ-ಬದುರು.

ಬೋಗಿ ತುಂಬ ಇದ್ದವರನ್ನು ಸಾಧ್ಯವಾದಾಗಲೆಲ್ಲ ಯಾ ಊರು, ಹೆಸರು ದೆಸಿ ಅಂತೆಲ್ಲ ಮಾತಾಡುವ ಚಾಳಿ ಈಗ ಥಟ್ಟನೆ ಪ್ರಕಟವಾಗುತ್ತಿಲ್ಲ, ಬದಲಿಗೆ ಆತಂಕವೊಂದು ಸೂಜಿಮೊನೆಯಂತೆ ಹರಿತವಾಗತೊಡಗಿದೆ. ಅವಳು ನನ್ನೆಡೆಗೆ ನೋಡಿ ಒಂದು ಸುಂದರ, ನಗೆ ಚೆಲ್ಲಿದಳು. ನನಗೂ ಅನಿವಾರ್ಯವಾಯಿತು. ಅದು ಸೌಜನ್ಯವಲ್ಲವೇ? ಅವಳು ಲಗೇಜೇನೂ ತಂದಿಲ್ಲವೆನಿಸುತ್ತದೆ. ಪ್ಲಾಸ್ಟಿಕ್ ಚೀಲದಲ್ಲಿ ತಿನ್ನಲೇನೋ ತಂದಿರುವಳು. ಬೋಗಿಯಲ್ಲಿ ಕೆಲ ಹೆಂಗಸರು ಇನ್ನೂ ಹರಟೆ ಹೊಡೆಯುತ್ತಿರುವರು. ನಾನು ಶಾಲೊಂದನ್ನು ತೆಗೆದು ಕಾಲಿನ ಮೇಲೆ ಹೊದ್ದುಕೊಂಡು ಓದಲೆಂದು ಪುಸ್ತಕವೊಂದು ಮುಖಕ್ಕಡ್ಡ ಹಿಡಿದುಕೊಂಡೆ. ನಾನು ಮಾತಾಡಿಸುವ ಸಾಹಸಕ್ಕೆ ಯಾಕೆ ಇಳಿಯುತ್ತಿಲ್ಲ.....? ಅಷ್ಟರಲ್ಲಿ ಅವಳೇ ಯಾವ 'ಊರಿಗ ಹೊಂಟದಿರಿ? ಊಟ ಆಯ್ತಾ?' ಎಂಬ ಗಂಡಸಿನಂಥ ದನಿ ಬಂದ ಕೂಡಲೇ ಮೆಲ್ಲಗೆ ಪುಸ್ತಕ ಸರಿಸಿ ಅವಳೆಡೆ ನೋಡಿದೆ. ಅವಳ ಕುತ್ತಿಗೆಯಲ್ಲಿ ಗಿಲಿಟಿನ ಸರವೊಂದು ಹೊಳೆಯುತ್ತಿದೆ. ಕಣ್ಣಿನ ಕಾಡಿಗೆಯು ಇದ್ದ ಆಕಾರಕ್ಕೆ ದೊಡ್ಡ ಅಂಚು ಕೊರೆದಿದೆ. ದೊಡ್ಡ ಹಣೆಯ ಮೇಲೆ ಬಳ್ಳಿಯಂತೆ ಕೂದಲು ಬಾರ್ಡರ್ ಕಟ್ಟಿದೆ. ಹಣೆಯ ಬಿಂದಿಯು ಎರಡು ಬಣ್ಣದಲ್ಲಿ ಮಿನುಗುತ್ತಿದೆ. ನಾನು ಉಗುಳು ನುಂಗಿ 'ಹುಂ..' ಮಾತ್ರ ಅಂದೆ. ಬ್ಲೌಜಿನೊಳಗಿನ ಬ್ರೇಸಿಯರು, ಹೆಂಗಸಿನಂಥ ವರ್ತನೆಗೆ ಬೆಂಬಲವಾಗಿದೆ. ಅವಳು ತಂದ ಊಟ ಉಣ್ಣುತ್ತಿರುವಳು. ನಾನು ಅಕಾರಣ ಕಂಪಿಸುತ್ತಿರುವೆನೇನು? ಇಲ್ಲ, ಸೆಕೆಂಡ್ ಕ್ಲಾಸ್ ಬೋಗಿಯಲ್ಲೊಮ್ಮೆ ಪ್ರಯಾಣ ಮಾಡುವಾಗ ಆದ ಅನುಭವವೊಂದು ಅದು ಹೇಗೋ ಮೆದುಳ ಮೂಲೆಯಲ್ಲಿ ಠಿಕಾಣಿ ಹೂಡಿ ನನಗರಿವಿಲ್ಲದೆ ಕೊಂಚ ಹೀಗಾಗುತ್ತದೆ..... ಅಷ್ಟೆ.

ಏನಾಗಿತ್ತೆಂದರೆ.......

ಉದ್ಯಾನ ಟ್ರೇನು. ಬೊಂಬಾಯಿಯಿಂದ ಬರುತ್ತದೆ. ನಾನಿದ್ದ ಕೋಚಿನಲ್ಲಿ ಕೆಲವು ಯುವಕರೂ ಇದ್ದರು. ಇಬ್ಬರು ಹೆಂಗಸರು. ಸಂಜೆಯ ಇಳಿಹೊತ್ತು, ಬೋಗಿಯಲ್ಲಿರುವವರು ತಮ್ಮ ಸ್ಟೈಲು ಮತ್ತೆಂಥದೋ ಮಾತಿನ ವೈಖರಿಯಲ್ಲಿ ಮುಳುಗಿದ್ದರು. ಅಷ್ಟರಲ್ಲಿ ನಾಲ್ಕೈದು ಜನ ಇಂಥವರೇ ರಂಗು-ರಂಗಿನ ವೇಷಕ್ಕೆ ಅಂಗೈ ಚಪ್ಪಾಳೆಯ ಸಾಥ್‌ನೊಂದಿಗೆ 'ರಾಜಾ ಬೇಟಾ ತಗಿ ರೊಕ್ಕ' ಎಂದು ಗಂಡಸರು ರೂಪಾಯಿ ಕೊಡುವಂತೆ ಮಾಡುತ್ತಿದ್ದರು. ಕೊಡಲು ವಿಳಂಬ ಮಾಡಿದ ಯುವಕನ ಕೆನ್ನೆಗೆ ಮೃದು ಸ್ಪರ್ಶ ನೋಡಿದ್ದೇ ಯುವಕ ಕಿಸೆಯಿಂದ ನೋಟೊಂದನ್ನು ಅವಳತ್ತ ಹಿಡಿದ. 'ಹಾಯ್ ಮೇರಾ ಪ್ಯಾರ..' ಅನ್ನುತ ನೋಟು ಇಸಿದುಕೊಂಡಳು. ಖಂಡಿತ ಥೇಟ್ ಹೆಂಗಸಿನಂತೆ. ನಾನೂ ಕೇಳದಿದ್ದರೂ ಕುತೂಹಲಕ್ಕೆ ಹತ್ತು ರೂಪಾಯಿಯ ನೋಟು ಕೊಟ್ಟು 'ಹೆಸರೇನು?' ಅನ್ನುವ ಸಾಹಸ ಮಾಡಿದ್ದೆ. ಅಷ್ಟು ಸಾಕಾಯಿತು ಅವಳು ವಯ್ಯಾರದಿಂದ ನನ್ನೆಡೆಗೆ ನೋಡಿ 'ರೋಜಾ' ಅಂದು ಟಕ್ಕೆಂದು ಕಣ್ಣು ಹೊಡೆದು ತುಟಿ ಕೊಂಕಿಸಿ 'ಏನ್ ಬೇಕು?' ಅನ್ನಬೇಕೇ? ಹೆಸರು ಕೇಳುವುದು ಹಗುರವಾಗಿತ್ತು, ಅವಳನ್ನು ನಿಭಾಯಿಸುವುದು ಭಾರವಾಗತೊಡಗಿತು. 'ಛೇ ಏನಿಲ್ಲ.....' ಅಂದರೂ ಬಿಡದ ಅವಳು ಮುಂದೆ ಹೋದವಳು ಹೊರಳಿ ಬಂದು ಹುಬ್ಬೇರಿಸಿದಳು...... ಸುಮ್ಮನಿರದ ಕುತೂಹಲವು ಹೀಗೆ ಉರುಳಾಗು



• ನೀಲಾ ಕೆ

ವುದೆಂದು ಯಾರಿಗೆ ಗೊತ್ತಿತ್ತು? ಬೋಗಿಯಲ್ಲಿದ್ದವರೆಲ್ಲ ವೈಚಿತ್ರ್ಯದ ಕೇಂದ್ರವೆಂಬಂತೆ ನೋಡುವುದು ಇರಸು ಮುರುಸಾಗತೊಡಗಿತ್ತು, ಆ ಲಲನೆಯರ ದಂಡು ವಸೂಲಿ ಮುಗಿಸಿ ಬೋಗಿ ಇಳಿಯುವವರೆಗೂ ಆತಂಕವೊಂದು ಮನಸಿನ ಮೇಲೆ ದಾಳಿ ಮಾಡಿತ್ತು.

ಅಂದಿನಿಂದ ಈ ಅದ್ಭುತ ಸುಂದರಿಯರನ್ನು ಕಂಡ ಕೂಡಲೇ ಮಾರುದ್ದ ಹಾರುತ್ತೇನೆ. ಬಹುಶಃ ಇದು ಅಕಾರಣವೇ

ಟ್ರೇನು ತನ್ನ ಪಾಡಿಗೆ ತಾನು ದೌಡಾಯಿಸುತ್ತಿದೆ. ಅವಳು ಲಗೇಜುಗಳನ್ನು ಒಂದರ ಮೇಲೊಂದಿಟ್ಟು ಅರ್ಧ ಮಲಗಲು ಜಾಗ ಮಾಡಿಕೊಂಡಳು. ಕಾಲು ಚಾಚುವಾಗ ಮೆಲ್ಲಗೆ ನರಳಿದಳು. ನಾನು ಅವಳ ಕಾಲುಗಳನ್ನು ಗಮನಿಸಿದೆ. ಗಾಯಗಳಿದ್ದವು. ನನಗೆ ಯಾರ‍್ಯಾರೋ ಹೇಳಿದ ಪ್ರಕಾರ, ಇವರುಗಳೆಲ್ಲ ಕುಡಿಯುವರು. ಮಸ್ತ್ ಮಜಾ ಮಾಡುವರು. ವಿಲಾಸಿ ಜೀವನ ನಡೆಸುವರು. ಸೆಕ್ಸಿ ಹಾವಭಾವ ವ್ಯಕ್ತಿಸುವುದಂತೂ ಭಾರಿ ಇರ್ರಿಟೇಟ್ ಮಾಡುವಂಥದ್ದು. ಸೆಕ್ಸ್ ವರ್ಕ ಇವರ ಕಾಯಕ. ಅದು ಅನಿವಾರ್ಯವೇ ಇರಬಹುದೇನೋ.... ಮತ್ತೆ ಏನೇನೋ ವಿಚಿತ್ರ ಸಂಗತಿಗಳು ಸೇರಿಕೊಂಡಿವೆ.

ತೆರೆದ ಕಿಟಕಿಯಿಂದ ತಣ್ಣನೆ ಗಾಳಿ ಒಳನುಗ್ಗುತ್ತಿದೆ. ಡಿಸೆಂಬರ್ ತಿಂಗಳ ಚಳಿ. ಎಲುಬುಗಳನ್ನು ಕೊರೆಯುವುದು. ಇವಳು ಹೇಗೆ ಮಲಗುವಳು? ಹೇಗಾದರೂ ಮಲಗಲಿ. ನನಗೇನು? ಆದರೂ ಕಣ್ಣೋಟವೊಂದು ಕುತೂಹಲದ ವೇಷ ತೊಟ್ಟು ಅವಳತ್ತ ಹರಿಯತೊಡಗಿದೆ. ಬರುವಾಗಿನ ಧಿಮಾಕದ ಹಾವ-ಭಾವ ಮರೆಯಾದಂತಿದೆ. ಏನಾಗಿರಬಹುದು ಅವಳ ಕಾಲಿಗೆ? ಅವಳೀಗ ಉದ್ದಕ್ಕೆ ಬಿಟ್ಟುಕೊಂಡ ಸೆರಗನ್ನೇ ಚಾದರ್‌ನಂತೆ ಹೊದ್ದುಕೊಂಡಳು. ನಾನಾದರೋ

ಸ್ಟಾರ್ ಅಂತೆಲ್ಲ ಬೆಳ್ಳಗಿನ ಉದುಪಿನೊಳಗೆ ...ಬಂದೆ.

...ಹೋಗಬೇಕೆನಿಸಿತು. ಕೆಳಗೆ ಇಳಿದೆ. ಜನರಲ್ ...ಯಲ್ಲಿ ಮೇಲಿನ ಸೀಟಿಗೆ ಹತ್ತುವುದು ಇಳಿಯುವುದು ...ೇ ಸರಿ. ಬೆರ್ಥ್ ಪಕ್ಕದಲ್ಲಿ ಹರೆಯದ ಹುಡುಗಿ ...ಹೊದ್ದು ಮುದುಡಿ ಕೂತಿರುವಳು. ಕೈತೊಳೆಯುತ ...ನೆಸರು ಕೇಳಿದೆ. ಸಣ್ಣ ವಯಸ್ಸಿನ ಹುಡುಗಿ. ಹಳೆಯ ...ದ ಹಿರೋಯಿನ್ ನಂಥ ಸ್ನಿಗ್ಧ ಸೌಂದರ್ಯ. ಅಳು ...ತಿದೆ. ವಿಚಿತ್ರದ ನಮೂನೆಯ ಭಯ ಅಧೀರತೆ ... ಎದ್ದು ಕಾಣುತ್ತಿದೆ. ಏನಾಗಿದೆ ಈ ನಾಗಮ್ಮನಿಗೆ? ...ಗಿ ಕೇಳುವುದು ಹೇಗೆ?

...ತ್ತೆ ಸಪ್ತ ಸಮುದ್ರ ದಾಟಿ ಸಾಹಸ ಮಾಡಿ ನನ್ನ ...ಬಂದೆ. ಅವಳು ಎಚ್ಚರ ವಾಗಿಯೇ ಇರುವಳು. ...ನ್ನನೆಯ ಗಾಳಿಗೆ- ಚಳಿಗೆ ಮತ್ತಷ್ಟು ಮುದುಡಿರು ...ಮುಚ್ಚದ ಜಾಲರಿ ಕಿಟಕಿಯ ಮೇಲೆ ಗ್ಲಾಸು ...ಅವಳಿಗೆ ಹೊದೆ ಯಲು ಏನಾದರೂ ಬೇಕೆನಿಸಿ, ಏರ್‌ಬ್ಯಾಗಿನಿಂದ ...ಸುವ ಬೆಡ್‌ಶೀಟ್ ...ತ್ತ 'ಚಳಿ ಭಾಳ ಇದೆ. ...ತ್ತಾ ಇಲ್ಲೇನು? ಕೇಳಿದೆ. ...ಗ್ರಹ ಹೇಗೆ ದೂರಾ ಯಿತು?

ಬೆರಗಾಗಿ ನೋಡಿಕೊಂಡೆ. ಅವಳು ...ಸಣ್ಣಗಿನ ದನಿಯಲ್ಲಿ 'ಹುಂ ಅಕ್ಕ ನೀವೂ ...ಲ್ಲ...... ಏನೋ ಓದ್ತಿದ್ದೀರಿ?' ಕೇಳಿದಕೂಡಲೆ ...ಗ ತೊಡಗಿದೆ. ಅವಳಿಗೆ ಬೆಡ್ಶೀಟ್ ಕೊಟ್ಟೆ. 'ಥ್ಯಾಂಕ್ಸ್ ...' ಅವಳು ತುಂಬ ಧನ್ಯತೆಯ ದನಿಯಲ್ಲಿ ಹೇಳಿದಳು. ...ಮ ಯಥಾರೀತಿ ನನ್ನ ಜಾಗಕ್ಕೆ ಬಂದು ಮಲಗಿ ...ನಡುರಾತ್ರಿಯೇನಾಗಿಲ್ಲ, ಅವಳು ಟೈಮು ಕೇಳಿದಳು. ...ಾಗ ಅವಳ ಮುಖ ದಿಟ್ಟಿಸಿದೆ. ಕಣ್ಣಲ್ಲಿ ತೆಳುವಾದ ...ಹನಿ ಮಂದ ಬೆಳಕಲ್ಲಿಯೂ ಹೊಳೆಯುತ್ತಿದೆ. ...ೂ ಓದೋ ಅಭ್ಯಾಸ ಆದ ಏನು? ಪುಸ್ತಕದ ಬಗ್ಗೆ ...'' ನಾನೀಗ ಅವಳೊಂದಿಗೆ ಮಾತು ಹೆಣೆಯಲು ...ದರುವೆನು. ಆದರೆ ನಿದ್ದೆ ಸತಾಯಿಸುತ್ತಿದೆ.

...ಳು ಕೊಟ್ಟ ಬೆಡ್‌ಶೀಟನ್ನು ಬಿಚ್ಚಿ ಹೊದ್ದುಕೊಳ್ಳುತ ... ಪುಸ್ತಕ ಓದುವ ಹುಚ್ಚಿದೆ. ಎಂಟನೆಯ ತನಕ ...ಹೋಗಿದಿನಿ. ಆಮೇಲೆ ಹೋಗಲೇ ಇಲ್ಲ....' ...ದನಿಯು ಸ್ಫುಟವಾಗಿ ಗಡುಸಾಗಿ ಕೇಳುತಿದೆ. ...ಾಕಂದ್ರೆ ಹಿಂಗಾದೆ ನೋಡ್ರಿ.....' ಅವಳು ನಕ್ಕಳು. ... ದಂತಪಂಕ್ತಿಗಳು ಥಳಥಳ ಹೊಳೆಯುತ್ತಿವೆ. ಎಂಥ ...? ಮೊದಲು ಎಲ್ಲರಂತೆ ಗಂಡಾಗಿ ಹುಟ್ಟಿದವರು ... ಹೆಣ್ತನ ಆವರಿಸಿಕೊಳ್ಳುವ ಪರಿ ಅವರೊಳಗೆ ಖುಷಿ ತರುತ್ತದೆಯಂತಲ್ಲ..... ಮತ್ತೆ ಇವಳು ...ರೇಸರದಲ್ಲಿ ಹೇಳುತ್ತಿರುವಳು, 'ಹಿಂಗಾದೆ ನೋಡಿ', ...ಹೆಣ್ತನದ ಭಾವ ಬಂದಕೂಡಲೇ ಯಾಕೆ ಎಲ್ಲವನ್ನೂ ...ಹೀಗೆ ಹೊರಡಬೇಕು? ಛೇ ಹೊರಡದೇ ಏನು ...ಮಾರು? ಮನೆಯಲ್ಲಿಯೇ ಪರಕೀಯರಾಗುವಾಗ ...ಲ್ಲಿರುವುದು? ಹೆತ್ತವರು ಯಾಕೆ ಅಷ್ಟು ಕಟುಕರಾಗು ... ತಮ್ಮದೇ ಕರುಳಕುಡಿಯ ಈ ಅವಸ್ಥೆಯನ್ನು ...ಮಮತೆಯಿಂದ ಯಾಕೆ ಸ್ವೀಕರಿಸುವುದಿಲ್ಲ? ...ವಾಗ ನಿದ್ದೆ ಆವರಿಸಿತೋ...

...ರದೋ ಕೂಸೊಂದು ಎದ್ದು ಅಳತೊಡಗಿತು. ...ಮೆಲ್ಲಗೆ ಎಚ್ಚರವಾಯಿತು. ಮಗ್ಗಲು ಬದಲಿಸಿದೆ. ...ೋ ಆವಾಜು ಸಂಭಾಷಣೆ ಮುಸಿಮುಸಿ ಅಳು, ... ದನಿಯೊಂದು ಸಂತೈಸುವುದು ಹೀಗೆ ಏನೇನೋ ...ೇಳುತಿದೆ. ಅರೆ ಕಣ್ಣಿಂದ ನೋಡಿದರೆ ಎದುರು ...ಳು ಎದ್ದು ಕುಂತಿರುವಳು. ಸ್ವಲ್ಪ ಗಾಬರಿ ಎನಿಸಿತು. ...ಪಕ್ಕದಲ್ಲಿ ನಾಗಮ್ಮ ಮಂಡಿಯಲ್ಲಿ ಮುಖವಿಟ್ಟು ...ವಳು. ಕಣ್ಣು ತೆರೆಯದೆ ಸುಮ್ಮನೆ ಕಿವಿ ಕೊಟ್ಟೆ. ...ೊಳಗೆ ಹುದುಗಿಕೊಂಡ ಅಸಹಜ ಅನುಮಾನದ ...ಹೆಡೆ ಎತ್ತಿದಂತಾಯಿತು. ಸಿಟ್ಟು, ಅಸಮಧಾನ ...ಮ್ಮನೇ ಹಣಿಕತೊಡಗಿತು. ಕತ್ತಲು, ಟ್ರೇನಿನ ... ಒಂದಕ್ಕೊಂದು ಬೆಸೆದು ಅವರ ಮಾತುಗಳು ...ಕೇಳುತ್ತಿಲ್ಲ. ಹರವಾಯಿಲ್ಲ ಟ್ರೇನಿನ ಗತಿ ಮೆಲ್ಲಗಾಗ ...ತು ಮತ್ತು ಅಂಬೆಗಾಲಿಡುತ್ತಲೇ ನಿಂತೇಬಿಟ್ಟಿತು. ... ಪೂರ್ತಿ ನಿದ್ದೆಯಲ್ಲಿದೆ.

...ಸಳು ನಾಗಮ್ಮಳ ತಲೆ ಸವರಿದಳು. ನಾಗಮ್ಮ ...ೇ ತನ್ನ ಬದುಕಿನ ಎಳೆಗಳನ್ನು ಬಿಚ್ಚಿಡತೊಡಗಿದಳು. ...ನ ಸಹಜ ಹುಡುಗಿ, ಜೊತೆ ಕೆಲಸ ಮಾಡುವ ...ನೊಂದಿಗೆ ಹೃದಯ ಬೆಸುಗೆಯಾಗಿದ್ದು ಹೇಳುವಾಗ ... ಒಲವಿನ ದಿನಗಳನ್ನು ನೆನೆದು ಅವಳ ದನಿಯು ...ವಿವಿಲ್ಲದೆ ಹರುಷದಿಂದ ಕೂಡಿದೆ. ಆದರೆ ಅವನು ...ಪ್ಪಿ ನಡುದಾರಿಯಲ್ಲಿ ಬಿಟ್ಟು ಹೋಗಿರುವುದನ್ನು ...ಾಗ ಮುಗಿಲು ಕಳಚಿಬಿದ್ದಂತೆ ಕಂಗಾಲಾಗಿ ದುಃಖಿ ...ಡೆದ ಕನ್ನಡಿ ಚೂರುಗಳಲ್ಲಿ ಮುಖ ನೋಡಿಕೊಂಡು ...ವನಾಗಿರುವಳು, ಚೂರುಗಳನ್ನು ಜೋಡಿಸಲಾಗದೆ ...ಕ್ಕೆ ಬಿದ್ದವಳು. ಕೈ ಹಿಡಿದ ಹುಡುಗ, ಬದುಕು ... ಜೊತೆ ಇರುವುದಾಗಿ ಹೇಳಿ ಒಂದೆರಡು ತಿಂಗಳು ...ನ ಸಂತಸ ಪ್ರೇಮದ ಕಾವು ಕಡಿಮೆಯಾಗಿ ... ಹೊಟ್ಟೆ ಊಟಕ್ಕೂ ಸಾಧ್ಯವಾಗದೆ ಅದೊಂದು ...ಗೆ, ಅವಳೊಬ್ಬಳನ್ನೆ ಬಿಟ್ಟು ಹೋಗಿರುವನಂತೆ. ...ಹೋಗಿರುವನು ಯಾರಿಗೆ ಗೊತ್ತು? ಮೊದಮೊದಲು ಒಲುಮೆಯಿಂದಲೇ ಇದ್ದವನು ಕ್ರಮೇಣ ಕೂಲಿಯೂ ಸಿಗದೆ ಇವಳೊಂದಿಗೆ ಪ್ರತಿ ದಿನವೂ ಜಗಳ ಮಾಡಿ ಹೋಗಿರುವನು. ನಾಗಮ್ಮ ದಿಕ್ಕು ಕಾಣದೆ ಹುಡುಕಿ ಹುಡುಕಿ ಕಡೆಗೆ ಟ್ರೇನು ಹತ್ತಿರುವಳು.

ಅವಳು ಮಾತಾಡುತ್ತಿರುವಳು. 'ಯಾಕೆ ಬೀಳಲು ಹೋದೆ? ಸತ್ತರೆ ಸ್ವರ್ಗ ಸಿಗುವುದೇನು?' ಓಹ್ ನಾಗಮ್ಮ ಟ್ರೇನಿಗೆ ಬೀಳಲು ಹೋಗಿರುವಳು. ಇವಳು ತಡೆದಿರುವಳು. 'ರಾತ್ರಿ ಏನಾದರೂ ತಿಂದು ಮಲಗಿದಿಯಾ ಇಲ್ಲಾ?' ನಾಗಮ್ಮ ಇಲ್ಲ ಎಂದು ಹೇಳಿ ಮತ್ತೆ ಸುಮ್ಮನಾದಳು.

ನಾಗಮ್ಮಳ ಕಣ್ಣೀರಿಗೆ ಇವಳು ಮಂಜುಗಡ್ಡೆಯಂತೆ ಕರಗಿಹೋಗಿರುವುದು ನನಗಂತೂ ಅಚ್ಚರಿ ಅನಿಸತೊಡಗಿದೆ. ಇವಳ ಬಗ್ಗೆ ಏನೇನೊ ಅಂದುಕೊಂಡಿದ್ದು ನೆನಪಾಗತೊಡಗಿದೆ. ನಾಗಮ್ಮಳನ್ನು ಸಂತೈಸುತ್ತಲೇ ಬದುಕುವ ಧೈರ್ಯ ತುಂಬುತ್ತಿರುವಳು. ಸ್ವತಃ ಹೆತ್ತವರಿಂದ ದೂರಾಗಿ ವಿಚಿತ್ರ ವೇದನೆ, ನಾನಾ ನಮೂನೆಯ ಕಷ್ಟ ಅನುಭವಿಸಿ ರುವುದನ್ನು ವಿವರಿಸುತ್ತಿರುವಳೆನಿಸುತ್ತದೆ. ಛೇ ಇವಳ ಜೀವನದ ಪುಟಗಳು ಎಂಥ ಭಯಾನಕವಾಗಿವೆ? ನಾಗಮ್ಮಳ ಭವಿಷ್ಯದ ಕೌದಿಗೆ ಲ್ಯಾಪಿ ಹಾಕುತ್ತಿರುವಳೇನು? ಇರಬಹುದು. ಆದರೆ ಇವಳು ಅನುಭವಿಸಿದ್ದು ಕೇಳಿದರೆ ಯಾಕೊ ಎದೆಯಲ್ಲಿ ತಲ್ಲಣವೊಂದು ತೀವ್ರವಾಗತೊಡಗಿದೆ.

'ಅಕ್ಕ ಕಾಲಿಗೇನಾಗಿದೆ?' ನಾಗಮ್ಮ ಕೇಳಿದ್ದು ಸರಿಯಾಗಿಯೇ ಇದೆ. ನಾನೇ ನೋಡಿರುವೆನಲ್ಲ..... 'ಇದಾ.....?' ಅವಳು ನೋವಿನಿಂದ ನಕ್ಕಳು.

ಗಂಡಸರೆಂಬುವವರಿಗೆ ಚಟ ತೀರಿಸಿಕೊಳ್ಳಲು ಇವರನ್ನು ಹೀಗೂ ಬಳಸಿಕೊಳ್ಳಬಹುದೆ? ಆದರೆ ನಾನು ನಂಬಲೇಬೇಕು..... ಅವಳು ತನ್ನ ಜೊತೆಗೆ ನಡೆದಿರುವುದನ್ನು ಎಷ್ಟು ನಿರ್ಭಾವುಕತೆಯಿಂದ ಹೇಳುತ್ತಿರುವಳು? ಅವಳಿಗೆ ನೋವು ಅಥವ ಅಳು ಬರುತ್ತಿಲ್ಲವೇ? ಅವಳ ಕೊನೆಯ ವಾಕ್ಯವು ನನ್ನ ಒಳಗಣ್ಣನ್ನು ಪೂರ್ತಿ ತೆರೆಸಿತು. ಏನೆಂದಳವಳು? 'ನಾಗಮ್ಮ ನೀನು ಎಲ್ಲಿಯಾದರೂ ಬದುಕಬಹುದು. ಯಾಕೆಂದ್ರೆ ನೀನು ಹೆಂಗಸು. ನನಗೆ ನೋಡು ವಿಶಾಲ ಆಕಾಶದ ಕೆಳಗೆ ಅಸೀಮ ನೆಲದ ಮೇಲೆ ಎಲ್ಲಿಯೂ ಅಡಗಿಕೊಂಡು ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಯಾಕೆಂದರೆ ನಾನು ಹೆಂಗಸು ಅಲ್ಲದ, ಗಂಡಸು ಅಲ್ಲದ ಹಿಜಡಾ. ಎಲ್ಲರಿಂದ ನಮಗೊಂದೆ ಬಹುಮಾನ. ಅದು ತಿರಸ್ಕಾರ!'

ಈಗ ಅವಳು ನಗುತ್ತಿರುವಳು. ಅದೊಂದು ವಿಕಟ ನಗು. ಇಡೀ ಟೊಳ್ಳು ಸಮಾಜವನ್ನೇ ಒಂದು ಬಾರಿ ಉಫ್ ಎಂದು ಊದಿ ಹಾಕಿದಳು. ಅವಳೆದೆಯ ಭಾವ ನೋವು ಹಿಡಿದಿಡಲು ಹೃದಯ ಹೈರಾಣಾಗತೊಡಗಿತು. ನಾನು ರಾತ್ರಿ ಮಾತಾಡಿಸಬೇಕಾಗಿತ್ತು, ಎಂಥ ತಪ್ಪು ಮಾಡಿದೆ.? ಎಷ್ಟೊ ಬಾರಿ ಮೇಲ್ಪದರಿನ ನಂಬಿಕೆಗಳು ನಮ್ಮನ್ನು ದಾರಿ ತಪ್ಪಿಸುತ್ತವೆ. ಟ್ರೇನು ಮತ್ತೆ ಚಲಿಸತೊಡಗಿತು. ಆದರೆ ನಿಧಾನಗತಿಯಲ್ಲಿ, ಈಗ ಅವಳು ನಾಗಮ್ಮಳ ಕೈಯಲ್ಲಿ ಒಂದಿಷ್ಟು ಹಣ ಕೊಟ್ಟಳು. ಅದು ಅವಳು ಟ್ರೇನಿನಲ್ಲಿ ನಾಲ್ಕು ದಿನಗಳ ಕಾಲ ವಸೂಲಿ ಮಾಡಿದ ಹಣವಂತೆ. ನಾಗಮ್ಮಳಿಗೆ ಏನಾದರೂ ವ್ಯವಸ್ಥೆಯಾಗುವವರೆಗೆ ಇರಲಿ ಎಂದು ಒತ್ತಾಯ ಮಾಡಿ ಅವಳ ಕೈಗಿತ್ತಳೆನಿಸುತ್ತದೆ. ನಾಗಮ್ಮ ಬೇಡವೆಂದು ಹೇಳುತ್ತಿರುವಳು. 'ನಾ ಇಲ್ಲೇ ಇಳೀತಿನಿ. ಚಳಿ ಭಾಳ ಇದೆ. ತಗೊ ಈ ಬೆಡ್‌ಶೀಟ್. ಕತ್ತಲು ಇನ್ನೂ ಇದೆ. ಮಲಗು.'

'ನಿಮ್ಮೂರ ಅಕ್ಕಾ ಇದು?' ನಾಗಮ್ಮ ಕೇಳಿದ್ದಕ್ಕೆ ಅವಳು, 'ಊಹುಂ. ನಮ್ಮೂರು ಅಂತ ಯಾವುದೂ ಇಲ್ಲ..'

ಅವಳು ಇಳಿಯುತ್ತಿರುವಳು. ನೋವಿನ ಪಾದದಿಂದ ಗೆಜ್ಜೆ ಗಲ್ಲೆಂದವು. ನಾನೀಗ ಕಣ್ಣು ಪೂರ್ತಿ ತೆರೆದೆ. ಅವಳು ನಾಗಮ್ಮಳ ತಲೆ ಸವರಿ ಹೊಂಟೇಬಿಟ್ಟಳು. ಮಲಗಿದವರಿಗೆ ಸ್ವಲ್ಪವೂ ತುಳಿಯದಂತೆ..... ಅವಳದಲ್ಲದ ಊರಿನ ಮೇಲೆ ಟ್ರೇನು ನಿಂತಿತು. ಅವಳು ಬಾಗಿಲು ತೆರೆದು ಬಿರುಗಾಳಿಯಂತೆ ಹೊರನಡೆದಳು.

ನಾನೀಗ ಹೊದ್ದ ಶಾಲು ಕೊಡವಿ ಧಿಗ್ಗನೆ ಎದ್ದು ಅವಳಂತೆ ವೇಗದಲ್ಲಿ ಕೆಳಗಿಳಿದೆ. ಮತ್ತು ಬಾಗಿಲಿನತ್ತ ಧಾವಿಸಿದೆ. ಗಾಢ ಕತ್ತಲಲ್ಲಿ ಅವಳು ಬೀಸು ನಡಿಗೆಯಲ್ಲಿ ಚಲಿಸತೊಡಗಿರುವಳು. ಅವಳನ್ನು ಕರೆವ ಮನಸಾಯಿತು....... ಕರೆದರೆ ಕೇಳಿಸುವಷ್ಟು ಅಂತರದಲ್ಲಿದ್ದಳು. ಏನೆಂದು ಕರೆಯಲಿ? ಅವಳ ಹೆಸರೇ ಕೇಳಲಿಲ್ಲ...... ನಾಗಮ್ಮಳೇನಾದರೂ ಕೇಳಿರುವಳೇ? ಹಿಂದಕ್ಕೆ ಹೊರಳಿದೆ, ನಾಗಮ್ಮ ನನ್ನ ಬೆನ್ನ ಹಿಂದೆಯೇ ಬಂದಿರುವಳೇನೋ.. ಅವಳಿಗೆ ಬೀಳ್ಕೊಡಲು.....

'ನಾಗಮ್ಮ ಅವಳ ಹೆಸರೇನು?' ಕುತೂಹಲದಿಂದ ಕೇಳಿದೆ.

'ಗೊತ್ತಿಲ್ಲಕ್ಕ.....' ನಾಗಮ್ಮಳ ದನಿಯಲ್ಲಿನ ಭಾವ ಮಾತ್ರ ಅವಳ ಬಗ್ಗೆ ಅದಮ್ಯ ಪ್ರೀತಿ ವ್ಯಕ್ತಪಡಿಸುತ್ತಿದೆ. ನಾಗಮ್ಮಳ ಕಣ್ಣಲ್ಲಿ ನೀರ ಹನಿ ಇದೆ. ಮುಖದ ತುಂಬ ಅವಳು ಕೊಟ್ಟ ಹಿಮ್ಮತ್ತು ಪಸರಿಸಿದೆ. ನಾಗಮ್ಮಳ ಕೈಹಿಡಿದು ಬಾಗಿಲು ಪೂರ್ತಿ ತೆರೆದೆ, ಅವಳು ನೋಡಲಿ ಎಂದು. ಟ್ರೇನು ಚಲಿಸತೊಡಗಿತು. ಅವಳು ದೂರ ಹೋಗುತ್ತಿರುವಳು, ಕೊರೆದ ಚಳಿ ಸೀಳುತ ಬೆಂಕಿಯುಂಡೆಯಂತೆ. ❖

ಲಂಕೇಶ್ 77 ವಿಶೇಷಾಂಕ

▸5 ಜೀತದಿಂದ ವಿಮೋಚನೆಯಾದರೇ?

ಸಂಬಳಕ್ಕೂ ವ್ಯತ್ಯಾಸವಿದೆ. ಬೇಕೆಂದರೆ ತಿಂಗಳಿನ ಸಂಬಳದ ಕೆಲಸ ಬೇಡವೆಂದು ಬೇರೆ ಕೆಲಸಕ್ಕೆ ಹೋಗಬಹುದು. ಹಳೆಯ ರೀತಿಯ ದೌರ್ಜನ್ಯವಿಲ್ಲ.

ಆದರೆ ಜೀತವಿಮುಕ್ತಿ ಆಗಿದೆಯೇ? ಈ ಪ್ರಶ್ನೆಗೆ ಉತ್ತರ ಎಲ್ಲರೂ ಹುಡುಕಬೇಕು. ನನಗೆ ಶಂಭೂಕನಗರದಾಚೆಗೆ ಕಂಡ ಎರಡು ಸಂಗತಿಗಳನ್ನು ನಿಮ್ಮ ಮುಂದಿಡುತ್ತೇನೆ. ತೀರ್ಮಾನ ನೀವೇ ಮಾಡಿ.

ಇಡೀ ಕರ್ನಾಟಕದ ಪ್ರತಿಯೊಂದು ಹಳ್ಳಿಯಿಂದಲೂ ಜನರು ವಲಸೆ ಹೋಗಿದ್ದಾರೆ. ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಶೇ.12ರಷ್ಟನ್ನು ಹೊಂದಿರುವ ಬೆಂಗಳೂರು ಆಗಿರುವುದು ಈ ಎಲ್ಲಾ ಹಳ್ಳಿಗಳ ಜನರನ್ನು ತುಂಬಿಕೊಂಡೇ. ಬೆಂಗಳೂರಿನಲ್ಲಿ ಸುಮಾರು 7 ಲಕ್ಷ ಜನ ಕಟ್ಟಡ ಕಾರ್ಮಿಕರಿದ್ದಾರೆಂದು ಒಂದು ಅಂದಾಜು. ಅದಕ್ಕೆ ಸಮೀಪದ ಸಂಖ್ಯೆಯಲ್ಲಿ ಗಾರ್ಮೆಂಟ್ಸ್‌ಗೆ ಹೋಗುವ ಮಹಿಳೆಯರಿದ್ದಾರೆ. ಸುಮಾರು 1 ಲಕ್ಷ ಜನರು ಕ್ಲೀನಿಂಗ್ ಕೆಲಸದಲ್ಲಿ ಇದ್ದಾರೆ. ಅವರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆ ಪೌರಕಾರ್ಮಿಕರಾಗಿ ಕೆಲಸ ಮಾಡುವವರು ಸುಮಾರು 15 ಸಾವಿರ ಜನರು. ಸುಮಾರು 30ಕ್ಕೂ ಹೆಚ್ಚು ಕಂಟ್ರಾಕ್ಟರ್‌ಗಳಡಿಯಲ್ಲಿ ಕೆಲಸ ಮಾಡುವ ಇವರಿಗೆ ಹಾಲಿ ರೂ.1800ರಿಂದ ರೂ.2200ರವರೆಗೆ ತಿಂಗಳ ಸಂಬಳ ನೀಡಲಾಗುತ್ತದೆ. ಹೋರಾಟ ಜೋರಾಗಿ ನಡೆದಿರುವ ಕಡೆ 2500 ರೂ.ಗಳನ್ನು ನೀಡುತ್ತಿದ್ದಾರೆ. ಇದನ್ನು ಹೊರತುಪಡಿಸಿದ ಇನ್ನಾವುದೇ ಬೆನಿಫಿಟ್ ಇವರಿಗಿಲ್ಲ. ಒಂದು ವೇಳೆ ಪ್ರಶ್ನೆ ಕೇಳಿದರೆ, ಸಂಘ ಕಟ್ಟಲು ಪ್ರಯತ್ನ ಮಾಡಿದರೆ ಹಣಿಯಲು ಬೇಕಾದ ಒಂದು ದೊಡ್ಡ ನೆಟ್‌ವರ್ಕ್‌ಅನ್ನು ಪಾಲಿಕೆ ಹಾಗೂ ಕಂಟ್ರಾಕ್ಟರ್‌ಗಳು ಸಾಕಿಕೊಂಡಿದ್ದಾರೆ. ಪ್ರಶ್ನೆಯೆತ್ತಲಾಗದ ಸ್ಥಿತಿಯಲ್ಲಿ, ಬೆಂಗಳೂರಿನಲ್ಲಿ ತಿಂಗಳಿಗೆ 2500 ರೂ. ಸಂಬಳಕ್ಕೆ ಕೆಲಸ ಮಾಡುವುದನ್ನು ಏನೆಂದು ಕರೆಯಬಹುದು? ಜೀತ ಎಂದು ಕರೆಯುವುದೇ ಅತ್ಯಂತ ಸೂಕ್ತ ಎಂದು ತೋರುತ್ತದೆ. ಕರ್ನಾಟಕದ ರಾಜಧಾನಿ ಹೈಟೆಕ್ ಬೆಂಗಳೂರಿನ ಕಾರ್ಪೊರೇಷನ್ ಇದನ್ನು ನಡೆಸುತ್ತಿರುವುದರಿಂದ ಅಧಿಕೃತ ಯಾ ಸರ್ಕಾರೀ ಜೀತ ಎಂದು ಬೇಕಾದರೆ ಕರೆಯಬಹುದು.



ಗುತ್ತಿಗೆ ಪೌರಕಾರ್ಮಿಕರಲ್ಲಿ ಮಾದಿಗ ಸಮುದಾಯಕ್ಕೆ ಸೇರಿದವರೇ ಶೇ 95ರಷ್ಟು. 30ರಷ್ಟಿರುವ ಗುತ್ತಿಗೆದಾರರಲ್ಲಿ ಶೇ.90ರಷ್ಟು ಜನ ರೆಡ್ಡಿಗಳು. ಅಂದರೆ ನಾಗಸಂದ್ರದ ಜೀತ ಪದ್ಧತಿ ಬೆಂಗಳೂರು ಮಹಾನಗರಕ್ಕೆ ಶಿಫ್ಟ್ ಆಗಿದೆ. ನಾಗಸಂದ್ರದ ಜೀತ ಅನಧಿಕೃತವಾಗಿತ್ತು. ಆದರೆ ಹನುಮಂತರೆಡ್ಡಿಯ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಹನುಮಂತಪ್ಪ ಎಂಬ ಜೀತಗಾರನ ಹತ್ತಿರ ವರ್ಷಕ್ಕೆ 1 ರೂ. ಕೂಲಿ ಎಂದು ಸ್ಟಾಂಪ್ ಪೇಪರ್ ಮೇಲೆ ಬರೆಯಲಾಗಿತ್ತು. ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಅಧಿಕೃತವಾಗಿ ಟೆಂಡರ್ ನೀಡಲಾಗುತ್ತದೆ. ಆದರೆ ಗುತ್ತಿಗೆದಾರರಿಗೂ, ಪೌರಕಾರ್ಮಿಕರಿಗೂ ಮಧ್ಯೆ ಯಾವ ಅಧಿಕೃತ ಪತ್ರ ವ್ಯವಹಾರವೂ ಇಲ್ಲ, ಕಾರ್ಮಿಕ ಕಾನೂನಿನ ಪ್ರಕಾರ ಕಡ್ಡಾಯವಾದ ಸಂಬಳ ಚೀಟಿ, ಇಎಸ್‌ಐ ಮತ್ತು ಪಿಎಫ್ ಯಾವುದೂ ಇಲ್ಲ.

ಇನ್ನು ನಮ್ಮ ಅಧ್ಯಯನದಲ್ಲಿ ನಾವು ಕಂಡುಕೊಂಡ ಎರಡನೆಯ ಅಂಶ. ಜಾತಿ ಮತದ ಭೇದವಿಲ್ಲದೆ ಇಡೀ ರೈತ ಸಮುದಾಯವೇ ಜೀತಕ್ಕಿದೆ. ರಾಗಿ, ಭತ್ತ, ಜೋಳ ಇತ್ಯಾದಿ ಎಲ್ಲಾ ಬೆಳೆಗಳಿಗೆ ತಗುಲುವ ಖರ್ಚು ಮತ್ತು ಬರುವ ಆದಾಯವನ್ನು ಲೆಕ್ಕ ಹಾಕಿದ್ದೇವೆ. ಹಾಲಿ ಇರುವ ಬೆಳೆಗಳಲ್ಲಿ ಯಾವ ಬೆಳೆ ಬೆಳೆದರೂ ಅಂತಿಮವಾಗಿ ರೈತರಿಗೆ ಸಿಗುತ್ತಿರುವುದೆಷ್ಟು? ಕೆಲವು ಸಾರಿ ಜಮೀನಿನ ಮಾಲೀಕರಿಗೆ, ಅವರು ಹಾಗೂ ಅವರ ಕುಟುಂಬ ಹಾಕಿರುವ ಶ್ರಮಕ್ಕೆ ಮಾರುಕಟ್ಟೆಯಲ್ಲಿನ ಕೂಲಿದರ ಏನಿದೆಯೋ, ಅದು ಗಿಟ್ಟುತ್ತದೆ. ಕೆಲವು ಸಾರಿ, ಅದೂ ಗಿಟ್ಟುವುದಿಲ್ಲ. ಇನ್ನು ಹಾಕಿರುವ ಒಟ್ಟು ಒಳಸುರಿಯ ಮೌಲ್ಯ ಶ್ರಮದ ಜೊತೆಗೆ ಬರಬೇಕಾದ ಲಾಭ, ಭೂಮಿಯನ್ನು ಬಂಡವಾಳ ಎಂದು ಪರಿಗಣಿಸಿದರೆ ಅದಕ್ಕೆ ಬರಬೇಕಾದ ಕನಿಷ್ಠ ಲಾಭ ಇತ್ಯಾದಿಗಳ ಪ್ರಶ್ನೆಯೇ ಇಲ್ಲ. ಈ ಲೆಕ್ಕವನ್ನು ಬಹಳ ಹಿಂದೆಯೇ ಪ್ರೊ.ಎಂ.ಡಿ.ನಂಜುಂಡಸ್ವಾಮಿಯವರು ಮಾಡಿದ್ದರು ಮತ್ತು ರೈತಸಂಘದ ಕಾರ್ಯಕರ್ತರಿಗೆ ಕಲಿಸಿದ್ದರು. ಆದರೆ ರಸಗೊಬ್ಬರ ಹಾಗೂ ಇನ್ನಿತರ ಒಳಸುರಿಗಳ ಇವತ್ತಿನ ಬೆಲೆಯನ್ನು ಲೆಕ್ಕ ಹಾಕಿದರೆ ಹೆಚ್ಚಿನ ರೈತರಿಗೆ, ಹೆಚ್ಚಿನ ಸಾರಿ ಅವರು ಹಾಕಿರುವ ಶ್ರಮದ ಕೂಲಿಯಷ್ಟೇ ಗಿಟ್ಟುತ್ತದೆ. ಇಂದು ನಮ್ಮ ನಾಡಿನಲ್ಲಿ ಸಣ್ಣ ಮತ್ತು ಅತೀಸಣ್ಣ ಹಿಡುವಳಿದಾರರ ಸಂಖ್ಯೆ ಬಹಳ ಹೆಚ್ಚಾಗುತ್ತಿದೆ. ಅವರೆಲ್ಲರ ಪಾಡು ಇದೇ ಆಗಿದೆ. ಇವರು, ಭೂಮಿಯನ್ನು ಬಿಟ್ಟು ನಗರಗಳಲ್ಲಿ ದುಡಿಯಲು ಇನ್ನೂ ಹೋಗದೇ ಇರುವವರು. ಪಿ.ಸಾಯಿನಾಥ್ ಅವರ ಭಾಷೆಯಲ್ಲಿ ಹೇಳುವುದಾದರೆ 'ತ್ಯಾಗ ಮಾಡಿ ಭೂಮಿಯಲ್ಲಿ ಉಳಿದು ಬೇಸಾಯ ಮಾಡುತ್ತಿರುವವರು'.


ಇವರನ್ನು ಏನು ಮಾಡಹೊರಟಿದೆ ಈ ವ್ಯವಸ್ಥೆ? ಬಹುಶಃ ಶಂಭೂಕನಗರಕ್ಕೆ ಹೊಂದಿಕೊಂಡೇ 250 ಮೀ. ದೂರದಲ್ಲೇ ಇರುವ ಎಕ್ಸಿಮ್ ಸೀಡ್ಸ್ ಕಂಪೆನಿಯಂತಹವನ್ನು ಒಂದು ಪರ್ಯಾಯವಾಗಿ ತರಲಾಗುತ್ತದೆ. ಈ ಕಂಪೆನಿ ಅಲ್ಲಿ 30ರಿಂದ 40 ಎಕರೆ ಭೂಮಿಯನ್ನು ಕೊಂಡುಕೊಂಡಿದೆ. ಬೀಜ ತಯಾರಿಕೆ ನಡೆಸುತ್ತಿರುವ ಎಕ್ಸಿಮ್ ಸೀಡ್ಸ್, ತನಗೆ ಭೂಮಿ ಮಾರಿದವರಿಗೆ ಸಂಬಳ ಕೊಟ್ಟು ಕೆಲಸ ನಡೆಸಲಿದೆ. ಈಗಾಗಲೇ ಅದನ್ನು ಇಲ್ಲಿಂದ 30 ಕಿ.ಮೀ ದೂರದ ಐ.ಡಿ. ಹಳ್ಳಿ ಎಂಬಲ್ಲಿ ನಾಮಧಾರಿ ಸೀಡ್ಸ್ ಮಾಡುತ್ತಿದೆ. ಅಲ್ಲಿ ಜಮೀನನ್ನು ಪೂರಾ ಕೊಂಡೂ ಇಲ್ಲ, ಲೀಸ್‌ಗೆಂದು ತೆಗೆದುಕೊಂಡು, ಲೀಸ್ ಕೊಟ್ಟವರಿಗೇ ತಿಂಗಳಿಗೆ 2000 ಸಂಬಳ ಕೊಟ್ಟು ದುಡಿಸುತ್ತಿದೆ. ಲೀಸ್‌ನಿಂದ ವಾಪಸ್ ತೆಗೆದುಕೊಳ್ಳುವಾಗ ಆ ಭೂಮಿ ಸಂಪೂರ್ಣ ಬಂಜರಾಗಿರುತ್ತದೆಂಬುದು ಅವರಿಗೂ ಗೊತ್ತಿದೆ, ಇವರಿಗೂ ಗೊತ್ತಿದೆ. ಅಂದರೆ ಈ ಎಲ್ಲಾ ಸಣ್ಣ ಮತ್ತು ಅತೀ ಸಣ್ಣ ಹಿಡುವಳಿದಾರರು ಹಳ್ಳಿಯಲ್ಲೇ ಉಳಿದರೂ ಅವರನ್ನು ಇಂತಹ ಕಂಪೆನಿಗಳ ಸಂಬಳದ ಜೀತಕ್ಕೆ ಒಡ್ಡಲು ಸಾಧ್ಯವಿದೆಯೆಂದು ವ್ಯವಸ್ಥೆಗೆ ಅರ್ಥವಾಗಿದೆ.


ಜೀತದ ಸ್ವರೂಪ ಬದಲಾಗಿದೆ. ಜೀತ ಊರಿಂದ ಊರಿಗೆ ಮತ್ತು ಇತರ ರೈತಾಪಿಗೂ ವಿಸ್ತರಣೆಯಾಗಿದೆ.

ಇನ್ನೊಂದು ಜೀತ ವಿಮುಕ್ತಿಯ ಹೋರಾಟ ನಡೆಯಬೇಕೇ? ಬೇಡವೇ? ❖

ಮಾಧ್ಯಮದವರ ಮೇಲೆ ವಕೀಲರ ಹಲ್ಲೆ- ವಕೀಲರ ಮೇಲೆ ಪೊಲೀಸರ ದೌರ್ಜನ್ಯ

ಕರಾಳ ಶುಕ್ರವಾರದ ಎರಡು ಕಥೆ ಒಂದು ವ್ಯಥೆ


ಪೊಲೀಸ್ ದೌರ್ಜನ್ಯ



ಮಾಧ್ಯಮಗಳ ಸುಳ್ಳು ವರದಿ


ವಕೀಲರಿಂದ ದಾಳಿ...

ಕಳೆದ ಮಾರ್ಚ್ 2 ರಂದು ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟಿನ ಆವರಣದಲ್ಲಿ ಒಂದು ಯುದ್ಧವೇ ನಡೆದುಹೋಯಿತು. ಯುದ್ಧದಲ್ಲಿ ಎದುರಾಳಿಗಳಾಗಿ ಒಂದೆಡೆ ಕೆಲವು ವಕೀಲರು ಮತ್ತೊಂದೆಡೆ ಪೊಲೀಸರು ಹಾಗು ಕೆಲವು ಮಾಧ್ಯಮದವರೂ ಇದ್ದರು. ಆದರೆ ಯುದ್ಧ ನಡೆದದ್ದು ಮಾತ್ರ ಪ್ರಜಾತಂತ್ರದ ಮೇಲೆ. ಸೋತದ್ದು ಸಹ ಜನತಂತ್ರವೇ.

ಈಗ ಘಟನೆ ನಡೆದು ಒಂದು ವಾರವಾಗುತ್ತಿರುವ ಹೊತ್ತಿನಲ್ಲಾದರೂ ಪ್ರಜಾತಂತ್ರದ ಅವಳಿಜವಳಿಗಳಾದ ವಕೀಲರು ಮತ್ತು ಮಾಧ್ಯಮದವರ ನಡುವಿನ ದಾಯಾದಿ ಕಲಹದ ಮೂಲವೇನು? ಅಂತಿಮವಾಗಿ ಇದರ ಲಾಭ ಯಾರಿಗಾಯಿತು? ಪೊಲೀಸರು ಮತ್ತು ಸರ್ಕಾರದ ಪಾತ್ರವೇನು? ಮುಂದೆ ಈ ರೀತಿ ಪ್ರಜಾತಂತ್ರದ ಮೂಲಾಧಾರಗಳು ಪರಸ್ಪರ ಭ್ರಾತೃಹತ್ಯೆಯಲ್ಲಿ ತೊಡಗದಂತೆ ಏನು ಮಾಡಬಹುದೆಂದು ದಾರಿ ಅರಸುವ ಅಗತ್ಯವಿದೆ.


ಅದಕ್ಕೂ ಮುಂಚೆ ಅವತ್ತು ನಡೆದದ್ದೇನು ಮತ್ತು ಈ ದಾಯಾದಿ ಕಲಹದಲ್ಲಿ ಪ್ರಜಾತಂತ್ರಕ್ಕೆ ಆದ ನಷ್ಟವೇನು ಎಂಬುದನ್ನು ಅಂದಾಜು ಮಾಡುವ ಅಗತ್ಯವಂತೂ ಇದೆ.


ನನ್ನ ಪ್ರಕಾರ ಕರಾಳ ಶುಕ್ರವಾರದ ಕಥನದಲ್ಲಿ ಎರಡು ದುರಂತ ಕಥೆಗಳಿವೆ. ಒಂದು ವಿಷಾದನೀಯ ವ್ಯಥೆಯೂ ಇದೆ.

ಅಂದು ಗಣಿಕಳ್ಳ ಜನಾರ್ದನ ರೆಡ್ಡಿಯ ವಿಚಾರಣೆ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿರುವ ಸಿಬಿಐ ಕೋರ್ಟಿನಲ್ಲಿ ನಡೆಯಬೇಕಿತ್ತು. ಸಹಜವಾಗಿಯೇ ದೊಡ್ಡ ಮಟ್ಟದಲ್ಲಿ ಪೊಲೀಸರ ನಿಯೋಜನೆಯಾಗಿತ್ತು, ಹಾಗೆಯೇ ಅದನ್ನು ವರದಿ ಮಾಡಲು ದೊಡ್ಡ ಮಟ್ಟದಲ್ಲಿ ಮಾಧ್ಯಮದವರ ದಂಡೂ ನೆರೆದಿತ್ತು; ಸಿಟಿ ಸಿವಿಲ್ ಕೋರ್ಟು ಆವರಣ ಇಂಥಾ ದೊಡ್ಡ ಪ್ರಕರಣದಲ್ಲಿ ಉಂಟಾಗುವ ನೂಕುನುಗ್ಗಲನ್ನು ತಡೆಯಲು ಸಮರ್ಥವಿಲ್ಲ, ಕೆಲವು ತಿಂಗಳ ಹಿಂದೆ ದರ್ಶನ್ ಪ್ರಕರಣವನ್ನು ವರದಿ ಮಾಡುವ ಸಂದರ್ಭದಲ್ಲೂ ಪಾರ್ಕಿಂಗ್ ವಿಷಯದಲ್ಲಿ ಮಾಧ್ಯಮದವರಿಗೂ ವಕೀಲರಿಗೂ ಚಕಮಕಿ ಯಾಗಿತ್ತು, ಎಲ್ಲಕ್ಕಿಂತ ಹೆಚ್ಚಾಗಿ ಕಳೆದ ಜನವರಿ 17ರಂದು ವಕೀಲರೊಬ್ಬರ ಪ್ರಕರಣದಲ್ಲಿ ಪೊಲೀಸರ ವಿರುದ್ಧ ಸಿಟಿ ಸಿವಿಲ್ ಕೋರ್ಟಿನ ವಕೀಲರು ನಡೆಸಿದ ದಾಂಧಲೆ, ಇಡೀ ಬೆಂಗಳೂರು ನಗರದ ನಾಗರಿಕ ಜೀವನವನ್ನೇ ಅಸ್ತವ್ಯಸ್ತಗೊಳಿಸುವಂತೆ ನಡೆಸಿದ ಮುಷ್ಕರ ಹಾಗೂ ಅದರಲ್ಲಿ ವಕೀಲರು ಮಾಡಿದ ತಪ್ಪನ್ನು ತೋರಿಸಿದ ಮಾಧ್ಯಮದ ವರದಿಗಳು ವಕೀಲರ ಬಗ್ಗೆ ನಾಗರಿಕರಲ್ಲಿ ಅಸಮಾಧಾನ ಬೆಳೆಸಿತ್ತು, ಆದ್ದರಿಂದ ವಕೀಲರಲ್ಲಿ ಮಾಧ್ಯಮದವರ ಬಗ್ಗೆ ಒಂದು ತಣ್ಣನೆಯ ಅಸಹನೆಯಿತ್ತು, ಮತ್ತೊಂದು ಕಡೆ ಪೊಲೀಸರಲ್ಲೂ ಸಿಟಿ ಸಿವಿಲ್ ಕೋರ್ಟು ವಕೀಲರ ಮೇಲೆ ಸಿಟ್ಟು ಉಳಿದುಕೊಂಡಿತ್ತು, ಇದೆಲ್ಲದರ ಮಧ್ಯೆ ಕೆಲವು ವಕೀಲರು ಕೋರ್ಟು ಕಲಾಪವನ್ನು ವರದಿ ಮಾಡಲು ಬರುತ್ತಿದ್ದ ಮಾಧ್ಯಮದವರ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸುವುದು ನಡೆಯುತ್ತಲೇ ಇತ್ತು, ಇದು ವಕೀಲ ಸಮುದಾಯ ಮತ್ತು ಮಾಧ್ಯಮದವರನ್ನು ಮಾನಸಿಕವಾಗಿ ಎರಡು ವಿರುದ್ಧ ಬಣಗಳನ್ನಾಗಿಸಿಬಿಟ್ಟಿತ್ತೆಂದು ಕಾಣುತ್ತದೆ.

ಈ ಹಿನ್ನೆಲೆಯಲ್ಲಿ ಜನಾರ್ದನ ರೆಡ್ಡಿ ವಿಚಾರಣೆಯ ಸಮಯದಲ್ಲಿ ಪೊಲೀಸರು, ಮಾಧ್ಯಮದವರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಸಿಬಿಐ ಕೋರ್ಟು ಆವರಣದೊಳಗೆ ಹೋದ ವಕೀಲರನ್ನು ನ್ಯಾಯಾಧೀಶರು ಹೊರಗೆ ಹೋಗಲು ಹೇಳಿದರು. ಇದೇ ಸಂದರ್ಭದಲ್ಲಿ ಕೆಲವು ಪೊಲೀಸರು ಏಕಕಾಲದಲ್ಲಿ ಮಹಿಳಾ ಮಾಧ್ಯಮ ಪ್ರತಿನಿಧಿಗಳು ಮತ್ತು ಮಹಿಳಾ ವಕೀಲರ ಜೊತೆಗೆ ಅಸಭ್ಯವಾಗಿ ವರ್ತಿಸಿದ ವರದಿಗಳಿವೆ. ಮಾಧ್ಯಮದವರಿಗೆ ವರದಿ ಮಾಡಲು ಒದಗಿಸಿದ್ದ ಸ್ಥಳದ ಬಳಿಯೂ ಪೊಲೀಸರು ವಿನಾಕಾರಣ ತರಲೆ ಕೂಡಾ ಮಾಡಿದ್ದಾರೆ. ಅಂದರೆ, ಒಂದು ಬಗೆಯಲ್ಲಿ ಬೆಳಗ್ಗೆಯಿಂದಲೇ ಮಾಧ್ಯಮದವರ ವಿರುದ್ಧ ವಕೀಲರಿಗೆ, ವಕೀಲರ ವಿರುದ್ಧ ಮಾಧ್ಯಮದವರಿಗೆ ಇದ್ದ ಅಸಹನೆಯ ಜೊತೆಜೊತೆಗೆ ಕೆಲವು ಪೊಲೀಸರೂ ಸಹ ಪ್ರಚೋದನೆ ಮಾಡುವ ರೀತಿಯಲ್ಲಿ ವರ್ತಿಸಿದ್ದಾರೆ.

ಈ ಸ್ಫೋಟಕ ವಾತಾವರಣದಲ್ಲಿ ವಕೀಲರು ಮತ್ತು ಮಾಧ್ಯಮದವರು ವಾಗ್ವಾದದಲ್ಲಿ ತೊಡಗಿದ್ದಾಗ ಯಾವುದೋ ಕಲ್ಲು ಅಥವಾ ಬಾಟಲು ಮೇಲಿಂದ ಬಿದ್ದಿತು. ಇದೊಂದು ನೆಪವಾಗಿ ಪರಿಣಮಿಸಿ ವಕೀಲರ ಅಥವಾ ವಕೀಲರ ಧಿರಿಸಿನಲ್ಲಿದ್ದ ಪುಂಡರು ಕೈಗೆ ಸಿಕ್ಕ ಮಾಧ್ಯಮದವರ ಮೇಲೆ ಹಲ್ಲೆ ಮಾಡಿದರು. ಮಾಧ್ಯಮದವರು ತಪ್ಪಿಸಿಕೊಂಡು ಹೋದರೂ ಅವರನ್ನು ಅಟ್ಟಿಸಿಕೊಂಡು ಹೊಡೆದರು. ಪ್ರಾರಂಭದಲ್ಲಿ ಸುಮ್ಮನೆ ತಮಾಷೆ ನೋಡುತ್ತಿದ್ದ ಪೊಲೀಸರು ನಂತರದಲ್ಲಿ ಕೋರ್ಟು ಆವರಣದೊಳಗೇ ನುಗ್ಗಿ ವಕೀಲರ ಮೇಲೆ ಲಾಠಿ ಚಾರ್ಜು ಪ್ರಾರಂಭಿಸಿದರು. ಇದಕ್ಕೆ ಪ್ರತಿಯಾಗಿ ವಕೀಲರು ಕೋರ್ಟ್ ಆವರಣದಲ್ಲಿ ಸಿಕ್ಕಸಿಕ್ಕದ್ದನ್ನು ಮಹಡಿಯ ಮೇಲಿಂದ ಪೊಲೀಸರತ್ತ ಎಸೆಯಲಾರಂಭಿಸಿದರು. ಆಗ ದೃಶ್ಯ ಮಾಧ್ಯಮಗಳು ತೋರಿಸಿದಂತೆ ಹಲವು ಪೊಲೀಸರಿಗೆ ಪೆಟ್ಟು ಬಿತ್ತು, ಹಲವು ಸಾರ್ವಜನಿಕರ ತಲೆ ಒಡೆಯಿತು. ಮಧ್ಯಪ್ರವೇಶ ಮಾಡಿದ ನ್ಯಾಯಾಧೀಶರುಗಳು ಪೊಲೀಸರನ್ನು ಆವರಣದಿಂದ ಹೊರಹೋಗಲು ಕಠಿಣ ಆದೇಶವನ್ನು





• ಶಿವಸುಂದರ್

ನೀಡಿದರೂ ಪೊಲೀಸರು ಕೂಡಲೇ ಜಾಗ ಖಾಲಿ ಮಾಡಲಿಲ್ಲ.

ಹೀಗೆ ಬೆಳಗ್ಗಿಯಿಂದ ಮಧ್ಯಾಹ್ನದ ತನಕ ಪ್ರಧಾನವಾಗಿ ಕೆಲವೇ ಕೆಲವು ಪುಂಡ ವಕೀಲರು ಕ್ಷುಲ್ಲಕವಾದ ಕಾರಣಕ್ಕೆ ಮಾಧ್ಯಮದವರ ಮೇಲೆ ಗಲಭೆ ಆರಂಭಿಸಿದರು. ಅದು ಸಮೂಹ ಸನ್ನಿಯಾಗಿ ತಿರುಗಿ ಕೋರ್ಟ್ ಆವರಣ ರಣಾಂಗಣವೇ ಆಗಿಬಿಟ್ಟಿತು. ನಂತರದಲ್ಲಿ ಕಾನೂನು ಬಾಹಿರವಾಗಿ ಕೋರ್ಟು ಆವರಣವನ್ನು ಪ್ರವೇಶಿಸಿದ ಪೊಲೀಸರು ವಕೀಲರನ್ನು ನಿಯಂತ್ರಿಸಲು ಅವರ ಮೇಲೆ ಹಿಂಸಾತ್ಮಕವಾಗಿ ದಾಳಿ ಮಾಡಿದರು.

ವಾಸ್ತವವಾಗಿ ಮಾಧ್ಯಮ ಮತ್ತು ಪೊಲೀಸರ ಮೇಲೆ ಅಂದು ನಡೆದ ದಾಳಿಯನ್ನು ಕೆಲವು ಪುಂಡ ವಕೀಲರು ಮಾತ್ರ ಮಾಡಿದ್ದು ಎಂಬುದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕಿದೆ. ಇಷ್ಟಿದ್ದರೂ ಕೆಲವು ಕನ್ನಡ ಮಾಧ್ಯಮಗಳು ಈ ಪುಂಡಾಟಿಕೆಯನ್ನು ಇಡೀ ವಕೀಲ ಸಮುದಾಯಕ್ಕೆ ಅನ್ವಯಿಸುವಂತೆ ಈಗಲೂ ವರದಿ ಮಾಡುತ್ತಿರುವುದು ಖಂಡನೀಯವಾದದ್ದು. ಇದೇ ಸಮಯದಲ್ಲಿ ವಕೀಲ ಸಮುದಾಯವೂ ತಮ್ಮ ನಡುವೆ ಈ ಬಗೆಯ ಪುಂಡ ಶಕ್ತಿಗಳು ಇವೆ ಎಂಬುದನ್ನು ಒಪ್ಪಿಕೊಂಡು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇಡೀ ವಕೀಲ ಸಮುದಾಯಕ್ಕೆ ವಕ್ತಾರರೆಂಬಂತೆ ವರ್ತಿಸುತ್ತಿರುವ ಪ್ರಗತಿಪರ ವಕೀಲರು ಇದನ್ನು ಅರ್ಥಮಾಡಿಕೊಳ್ಳಬೇಕಿದೆ.

ಇದಿಷ್ಟು ಬೆಳಗಿನ ಕಥೆ.

ಇದಾದನಂತರ ನಡೆದ ಕಥೆಯೂ ಇಷ್ಟೇ ಹಿಂಸಾತ್ಮಕ ಮತ್ತು ವಿಷಾದನೀಯವಾದದ್ದು. ಮಧ್ಯಾಹ್ನದ ನಂತರ ಪೊಲೀಸರ ಅಮಾನುಷ ದೌರ್ಜನ್ಯಕ್ಕೆ ತುತ್ತಾದದ್ದು ಬೆಳಗ್ಗಿನ ಪುಂಡಾಟಿಕೆಯಲ್ಲಿ ಭಾಗವಹಿಸದಿದ್ದ ಅಮಾಯಕ ವಕೀಲರು. ಈ ಅಮಾಯಕ ವಕೀಲರ ಮೇಲೆ ಪೊಲೀಸರು ನಡೆಸಿದ ದೌರ್ಜನ್ಯವನ್ನು ಕಣ್ಣಾರೆ ಕಂಡೂ ಅದನ್ನು ವರದಿ ಮಾಡದೆ ವೃತ್ತಿದ್ರೋಹ ಬಗೆದ ಕನ್ನಡದ ಕೆಲವು ದೃಶ್ಯ ಮತ್ತು ಮುದ್ರಣ ಮಾಧ್ಯಮಗಳದ್ದು ಅತ್ಯಂತ ಖಂಡನೀಯ ವರ್ತನೆ. ಮಧ್ಯಾಹ್ನದ ಮೇಲೆ ಕೋರ್ಟು ಆವರಣದಿಂದ ಹೊರ ಹಾಕಲ್ಪಟ್ಟ ಪೊಲೀಸರು ಹೊರಗಡೆ ಪಕ್ಕಾ ಗೂಂಡಾಗಳಂತೆ ಹೊಂಚುಹಾಕಿ ಕಾದರು. ಕೋರ್ಟು ಆವರಣದಿಂದ ವಕೀಲರು ಹೊರಬರುತ್ತಿದ್ದಂತೆ ಅವರ ಮುಖಮೂತಿ ನೋಡದೆ ಪೊಲೀಸರು ಚಚ್ಚಲಾರಂಭಿಸಿದರು. ಹಲವಾರು ಅಮಾಯಕ ವಕೀಲರ ತಲೆ ಒಡೆದರು. ತೀವ್ರವಾಗಿ ಗಾಯಗೊಳಿಸಿದರು. ವಕೀಲರನ್ನು ತಮ್ಮ ವಾಹನದಲ್ಲಿ ಕರೆದೊಯ್ಯಲು ಪ್ರಯತ್ನಿಸಿದ ನ್ಯಾಯಾಧೀಶರುಗಳಿಗೂ ಪೆಟ್ಟುಬಿತ್ತೆಂದು ಹೇಳಲಾಗುತ್ತಿದೆ. ಪ್ರಜಾತಂತ್ರದಲ್ಲಿ ಕಾನೂನು ಕಾಯಬೇಕಾದ ಪೊಲೀಸರೇ ಬೀದಿ ಗೂಂಡಾಗಳಂತೆ ಸೇಡು ತೀರಿಸಿಕೊಳ್ಳಲು ಹೊಂಚು ಹಾಕಿ ಹಲ್ಲೆ ಮಾಡಿರುವುದು ಅತ್ಯಂತ ಖಂಡನಾರ್ಹ.

ಮಾಧ್ಯಮದ ಕೆಲವರು - ಅದರಲ್ಲೂ ಕನ್ನಡದ ದೃಶ್ಯ ಮಾಧ್ಯಮಗಳು ಮತ್ತು ಕೆಲವು ದಿನಪತ್ರಿಕೆಗಳು - ಈ ಸುದ್ದಿಯನ್ನು ಸಂಪೂರ್ಣವಾಗಿ ಬ್ಲಾಕ್ ಮಾಡಿ ಪೊಲೀಸರು ನಡೆಸಿದ ದೌರ್ಜನ್ಯದಲ್ಲಿ ತಾವೂ ಪ್ರತ್ಯಕ್ಷ ಪಾಲುದಾರರಾದರು. ಈ ಸುದ್ದಿಯನ್ನು ಬ್ಲಾಕ್ ಮಾಡುವ ನಿರ್ಧಾರವನ್ನು ಆ ಮಾಧ್ಯಮದ ಉನ್ನತ ಹಂತದವರು ತೆಗೆದುಕೊಂಡಿರಲೇಬೇಕು. ಇದಕ್ಕಿಂತ ಮುಖ್ಯವಾಗಿ ಬೆಳಗ್ಗಿನ ದಾಳಿಯಲ್ಲಿ ಇಬ್ಬರು ಪೊಲೀಸರು ಸತ್ತಿಲ್ಲ ಎಂದು ಸ್ವತಃ ಬೆಂಗಳೂರು ಪೊಲೀಸ್ ಕಮಿಷನರ್ ಅವರೇ ಸ್ಪಷ್ಟಪಡಿಸಿದ್ದರೂ ಆ ಮಾಧ್ಯಮಗಳು ಅದೇ ಸುಳ್ಳು ಸುದ್ದಿಯನ್ನು ಬಿತ್ತರಿಸುವುದನ್ನು ಮುಂದುವರೆಸಿದ್ದವು.

ದಿ ಹಿಂದೂ, ಟೈಮ್ಸ್ ಆಫ್ ಇಂಡಿಯಾ, ಡೆಕ್ಕನ್ ಹೆರಾಲ್ಡ್ ತರಹದ ಇಂಗ್ಲಿಷ ದಿನಪತ್ರಿಕೆಗಳ ವರದಿಗಾರರು ಮಾತ್ರ ಮಾರನೇ ದಿನ ವಸ್ತುನಿಷ್ಠ ವರದಿ ಪ್ರಕಟಿಸಿ ವಕೀಲರ ಮೇಲೆ ನಡೆದ ಹಲ್ಲೆಯನ್ನು ಸಾರ್ವಜನಿಕರ ಗಮನಕ್ಕೆ ತಂದವು. ಅದಕ್ಕಾಗಿ ಆ ಪತ್ರಕರ್ತರು ಮಾಧ್ಯಮದ ಕೆಲವರ ಕೆಂಗಣ್ಣಿಗೂ ಗುರಿಯಾದರು. ಕೆಲವು ಕನ್ನಡ ದಿನಪತ್ರಿಕೆಗಳು ವಕೀಲರ ಮೇಲೆ ನಡೆದ ಹಲ್ಲೆಯ ಸುದ್ದಿಯನ್ನು ಸಂಪೂರ್ಣವಾಗಿ ಬ್ಲಾಕ್ ಮಾಡಿದವು. ಇದು ಈ ಮಾಧ್ಯಮಗಳು ಮಾಡಿರುವ ವೃತ್ತಿದ್ರೋಹ ಮತ್ತು ಅನ್ಯಾಯ. ಇದು ಎರಡನೆ ಕಥೆಯ ದುರಂತ ಗಾಥೆ!

ಈ ಎರಡು ಕಥೆಗಳಲ್ಲಿ ವಧೆಯಾದದ್ದು ಪ್ರಜಾತಂತ್ರ. ಗೂಂಡಾಗಿರಿ ಮಾಡಿದ ಕೆಲವು ವಕೀಲರು, ಸುದ್ದಿ ಮುಚ್ಚಿಹಾಕಿದ ಕೆಲವು ಮಾಧ್ಯಮದವರು, ಖಾಕಿ ಗೂಂಡಾಗಿರಿ ನಡೆಸಿದ ಪೊಲೀಸರು - ಎಲ್ಲರೂ ಸೇರಿ ಆ ಕರಾಳ ಶುಕ್ರವಾರದಂದು ತಮ್ಮ ವೃತ್ತಿಧರ್ಮ ಮತ್ತು ಪ್ರಜಾತಂತ್ರವನ್ನು ಹತ್ಯೆ ಮಾಡಿದರು.

ಆ ಕರಾಳ ದಿನ ಆ ಕ್ಷಣದ ಉನ್ಮಾದದಲ್ಲಿ ಕೆಲವ[illegible] ವಿವೇಚನೆಯನ್ನು ಬಿಟ್ಟು ನಡೆದುಕೊಂಡಿದ್ದರೂ ಆನಂತರ[illegible] ದಿನಗಳಲ್ಲಾದರೂ ಎಲ್ಲರೂ ವಿವೇಕ, ಆವೇಶ ಮು[illegible] ಸೇದಿನ ಮನೋಭಾವವನ್ನು ಮರೆತು ನಡೆದುಕೊಳ್ಳಬೇಕಿ[illegible] ಆದರೆ ಅಂತಹ ಬೆಳವಣಿಗೆ ಕಂಡುಬರುತ್ತಿಲ್ಲ.

ಪ್ರಾರಂಭದಲ್ಲಿ ಇಡೀ ವಕೀಲ ಸಮುದಾಯ ಇದನ್[illegible] ತನ್ನ ವೃತ್ತಿ ಪ್ರತಿಷ್ಠೆಯನ್ನಾಗಿ ಸ್ವೀಕರಿಸಿ ಅತ್ಯಂತ ತರ್ಕಹೀ[illegible] ಮತ್ತು ವೃತ್ತಿ ಸಂಹಿತೆಗೆ ವಿರೋಧವಾದ ನಿಲುವನ್ನು ತೆಗೆ[illegible] ಕೊಂಡಿತು. ಪ್ರತಿನಿತ್ಯ ಕಾನೂನುಬದ್ಧ ಆಡಳಿತದ ಬ[illegible] ವಾದಿಸುವ ವಕೀಲರು ತಮ್ಮ ನಡುವಿನಲ್ಲಿರುವ ಪುಂ[illegible] ವಕೀಲರ ಸಮರ್ಥನೆಗೆ ಇವತ್ತು ತರ್ಕಹೀನ ಮ[illegible] ಅಪಾಯಕಾರಿ ವಾದವನ್ನು ಮಂಡಿಸುತ್ತಿರುವುದು, ಪ್ರಗತಿ[illegible] ವಕೀಲರೂ ಆಕ್ರೋಶ ಮತ್ತು ಕುರುಡು ವೃತ್ತಿ ಬಾಂಧವ್ಯದಿ[illegible] ಪ್ರದರ್ಶಿಸುತ್ತಿರುವುದು ವಿಷಾದಕರ.

ವಾಸ್ತವವಾಗಿ, ಅವತ್ತು ಬೆಳಗ್ಗೆ ಸ್ವಲ್ಪ ಹೊತ್ತು ಮ[illegible] ಇಡೀ ಮಧ್ಯಾಹ್ನ ಪೊಲೀಸರು ಏಕಪಕ್ಷೀಯವಾಗಿ ಅಮಾಯ[illegible] ವಕೀಲರ ಮೇಲೆ ದಾಳಿ ನಡೆಸಿದ್ದು ನಿಜ. ಅದನ್ನು ಕೆಲ[illegible] ಮಾಧ್ಯಮಗಳು ಅವಗಣನೆ ಮಾಡಿದ್ದೂ ನಿಜ. ಅ[illegible] ರೀತಿ ಕೆಲವು ಗೂಂಡಾ ವಕೀಲರು - ಪ್ರಚೋದನೆ ಏ[illegible] ಇರಲಿ - ಸುಮಾರು ಗಂಟೆಗಳ ಕಾಲ ಕಲ್ಲು, ಹ[illegible] ಕುಂಡ, ಹೆಲ್ಮೆಟ್ ಇತ್ಯಾದಿಗಳನ್ನು ತೂರಿ ಹಲವರ[illegible] ಗಾಯಗೊಳಿಸಿದ್ದೂ ನಿಜ.

ಎಲ್ಲಕ್ಕಿಂತ ಹೆಚ್ಚಾಗಿ ಸರ್ಕಾರ ಪೊಲೀಸ್ [illegible] ಅಮಾಯಕ ವಕೀಲರನ್ನು ಹೊಂಚು ಹಾಕಿ ಗೂಂಡಾಗ[illegible] ಹೊಡೆದದ್ದನ್ನಾಗಲೀ ಈವರೆಗೆ ಖಂಡಿಸಿಲ್ಲ, ಹಾಗೆಯೆ[illegible] ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಮುಂದಾಗಿ[illegible] ಒಟ್ಟಾರೆ ಹಲ್ಲೆ ಪ್ರಕರಣದಲ್ಲಿ ಕಾನೂನು ಭದ್ರತೆ ಮರಳಿಸ[illegible] ತೆಗೆದುಕೊಂಡ ಕ್ರಮಗಳಿಗಿಂತ ನಂತರದಲ್ಲಿ ಪೊಲೀಸ[illegible] ಪಕ್ಕಾ ಗೂಂಡಾಗಳಂತೆ ಮಾಡಿದ ದೌರ್ಜನ್ಯಗಳಿಂದ ಆ[illegible] ಹಿಂಸಾಚಾರವೇ ಹೆಚ್ಚು. ಪೊಲೀಸರ ಗೂಂಡಾಗಿರಿಗೆ ಒ[illegible] ಅಥವಾ ಮೂಕ ಸಮರ್ಥನೆ ಮಾಡಿದ ವರಿಷ್ಠಾಧಿಕಾರಿಗ[illegible] ಮತ್ತು ಗೃಹಮಂತ್ರಿ ಅಶೋಕರು ನೇರ ಹೊಣೆಗಾರರಾಗಿದ್[illegible]

ಒಂದು ಘಟನೆ ಕ್ಷಣಿಕ ಉನ್ಮಾದದಿಂದ ನಡೆದರ[illegible] ನಂತರದಲ್ಲಿ ವಿವೇಚನೆ ಪ್ರಧಾನ ಪಾತ್ರ ವಹಿಸಬೇಕ[illegible] ಆಯಾ ಸಮುದಾಯದಲ್ಲಿರುವ ಹಿರಿಯರು ಮ[illegible] ವಿವೇಚನಾಶೀಲರು ತಮ್ಮ ಸಮುದಾಯದಲ್ಲಿರುವ ಗೂಂ[illegible] ಪ್ರವೃತ್ತಿಯನ್ನು ಖಂಡಿಸಿ ತಿದ್ದುಕೊಳ್ಳಲು ಮುಂದಾಗಬೇಕ[illegible] ಹಾಗೆಯೇ ತಮ್ಮ ಸಮುದಾಯದಲ್ಲಿನ ತಪ್ಪುಗಳನ್[illegible] ಎಲ್ಲರಿಗೂ ಸಮನಾದ ಕಾನೂನು ಕ್ರಮಗಳಿಗೆ ಒಪ್ಪಿಸ[illegible] ಮುಂದಾದಾಗ ಮಾತ್ರ ಇತರರ ತಪ್ಪುಗಳನ್ನು ಖಂಡಿಸ[illegible] ನೈತಿಕ ಅರ್ಹತೆ ಬರುತ್ತದೆ.

ಕಳೆದ ಒಂದೆರಡು ದಿನಗಳಲ್ಲಿ ಈ ಬಗೆಯ ವಿವೇಚ[illegible] ನಿಧಾನವಾಗಿ ಅಡಿಯಿಡುತ್ತಿರುವಂತೆ ಕಾಣುತ್ತಿದೆ. ಮಾಧ್ಯ[illegible] ದವರು ನಡೆಸಿದ ಪ್ರತಿಭಟನೆಯಲ್ಲಿ ತಮ್ಮ ಪ್ರತಿರೋ[illegible] ಇಡೀ ವಕೀಲ ಸಮುದಾಯದ ಬಗ್ಗೆ ಅಲ್ಲವೆಂದೂ, ಕೇವ[illegible] ಹಲ್ಲೆಕೋರ ವಕೀಲರ ಮೇಲೆ ಮಾತ್ರವೆಂದೂ ಹೇಳಿದ್ದಾ[illegible] ಹಾಗೆಯೇ ಮಾಧ್ಯಮದ ಒಂದು ತಂಡ ಮುಖ್ಯ ನ್ಯಾಯ[illegible] ಧೀಶರ ಜೊತೆ ಮಾತನಾಡಿ ಮಾಧ್ಯಮ ಮತ್ತು ವಕೀ[illegible] ಸಮುದಾಯದ ಮಧ್ಯೆ ಭಿನ್ನಾಭಿಪ್ರಾಯಗಳನ್ನು ಬಗೆಹ[illegible] ಬೇಕೆಂದು ಮನವಿ ಮಾಡಿದೆ.

ವಕೀಲರ ಬಾರ್ ಅಸೋಸಿಯೇಷನ್ ಸಹ ತಪ್ಪಿ[illegible] ವಕೀಲರ ಮೇಲೆ ಕ್ರಮ ತೆಗೆದುಕೊಳ್ಳುವುದಾಗಿ ಹೇ[illegible] ನೀಡಿರುವುದಲ್ಲದೆ ಇಡೀ ಮಾಧ್ಯಮದ ಮೇಲೆ ತಮ[illegible] ಆಕ್ರೋಶವಿಲ್ಲವೆಂದು ಇತ್ತೀಚೆಗೆ ಹೇಳಿದೆ. ಇವೆರಡೂ ಸ[illegible] ಇದ್ದಿದ್ದರಲ್ಲಿ ಉತ್ತಮ ಬೆಳವಣಿಗೆಯಾಗಿದೆ.

ಇಂತಹ ಪ್ರಯತ್ನಗಳನ್ನು ಬಲಿಷ್ಠಗೊಳಿಸುವ ಜವಾಬ[illegible] ಎಲ್ಲಾ ಪ್ರಜ್ಞಾವಂತರ ಮೇಲಿದೆ. ಮಾಧ್ಯಮ ಸಮುದಾ[illegible] ಮತ್ತು ವಕೀಲರ ಸಮುದಾಯಗಳಲ್ಲಿರುವ ಸಂವೇದ[illegible] ಶೀಲರು ಆತ್ಮವಿಮರ್ಶೆಗೆ ಮುಂದಾದರೆ ಈ ಬಿಕ್ಕ[illegible] ಬಗೆಹರಿಯುವುದು ಅಷ್ಟು ಕಷ್ಟವಲ್ಲ.

ಇದೆಲ್ಲದರಾಚೆಗೆ ಈ ಪ್ರಕರಣ ಕೆಲವು ಮೂಲಭೂ[illegible] ಪ್ರಶ್ನೆಗಳನ್ನು ಮುಂದೆ ತಂದಿದೆ. ಪತ್ರಕರ್ತ, ವಕೀಲ ಮ[illegible] ಪೊಲೀಸ್ ಇವೆಲ್ಲವೂ ಒಂದು ಪ್ರಜಾತಾಂತ್ರಿಕ ವ್ಯವಸ್ಥೆ[illegible] ಹುಟ್ಟುಹಾಕುವ ನಾಗರಿಕ ಶಕ್ತಿಗಳು. ಅವರು ಮಾಡುವು[illegible] ಕೇವಲ ವೃತ್ತಿಯೂ ಅಲ್ಲ, ಹಾಗೆಯೇ ಅವರು ಸಾಮಾ[illegible] ನಾಗರಿಕರೂ ಅಲ್ಲ, ಅವರ ಒಳಗಡೆ ಒಬ್ಬ ಪ್ರಜಾತಾಂ[illegible] ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ಮನುಷ್ಯ ರೂ[illegible] ಗೊಂಡಿರುತ್ತಾನೆಂದು ಬಯಸಲಾಗುತ್ತದೆ. ಪ್ರಜಾತಂತ್ರ ಒಂ[illegible] ಬದುಕಿನ ಮೌಲ್ಯವಾಗುವುದು ಹಾಗೆ. ಪ್ರಜಾತಂತ್ರದ ಮೂ[illegible] ನಿಯಮ, ಕಾನೂನಿನ ಆಡಳಿತ ಮತ್ತು ಕಾನೂನಿನ ಮು[illegible] ಎಲ್ಲರೂ ಸಮ ಎಂಬ ಮೌಲ್ಯ.

ಭಾರತದಂಥ ಸಮಾಜದಲ್ಲಿ ಈ ವೃತ್ತಿಗಳು ತಮ್ಮೊ[illegible] ಒಂದು ಅಧಿಕಾರವನ್ನು ಹೊಂದಿರುತ್ತವೆ. ಆ ಅಧಿಕಾರವ[illegible] ಹೇಗೆ ಚಲಾಯಿಸುತ್ತೇವೆ ಮತ್ತು ಅದನ್ನು ಇತರರಿಗಿ[illegible] ಹೆಚ್ಚಿನ ಸೌಲಭ್ಯ ಅಥವಾ ರಿಯಾಯತಿಯನ್ನು ಪಡೆ[illegible] ಕೊಳ್ಳುವುದಕ್ಕೆ ಹೇಗೆ ಬಳಸಿಕೊಳ್ಳುವುದಿಲ್ಲ ಎಂಬು[illegible] ಒಬ್ಬ ವ್ಯಕ್ತಿ ಮತ್ತು ಒಂದು ಸಮಾಜ ಎಷ್ಟು ಪ್ರಜಾತಾಂ[illegible] ಕರಣಗೊಂಡಿದೆ ಎಂಬುದಕ್ಕೆ ಮಾನದಂಡ. ಪ್ರಸ್ತುತ ಪ್ರಕರ[illegible] ಅಂಥಾ ಜನತಾಂತ್ರಿಕ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳು[illegible] ನಾವು ಘೋರವಾಗಿ ವಿಫಲವಾಗಿದ್ದೇವೆ ಎಂಬುದ[illegible] ಎತ್ತಿತೋರಿಸುತ್ತಿದೆ.



ಲಂಕೇಶ್ 77 ವಿಶೇಷಾಂಕ

ಯೋಧ ಹೇಳಿದ ಕಥೆ

...ವನು ಒಂದು ಪುರಾತನ ಮರದಂತೆ ಅಲ್ಲಿ ಕುಳಿತಿದ್ದ. ...ಅದುರುವ ಎಲೆಗಳಂತೆ ಅವನ ತುಟಿ, ಕಣ್ಣು ...ಪು, ಹಣೆಯ ಮೇಲೆ ಬಿದ್ದ ಒಣಗಿದ ಕೂದಲರಾಶಿ ...ಯುತ್ತಿದ್ದವು. ಅವನ ನೆರಳಿನ ಸುತ್ತಲೂ ಅಷ್ಟೂ ಮಕ್ಕಳು ...ದ್ದರು. ಅವನು ಕತೆ ಹೇಳುತ್ತಿದ್ದ. ತಾನು ಎದುರಿಸಿದ ...ಯ ಯುದ್ಧದ ಕತೆ. ಮಕ್ಕಳೆಲ್ಲ ಕಣ್ಣು ಕಿವಿ ಬಿಟ್ಟು ... ಮಾತುಗಳನ್ನು ಆಲಿಸುತ್ತಿದ್ದವು. ಆದಾಗಲೇ ಅವರೆಲ್ಲ ... ಇರವನ್ನು ಮರೆತು ಕೆಂಡ ಸುರಿಯುವ ಯುದ್ಧ ...ಮಿಯನ್ನು ಸೇರಿದ್ದರು.

...ಅದು ನಾನು ಎದುರಿಸಿದ ಕೊನೆಯ ಯುದ್ಧ... ... ನಾನು ಆವರೆಗೆ ಕಂಡರಿಯದ ಶ್ರೇಷ್ಠ ಯುದ್ಧ. ಆ ...ದ್ಧಕ್ಕಾಗಿಯೇ ನನಗೀ ಪದಕ ದೊರಕಿತು..."

ಮಕ್ಕಳ ಕಣ್ಣೆಲ್ಲ ಅವನ ಎದೆಯ ಮೇಲೆ ನೇತಾಡುತ್ತಿದ್ದ ...ಗಳತ್ತ ಹರಿಯಿತು. "ಸರಿ, ಮುಂದೆ ಹೇಳು...." ...ಳು ಅವಸರಿಸಿದರು.

"ಮೊದಲ ದಿನವೇ ನಮ್ಮ ಪಾಲಿಗೆ ವಿಜಯದ ...ವಾಗಿತ್ತು. ಶತ್ರುಗಳನ್ನು ನಾವೆಲ್ಲ ಸೇರಿ ನಡುಗಿಸಿದೆವು. ...ೀ ದಿನದಲ್ಲಿ 200 ಸೈನಿಕರನ್ನು ಕೊಂದು ಮುಂದು ...ದವು..."

"ಇನ್ನೂರು ಸೈನಿಕರನ್ನು ...ದಿರಾ...?" ಮಕ್ಕಳು ...ಎಗಲಿಸಿದರು. "ಅವರೆಲ್ಲ ... ಸತ್ತರಾ... ಒಂದೇ ...ಲ್ಲಿ ಯುದ್ಧ ಮುಗಿಯಿತೆ?"

...ಯೋಧ ನಕ್ಕ "ಹತ್ತು ಸಾವಿ..., ಅಧಿಕ ಶತ್ರು ಸೈನಿಕರು ಆ ...ರುವಾಗ ಬರೀ ಇನ್ನೂರು ಸೈನಿಕರನ್ನು ಕೊಂದರೆ ...ದ್ಧ ಮುಗಿಯುತ್ತದೆಯೆ? ಆದರೂ ಅವರೆಲ್ಲ ಹೆದರಿಬಿಟ್ಟರು. ಅಂದಹಾಗೆ, ಆ 200 ಸೈನಿಕರೂ ಸ್ಥಳದಲ್ಲೇ ಸತ್ತಿದ್ದರು..."

"ಮುಂದೆ..."

"ಮರುದಿನ ನನ್ನ ಪಾಲಿಗೆ ಶೌರ್ಯದ ದಿನ. ಯಾಕೆಂದರೆ ಯುದ್ಧದಲ್ಲಿ ನಾನು ವೀರೋಚಿತವಾಗಿ ಹೋರಾಡಿದ್ದೆ. ನನ್ನ ಹೋರಾಟಕ್ಕೆ ನನ್ನ ಕಡೆಯ ಸೈನಿಕರೇ ದಂಗು ಬಡಿದುಹೋಗಿದ್ದರು. ಅವತ್ತು ನಾನೊಬ್ಬನೇ 50 ಸೈನಿಕರನ್ನು ಕೊಂದಿದ್ದೆ...."

"ಒಬ್ಬರೇ...." ಮಕ್ಕಳೆಲ್ಲ ಮತ್ತೊಮ್ಮೆ ಅವನ ಎದೆಯಲ್ಲಿ ನೇತಾಡುತ್ತಿದ್ದ ಪದಕಗಳತ್ತ ನೋಡಿದರು.

"ಹೌದು ಒಬ್ಬನೆ. ನನ್ನ ಪಾಲಿಗೆ ಎರಡನೆಯ ದಿನ ಒಂದು ಸಣ್ಣ ಆರಂಭವಾಗಿತ್ತು.... ಮೂರನೆಯ ದಿನ ನನಗೆ ಹೊಸ ಹುರುಪು ಬಂದಿತ್ತು. ನಾನು ಯಾವ ಭಯವೂ ಇಲ್ಲದೆ ಮುನ್ನುಗ್ಗುತ್ತಲೇ ಇದ್ದೆ... ಅದು ನನ್ನ ಪಾಲಿಗೆ ಇನ್ನೊಂದು ಹೆಗ್ಗಳಿಕೆಯ ದಿನವಾಗಿತ್ತು... ಅಂದು ನಾನು ಒಟ್ಟು ನೂರು ಶತ್ರುಗಳನ್ನು ಕೊಂದು ಹಾಕಿದ್ದೆ.... ಒಬ್ಬ ಶತ್ರುವನ್ನಂತೂ ಚೂರಿಯಿಂದಲೇ ಇರಿದು ಹಾಕಿದೆ..."



ಮಕ್ಕಳ ಉಸಿರು ಅಡಗಿತ್ತು ಅವರು ನಿಧಾನಕ್ಕೆ ಭೀತರಾಗುತ್ತಿದ್ದರು. ಅವನೋ ಯಾವುದೋ ಉನ್ಮಾದಕ್ಕೊಳಗಾದವನಂತೆ ಮುಂದುವರಿಸಿದ "ಅದು ನಾಲ್ಕನೆಯ ದಿನ. ನನ್ನ ಸೈನಿಕರು ನನ್ನನ್ನು ಎತ್ತಿ ಮೆರೆದಾಡಿದ ದಿನ. ನಾನಂದು ನೂರಕ್ಕೂ ಅಧಿಕ ಅಂದರೆ ಲೆಕ್ಕವಿರದಷ್ಟು ಜನರನ್ನು ಚೆಂಡಾಡಿದ್ದೆ. ಮುಖ್ಯವಾಗಿ ಶತ್ರುಸೇನೆಯ ಇಬ್ಬರು ಹಿರಿಯ ಅಧಿಕಾರಿಗಳನ್ನೇ ಕೊಂದು ಹಾಕಿದ್ದೆ. ಬಹುತೇಕ ಭೂಮಿ ನಮ್ಮ ವಶವಾಗಿತ್ತು...."

ಇದ್ದಕ್ಕಿದ್ದಂತೆಯೇ ಯೋಧ ಮೌನವಾದ. ಆ ಮೌನವೂ ಏನೋ ಹೇಳುತ್ತಿದೆಯೆಂದು ಭಾವಿಸಿ ಮಕ್ಕಳು ಸುಮ್ಮಗೆ ಆಲಿಸುತ್ತಿದ್ದರು.

ಅಷ್ಟರಲ್ಲಿ ಒಬ್ಬ ಹುಡುಗ ಕೇಳಿದ "ಐದನೆಯ ದಿನ ಏನಾಯ್ತು?"

"ಹೌದು, ಏನಾಯ್ತು...?" ಮಕ್ಕಳೆಲ್ಲ ಒಟ್ಟಾಗಿ ಮತ್ತೆ ಕೇಳಿದರು.

ಯೋಧನ ಗಂಟಲು ಕಟ್ಟಿತ್ತು "ಅದು ನನ್ನ ಬದುಕಿನ ಸರ್ವ ಶ್ರೇಷ್ಠ ದಿನ... ನಾನಿಂದಿಗೂ ನನ್ನ ಎದೆಯಲ್ಲಿ ಹೊತ್ತುಕೊಂಡು ತಿರುಗುತ್ತಿರುವ ದಿನ...."

"ಹೌದೆ? ಎಷ್ಟು ಶತ್ರುಗಳನ್ನು ಕೊಂದಿರಿ?" ಮಕ್ಕಳು ಹುಚ್ಚೆದ್ದು ಒಟ್ಟಾಗಿ ಕೇಳಿದರು.

ಯೋಧ ಮೌನವಾಗಿದ್ದ.

ಮಕ್ಕಳೇ ಪ್ರಶ್ನಿಸಿದರು "500 ಶತ್ರುಗಳನ್ನು....?"

ಯೋಧ ಉತ್ತರಿಸಲಿಲ್ಲ.

"1000?" ಮಕ್ಕಳೇ ಕೇಳಿದರು.

ಯೋಧ ಯಾವುದೋ ಗುಂಗಿನಲ್ಲಿ ಮೌನವಾಗಿಯೇ ಇದ್ದ.

"ಒಂದು ಲಕ್ಷ?" ಮಕ್ಕಳು ಮತ್ತೆ ಉತ್ಸಾಹದಿಂದ ಅಂಕಿಯನ್ನು ಮುಂದಿಟ್ಟರು.

ಊಹುಂ... ಯೋಧ ಮಾತನಾಡುತ್ತಿಲ್ಲ.

"ಒಂದು ಕೋಟಿ...?" ಮಕ್ಕಳು ಮತ್ತೇ ಜೋರಾಗಿ ಕೇಳಿದರು.

ಯೋಧ ಈಗ ಬಾಯಿ ತೆರೆದ "ಇಲ್ಲ... ಅವತ್ತು ಒಬ್ಬ ಸೈನಿಕನನ್ನು ನಾವೆಲ್ಲರೂ ಸೇರಿ ಕೊಂದುಹಾಕಿದೆವು."

"ಬರೇ ಒಬ್ಬನನ್ನೇ..." ಮಕ್ಕಳು ನಿರಾಶೆಯಿಂದ ಕೇಳಿದರು. ಅವರ ಉತ್ಸಾಹ ಒಮ್ಮೆಲೆ ಕುಗ್ಗಿತ್ತು.

"ಹೌದು, ಒಬ್ಬನನ್ನು" ಯೋಧ ಮತ್ತೊಮ್ಮೆ ಉಚ್ಚರಿಸಿದ.

"ಆ ಸೈನಿಕ ಅಷ್ಟು ಬಲಿಷ್ಠನಾಗಿದ್ದನೆ?" ಮಕ್ಕಳು ಆಚ್ಚರಿಯಿಂದ ಕೇಳಿದರು.

"ಹೂಂ... ಈ ಜಗತ್ತಿನ ಯಾವ ಯೋಧರೂ ಎದುರಿಸಲಾಗದಷ್ಟು ಅವನು ಬಲಿಷ್ಠ ನಾಗಿದ್ದ...." ಒಂದುಕ್ಷಣ ಮೌನವಾಗಿದ್ದ ಯೋಧ ಮುಂದುವರಿಸಿದ

ಲಂಕೇಶ್ 77



• ಬಿ.ಎಂ.ಬಷೀರ್

"ಹೌದು, ಅದು ಐದನೆಯ ದಿನ. ನಾನು ಗುಂಪಿನಿಂದ ಬೇರೆಯಾಗಿ ಶತ್ರುಗಳೆಡೆಗೆ ಉನ್ಮಾದ ದಿಂದ ಧಾವಿಸುತ್ತಲೇ ಇದ್ದೆ. ಒಬ್ಬೊಬ್ಬರ ಹೆಣಗಳೂ ಉರುಳುತ್ತಿದ್ದವು. ಹಾಹಾಕಾರ, ಚೀತ್ಕಾರ... ನಮ್ಮವರದೋ, ಶತ್ರುಗಳದೋ ಎಂದು ಗುರುತಿಸುವುದು ಕಷ್ಟವಾಗುತ್ತಿತ್ತು. ಯಾಕೆಂದರೆ ಸಾವಿನ ಚೀತ್ಕಾರ ಎಲ್ಲವೂ ಒಂದೇ ಥರ ಕೇಳಿಸುತ್ತದೆ. ಅದಕ್ಕೆ ದೇಶ, ಭಾಷೆ, ಜಾತಿ, ಧರ್ಮಗಳ ಹಂಗಿಲ್ಲ.. ಅವೆಲ್ಲದಕ್ಕೂ ಕಿವುಡನಾಗಿ ನಾನು ಮುಂದುವರಿ ಯುತ್ತಿದ್ದೆ. ಇದ್ದಕ್ಕಿದ್ದಂತೆ ಅದೆಲ್ಲಿಂದ ಧಾವಿಸಿ ಬಂತೋ... ಒಂದು ಗುಂಡು ನನ್ನ ಬಲ ಭಾಗದ ಎದೆಯನ್ನು ಸೀಳಿತು.... ಇನ್ನೊಂದು ನನ್ನ ತೊಡೆ ಯನ್ನು ಮುರಿದು ಹಾಕಿತು. ನಾನು ಯುದ್ಧಭೂಮಿಯ ಪಕ್ಕದಲ್ಲೇ ಇದ್ದ ಕಂದರಕ್ಕೆ ಉರುಳಿ ಬಿದ್ದಿದ್ದೆ...."

ಮಕ್ಕಳೆಲ್ಲ "ಓಹ್...." ಎಂದು ಬಾಯಿಗೆ ಕೈಯಿಟ್ಟು ಉದ್ಘೋಷಿಸಿದರು. ಯೋಧನೂ ಒಂದರೆ ಕ್ಷಣ ಮೌನವಾದ.

"ಸುಮಾರು ನಾಲ್ಕು ಗಂಟೆ.... ನಾಲ್ಕು ಗಂಟೆ ನಾನು ಸಾವು ಬದುಕಿನ ನಡುವೆ ಒದ್ದಾಡುತ್ತಲೇ ಇದ್ದೆ. ನನ್ನ ನಾಲಗೆ ಸೂರ್ಯನ ಝಳಕ್ಕೆ ಕುದಿಯುತ್ತಿರುವ ಮರುಭೂಮಿಯಂತೆ ಸುಡುತ್ತಿತ್ತು. ನನಗೆ ಬೇಕಾಗಿದ್ದದ್ದು ಒಂದು ಗುಟುಕು, ಒಂದೇ ಒಂದು ಗುಟುಕು ನೀರು.... ನಾನು 'ನೀರು...ನೀರು' ಎಂದು ಆರ್ತನಾದಗೈಯುತ್ತಿದ್ದೆ. ಆದರೆ ನನ್ನ ಧ್ವನಿ ನನಗೇ ಕೇಳುತ್ತಿರಲಿಲ್ಲ... ನಿಧಾನಕ್ಕೆ ಆಕಾಶದ ಬಣ್ಣ ಬದಲಾಗುತ್ತಿತ್ತು. ನನ್ನ ಸುತ್ತಮುತ್ತಲಿದ್ದ ಗಿಡಮರಗಳ ಬಣ್ಣವೂ ಕೆಂಪಾಗುತ್ತಿತ್ತು. ನಾನು ಸಾವಿನ ಅಂಚಿಗೆ ಜಾರುತ್ತಿದ್ದೆ.... ಅಷ್ಟರಲ್ಲಿ ದೂರದಿಂದ ಯಾರೋ ಬರುತ್ತಿದ್ದ ಹಾಗೆ ಕಂಡಿತು.... ಯಾವನೋ ದೇವದೂತನಂತೆ ಮೊದಲು ಕಂಡರೂ ಅವನು ಹತ್ತಿರಹತ್ತಿರ ವಾದ ಹಾಗೆ ಮನುಷ್ಯ ರೂಪವನ್ನು ಪಡೆಯುತ್ತಿದ್ದ. ಇನ್ನೂ ಹತ್ತಿರವಾದಂತೆ ಆ ಸ್ಥಿತಿಯಲ್ಲೂ ನಾನು ಬೆಚ್ಚಿ ಬಿದ್ದೆ. ಶತ್ರು ಸೈನಿಕನನ್ನು ಯಾವ ಸ್ಥಿತಿಯಲ್ಲೂ, ಎಷ್ಟು ದೂರದಲ್ಲೂ ಗುರುತು ಹಿಡಿಯುವವನು ನಾನು. ಬರುತ್ತಿದ್ದವನು ಶತ್ರು ಸೈನಿಕನಾಗಿದ್ದ.... ಸರಿ... ಹೇಗೂ ಸಾಯಲಿದ್ದ ನಾನು ಅವನ ಕೈಯಲ್ಲಿ ಸಾಯುವುದಕ್ಕೆ ಅಣಿಯಾದೆ...."

"ಓಹ್...." ಮಕ್ಕಳೆಲ್ಲ ಮತ್ತೆ ಚೀತ್ಕರಿಸಿದರು.

"ಆ ಶತ್ರು ಸೈನಿಕ ಇನ್ನೂ ಹತ್ತಿರವಾದಂತೆ ಅವನ ಹೆಗಲಲ್ಲಿರುವ ಕೋವಿ ನನಗೆ ಸ್ಪಷ್ಟವಾಗಿ ಕಾಣತೊಡಗಿತು. ಅವನು ನನ್ನನ್ನು ನೋಡಿದ್ದಾನೆ.... ನನ್ನೆಡೆಗೆ ಧಾವಿಸಿ ಬರುತ್ತಿದ್ದ... ಅಂದಹಾಗೆ ಅವನ ಕೈಯಲ್ಲಿ ಇನ್ನೇನೋ ಇತ್ತು. ಇನ್ನಷ್ಟು ಹತ್ತಿರವಾದಾಗ ನನಗೆ ಗೊತ್ತಾಯಿತು. ಅವನ ಕೈಯಲ್ಲಿ ನೀರಿನ ಬ್ಯಾಗೊಂದಿತ್ತು.... ಆದರೆ ನನಗೆ ಅದರ ಮೇಲೆ ಯಾವ ನಿರೀಕ್ಷೆಯೂ ಇರಲಿಲ್ಲ. ನನ್ನ ಗಮನವೆಲ್ಲ ಅವನ ಹೆಗಲ ಮೇಲಿದ್ದ ಕೋವಿಯ ಮೇಲಿತ್ತು."

"ಆದರೆ ಯುದ್ಧ ಭೂಮಿಯಲ್ಲಿ ನಡೆಯಲೇಬಾರದಂತಹ ಒಂದು ವಿಚಿತ್ರ ಅಲ್ಲಿ ನಡೆಯಿತು. ಅವನು ನೇರ ನನ್ನ ಬಳಿ ಸಾರಿದವನೇ ಬಾಗಿದ. ನನ್ನ ಬಾಯಿಂದ ಅಯಾಚಿತವಾಗಿ 'ನೀರು' ಎಂಬ ಶಬ್ದ ಹೊರಬಿತ್ತು. ಅವನು ನನ್ನ ತಲೆಯನ್ನು ಎತ್ತಿ ಅವನ ತೊಡೆಯ ಮೇಲೆ ಇಟ್ಟುಕೊಂಡ. ಬಳಿಕ ಒಂದು ಮಗುವಿನ ಬಾಯಿಗೆ ಹಾಲೂಡಿಸುವಂತೆ ತನ್ನಲ್ಲಿದ್ದ ನೀರನ್ನು ಹನಿ ಹನಿಯಾಗಿ ನನ್ನ ಬಾಯಿಗೆ ಹನಿಸತೊಡಗಿದ. ಅವನಲ್ಲಿದ್ದ ಆ ನೀರು ನಿಜಕ್ಕೂ ನೀರಾಗಿರಲಿಲ್ಲ. ಅದು ಅಮೃತವಾಗಿತ್ತು. ಒಂದೊಂದು ಹನಿ ನನ್ನ ನನ್ನೊಳಗನ್ನು ಸೇರುತ್ತಿದ್ದ ಹಾಗೆಯೇ ನಾನು ಚೇತರಿಸಿಕೊಳ್ಳುತ್ತಿದ್ದೆ... ಇನ್ನು ಸಾಕು ಎನ್ನುವವರೆಗೆ ನನ್ನ ಬಾಯಿಗೆ ನೀರು ಸುರಿದ. ಬಳಿಕ ಗಾಯಗಳಿಗೆ ತನ್ನಲ್ಲಿದ್ದ ಬಟ್ಟೆಯಿಂದ ರಕ್ತ ಸೋರದಂತೆ ಮಾಡಿದ. ಎತ್ತಿ ಪಕ್ಕದ ಮರದ ಕೆಳಗೆ ನನ್ನನ್ನು ಒರಗಿಸಿದ...."

ಮಕ್ಕಳು ದಿಗ್ಭ್ರಮೆಗೊಂಡಿದ್ದರು. "ಆಮೇಲೆ ಏನಾಯ್ತು... ಆಮೇಲೆ.... ಅವನೇನಾದ... ಎಲ್ಲಿ ಹೋದ.... ಅವನನ್ನು ನಮ್ಮ ದೇಶಕ್ಕೆ ಕರೆದುಕೊಂಡು ಬಂದಿರಾ?" ಹುಡುಗನೊಬ್ಬ ಆತುರದಿಂದ ಕೇಳಿದ.

ಯೋಧನ ಗಂಟಲು ಗೊಗ್ಗರು ಸ್ವರ ಹೊರಡಿಸುತ್ತಿತ್ತು. ಕೆಮ್ಮಿ ಗಂಟಲನ್ನು ಸರಿಪಡಿಸಿಕೊಂಡ. ಮತ್ತು ಹೇಳಿದ "ಅಷ್ಟರಲ್ಲಿ ನಮ್ಮವರ ತಂಡ ನನ್ನೆಡೆಗೆ ಧಾವಿಸಿ ಬಂತು. ಆ ಸೈನಿಕನನ್ನು ನಮ್ಮವರು ಕೊಂದು ಹಾಕಿದರು...."

"ಯಾಕೆ? ಯಾಕೆ ಕೊಂದರು. ಅವನೇನು ತಪ್ಪು ಮಾಡಿದ್ದ?" ಹುಡುಗನೊಬ್ಬ ಅಳುತ್ತಾ ಕೇಳಿದ.

ಒಂದು ಕ್ಷಣ ಮೌನವಾಗಿದ್ದ ಯೋಧ ಹೇಳಿದ "ಯಾಕೆಂದರೆ, ಅವನು ನಮ್ಮ ದೇಶದ ಶತ್ರುವಾಗಿದ್ದ." ●


ಮಲದ ಮಳೆ ಸುರಿಯಲಿ

...ಲ ಹೊರುವ
...ಪದ್ಯ ಬರೆಯಬೇಕೆಂದಾಗ
...ತ ಸೋಂಕದಂತೆ
...ವಾಗುವ ಪದ್ಯವ ಕವಿ ಸದಿಲಗೊಳಿಸಬೇಕು.
...ಧ ಬೀರಲು
...ಗಳ ಮೈಗೂ ಕೆಂಕುಳಿಕ್ಕೂ
...ಮ್ ಸಿಂಪಡಿಸಬೇಕು!
**

...ಹೊರುವ
..., ಕಣ್ಣಿಗೆ ಕಟ್ಟಬಾರದು
...ಸಕ ಪದ್ಯದಿ ಮುಳುಗಿ
...ಬೆ ಒಂದರೆ.

ಕವಿ ಮಲ ಹೊರಿಸುತ್ತಿದ್ದಾನೆಂದು
ಕೇಸು ಜಡಿದು, ಬೈಯುತ್ತಾರೆ
ಕೆಟ್ಟಕವಿಯೆಂದು.
***
ಮಲ ಹೊತ್ತವ ಕನಸಿದಂತೆ
ಕವಿ ಕಲ್ಪಿಸಬಾರದು.
ಕಲ್ಪಿಸಿದರೂ..
ಟ್ರಿಮ್ಮಾಗಿಸಿ, ಲ್ಯಾಪ್ ಟಾಪ್ ಹಿಡಿಸಿ
ಥೇಟ್ ಇಂಗ್ಲಿಷ್‌ನಂತೆ
ಆತ ಕಾಣಿಸಬಾರದು!
ಹೆಚ್ಚೆಂದರೆ,
ಮುಟಗೋಸೀಲಿ ಒಣ ಮೈಲಿ ಒರಟು
ಉಲಿಯಬೇಕು.

ಆವ ಹೆಜ್ಜೆ ಇಟ್ಟಲ್ಲಿ
ನೆಲ ಮಲಿನವಾಗದಂತೆ
ಬರಿದ ಮೈ ಸೋರುವ ಮಲವ
ಹೀರುವಂತಿರಬೇಕು.
***
ಕವಿ
ಅನುಭವಿಸಿ ಬರೆದರೂ ಚಿಂತೆಯಿಲ್ಲ.
ಆತನೇ ಮಲದ ಗುಂಡಿಗೆ ಬಿದ್ದು
ಪದ್ಯ ಬರೆಯಬಾರದು
ಹಾಗಾಗಿದ್ದರೂ...
ಅದರ ಕುರುಹು ಮುಚ್ಚಡಬೇಕು.
ಇಲ್ಲವೆಂದರೆ
ಮಲ ಹೊತ್ತಕವಿಯೆಂದು
ಯಾರೂ ಪದ್ಯ ಓದುವುದಿಲ್ಲ
ಓದಿದ್ದ ಯಾರೂ ಹೇಳುವುದಿಲ್ಲ.
***
ಹೊತ್ತವರು ಉಸಿರುಗಟ್ಟಿ ನಡೆಯಬೇಕು
ಅವರು ಜಾರದಂತೆ ಕವಿ ಎಚ್ಚರವಿರಬೇಕು
ನಾಗರಿಕರು ಡೀಸೆಂಟಾಗಿ ನೋಡಬೇಕು
ಹೆಚ್ಚೆಂದರೆ,
ಪ್ರಳಯಕಾಲನ ಕನಸಿಗೆ ಬೆಂಕಿ ಹೊತ್ತಿಸಿ
ಮಲದ ಮಳೆ ಸುರಿಯುವಂತೆ
ವರುಣನಲ್ಲಿ ಮೊರೆಯಿಡಬೇಕು.



ಲಂಕೇಶ್ 77




• ಅರುಣ್ ಜೋಳದಕೂಡ್ಲಿಗಿ

ಅಪ್ರತಿಮ ಕಥೆಗಾರ ಮೊಪಾಸಾ

ಲಂಕೇಶ್ 77

• ಡಾ. ಬಸು ಬೇವಿನಗಿಡದ




ಮೊಪಾಸಾನನ್ನು ಪ್ರಪಂಚದ ನಿದ್ದೆಗೆಡಿಸಿದ ಕಥೆಗಾರನೆಂದು ಕರೆದರೆ ಅದಕ್ಕೆ ಅಚ್ಚರಿಪಡಬೇಕಾಗಿಲ್ಲ. ಗಾಯ್ ದ ಮೊಪಾಸಾ ಎಂಬ ಹೆಸರನ್ನು ಕೇಳಿದ ತಕ್ಷಣ ಜಗತ್ತಿನ ಕಥಾ ಸಾಹಿತ್ಯದ ಓದುಗರೆಲ್ಲರಿಗೆ ಒಂದುಕ್ಷಣ ರೋಮಾಂಚನವಾಗುವುದರಲ್ಲಿ ಸಂದೇಹವಿಲ್ಲ. ಸಣ್ಣ ಕಥೆಯೆಂದು ನಾವೇನು ಈಗ ಕರೆಯುತ್ತೇವೆಯೊ ಆ ಒಂದು ಪ್ರಕಾರವನ್ನು ಪ್ರಸಿದ್ಧಿಗೊಳಿಸಿದ, ಆ ರಚನೆಯನ್ನು ಒಲಿಸಿಕೊಂಡ, ಅದನ್ನು ನವಿರಾಗಿಸಿದ, ಹರಿತವಾಗಿಸಿದ ಮತ್ತು ಅದನ್ನು ತುಂಬ ವಾಸ್ತವವಾಗಿರಿಸಿದ ಶ್ರೇಯಸ್ಸು ಕೆಲವೇ ಕೆಲವು ಶ್ರೇಷ್ಠ ಲೇಖಕರಿಗೆ ಸಂದಂತೆ ಗಾಯ್ ದ ಮೊಪಾಸಾನಿಗೂ ಸಲ್ಲುತ್ತದೆ. ಹೀಗಾಗಿ ಮೊಪಾಸಾನನ್ನು ಆಧುನಿಕ ಸಣ್ಣ ಕಥೆಗಳ ಜನಕರಲ್ಲಿ ಒಬ್ಬನೆಂದು ಗುರುತಿಸಲಾಗುತ್ತದೆ. ಫ್ರೆಂಚ್ ಸಾಹಿತ್ಯದ ಸಣ್ಣ ಕಥೆಗಳ ಅನಭಿಷಕ್ತ ದೊರೆಯೆಂದೇ ಪ್ರಖ್ಯಾತನಾಗಿರುವ ಮೊಪಾಸಾ ಹತ್ತೊಂಭತ್ತನೆ ಶತಮಾನದಲ್ಲಿ ಫ್ರೆಂಚ್ ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಸಂಚಲನವನ್ನೇ ಉಂಟು ಮಾಡಿದ. ಅವನ ಪ್ರಭಾವ ಅವನ ದೇಶಕ್ಕಷ್ಟೆ ಸೀಮಿತವಾಗಲಿಲ್ಲ. ಕೂಡಲೆ ಅದು ಭಾಷೆ ಪ್ರದೇಶಗಳನ್ನು ಮೀರಿ ಎಲ್ಲ ಕಡೆಗೂ ಹಬ್ಬಿತು. ತನ್ನ ಕಾಲದ ದೊಡ್ಡ ಬರಹಗಾರನಾಗಿ ಮೆರೆಯುವುದರ ಜೊತೆಗೆ ಸಣ್ಣ ಕಥೆಯೆಂದರೆ ಕೀಳು ಎಂದು ಪರಿಗಣಿತವಾಗಿದ್ದ ಮನೋಭಾವವನ್ನು ತನ್ನ ಜೀವಿತ ಕಾಲದಲ್ಲಿಯೆ ಅವನು ಬದಲಿ ಮಾಡಿದ. ಫ್ರಾನ್ಸ್ ದೇಶದ ಸಣ್ಣ ಕಥೆಗಳ ರಾಜನೆಂದೆ ಇಂದಿಗೂ ಅವನನ್ನು ಕರೆಯಲಾಗುತ್ತದೆ. ಮುನ್ನೂರು ಕಥೆಗಳನ್ನು, ಆರು ಕಾದಂಬರಿಗಳನ್ನು, ಮೂರು ಪ್ರವಾಸಿಕಥನಗಳನ್ನು, ಎರಡು ನಾಟಕಗಳನ್ನು ಮತ್ತು ಒಂದು ಕವನ ಸಂಕಲನವನ್ನು ಕೇವಲ ಹದಿನೈದರಿಂದ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಬರೆದು ಮುಗಿಸಿದ ಮುಪಾಸಾ ಒಬ್ಬ ಅಸಾಧಾರಣ ಲೇಖಕ ಎಂಬುದನ್ನು ಯಾರಾದರೂ ಒಪ್ಪುತ್ತಾರೆ. ಇಷ್ಟೊಂದು ವಿಪುಲವಾಗಿ ಬರೆದ ಮೊಪಾಸಾ ಬದುಕಿದ್ದು ಕೇವಲ ನಲವತ್ತೆರಡು ವರ್ಷ ಮಾತ್ರ. ತನ್ನ ಅನಾರೋಗ್ಯದ ತೀವ್ರ ತೊಳಲಾಟಗಳ ಮಧ್ಯೆ ಬರೆಯಲು ನಾಳೆ ಸಿಗುತ್ತದೆಯೊ ಇಲ್ಲವೊ ಎಂಬಂತೆ ದಿಟ್ಟನಾಗಿ ಮತ್ತೆ ಅಷ್ಟೇ ಸಹಜವಾಗಿ ತನ್ನ ಕೃತಿಗಳನ್ನು ಬರೆದು ಮುಗಿಸಿದ ಮೊಪಾಸಾ ದೊಡ್ಡ ಸಾಹಸ ಪ್ರವೃತ್ತಿಯ ಮನುಷ್ಯನೂ ಆಗಿದ್ದ ಎಂಬುದು ಆಶ್ಚರ್ಯ ಹುಟ್ಟಿಸುತ್ತದೆ. ಮೊಪಾಸಾನ ಬದುಕು ಕುತೂಹಲ ಮತ್ತು ದುರಂತಗಳ ಹೆಣಿಕೆಯಾಗಿದೆ. ಸಮಸ್ಯೆ ಮತ್ತು ಸವಾಲುಗಳ ಮಧ್ಯೆ ಅವನು ಬೆಳೆದ. ಹರೆಯದವನಾಗಿದ್ದಾಗಿನಿಂದಲೆ ಅವನನ್ನು ಒಳಗೊಳಗೆ ತಿನ್ನುತ್ತಿದ್ದ ಕಾಯಿಲೆಯನ್ನು ಅವನು ಜಯಿಸಲು ನೋಡಿದ. ಆದರೆ ಕೊನೆಗೆ ಅದುವೆ ಅವನನ್ನು ತಿಂದು ತೇಗಿತು.

ಬಾಲ್ಯದ ಕಹಿ ನೆನಪುಗಳು


ಮೊಪಾಸಾ ಹುಟ್ಟಿದ್ದು ಫ್ರಾನ್ಸಿನ ಡೆಪ್ಪೆ ಎನ್ನುವ ಸ್ಥಳದ ಹತ್ತಿರವಿರುವ ಸಿಯಾನ್ ಕಡಲತಡಿಯಲ್ಲಿ, 1850ನೇ ಇಸ್ವಿ ಆಗಸ್ಟ್ 5 ರಂದು ಹುಟ್ಟಿದ ಅವನು ನದಿ, ಕಡಲು, ಗ್ರಾಮದ ಬದುಕು, ನಗರಜೀವನ ಮುಂತಾದವುಗಳನ್ನು ಸೂಕ್ಷ್ಮವಾಗಿ ತನ್ನೊಳಗೆ ತುಂಬಿಸಿಕೊಳ್ಳುತ್ತಲಿದ್ದ. ಅವನ ಪೂರ್ಣ ಹೆಸರು ಹೆನ್ನಿ ರೇನೆ ಅಲ್ಬರ್ಟ್ ಗಾಯ್ ದ ಮೊಪಾಸಾ ಎಂದು. ಫ್ರಾನ್ಸ್ ದೇಶದ ನಾರ್ಮಂಡಿಯ ರೈತಾಪಿ ಜನ ಜೀವನದ ಜೊತೆಯಲ್ಲಿ ಅವನು ತನ್ನ ಬಾಲ್ಯವನ್ನು ಕಳೆದ. ಫ್ರೆಂಚ್ ಉಚ್ಚಾರದಲ್ಲಿ ಗಾಯ್ ದ ಮಾಪ್ಸಾ ಎಂದು ಅವನನ್ನು ಕರೆಯಲಾಗುತ್ತಿದ್ದರೂ ಕನ್ನಡದಲ್ಲಿ ಅವನು ಮೊಪಾಸಾ ಎಂದೇ ಖ್ಯಾತನಾಗಿದ್ದಾನೆ. ಸ್ಥಿತಿವಂತ ತಂದೆ-ತಾಯಿಗಳ ಮೊದಲ ಮಗನಾಗಿ ಅವನು ಹುಟ್ಟಿದ. ಶ್ರೀಮಂತನಾಗಿದ್ದ ಅಪ್ಪನ ಹೆಸರು ಗುಸ್ತಾವ್ ದ ಮೊಪಾಸಾ ಮತ್ತು ತಾಯಿಯ ಹೆಸರು ಲಾರಾಲ ಪೊಯಿತಾವ್ ಎಂದಿತ್ತು. ಬಂಡವಾಳಶಾಹಿ ಶ್ರೀಮಂತ ಕುಟುಂಬದ ತಂದೆ-ತಾಯಿಗಳ ಆರೈಕೆಯಲ್ಲಿ ಮೊಪಾಸಾನ ಬಾಲ್ಯದ ದಿನಗಳು ಸುಂದರವಾಗಿಯೇ ಶುರುವಾಗಿದ್ದವು. ಆದರೆ ಗುಸ್ತಾವ್ ಮತ್ತು ಆತಾವ್‌ರ ನಡುವಿನ ಬಿರುಕೊಂದು ದೊಡ್ಡದಾಗಿ ಗಂಡ-ಹೆಂಡತಿಯ ನಡುವೆ ಜಗಳಗಳು ಆರಂಭವಾದವು. ಮೊಪಾಸಾ ಹನ್ನೊಂದು ವರ್ಷದವನಾಗಿದ್ದಾಗ ಮತ್ತು ಅವನ ತಮ್ಮ ಹರ್ವ್ ಐದು ವರ್ಷದವನಿದ್ದಾಗ ಗಂಡ-ಹೆಂಡತಿಯರು ಬೇರೆಬೇರೆಯಾದರು. ಗಂಡನಿಂದ ವಿಚ್ಛೇದನ ತೆಗೆದುಕೊಳ್ಳುವುದು ಆಗಿನ ಕಾಲದಲ್ಲಿ ದೊಡ್ಡ ಕ್ರಾಂತಿಯೆ ಆಗಿತ್ತು. ಸ್ವತಂತ್ರ ಪ್ರವೃತ್ತಿಯ ಮೊಪಾಸಾನ ತಾಯಿ ಗಂಡನ ಅಡಿಯಾಳಾಗಿ ಇರಲು ಬಯಸದೆ ಸಂಸಾರವನ್ನು ಬಿಟ್ಟು ಹೊರಬಂದಳು.

ಅಪ್ಪನಿಂದ ದೂರವಾದ ಮೊಪಾಸಾ ಈಗ ಅಮ್ಮನ ದಟ್ಟ ಪ್ರಭಾವದಲ್ಲಿ ಬೆಳೆದ. ತಂದೆ-ತಾಯಿಗಳ ಪ್ರೀತಿಯಿಂದ ವಂಚಿತನಾದ ಮೊಪಾಸಾ ಅಮ್ಮನನ್ನು ಕೈ ಬಿಟ್ಟಿದ್ದಕ್ಕಾಗಿ ಅಪ್ಪನನ್ನು ಕೊನೆಯವರೆಗೂ ದ್ವೇಷಿಸಿದ. ಸೂಕ್ಷ್ಮ ಸ್ವಭಾವದ ಹುಡುಗನ ಮೇಲೆ ಗಂಡ-ಹೆಂಡಿರ ಜಗಳ ತನ್ನ ಗಾಯ ಮಾಡಿತ್ತು. ಹೀಗಾಗಿ ಅವನು ಗಂಡಸರನ್ನು ದ್ವೇಷಿಸತೊಡಗಿದ. ಗಂಡಂದಿರು ಕೆಟ್ಟವರಿರುತ್ತಾರೆ ಎನ್ನುವ ಬಾಲ್ಯದ ಭಾವನೆ ಅವನಲ್ಲಿ ಎಷ್ಟೊಂದು ಅಚ್ಚೊತ್ತಿತ್ತೆಂದರೆ ಅವನು ಮದುವೆಯನ್ನೆ ಆಗಲಿಲ್ಲ. ತಾಯಿ ಸಾಕಷ್ಟು ಓದಿಕೊಂಡವಳಾಗಿದ್ದರಿಂದ ಮೊಪಾಸಾಗೆ ಎಳೆತನದಲ್ಲಿಯೆ ಸಾಹಿತ್ಯದ ಪ್ರಭಾವ ಉಂಟಾಯಿತು. ಶೇಕ್ಸ್‌ಪಿಯರ್ ಎಂದರೆ ಅವಳಿಗೆ ಅಚ್ಚುಮೆಚ್ಚು. ತಾಯಿಯ ಜೊತೆಯಲ್ಲಿ ತುಂಬ ಸಂರಕ್ಷಿತನಾಗಿಯೆ ಬೆಳೆದ ಮೊಪಾಸಾ ಹುಡುಗನಾಗಿದ್ದಾಗ ಈಜಾಡುವುದು, ಮೀನು ಹಿಡಿಯುವುದು, ದೋಣಿ ನಡೆಸುವುದು ಮುಂತಾದವುಗಳನ್ನು ಲೀಲಾಜಾಲವಾಗಿ ಕಲಿತ.

ಗ್ರೀಕ್, ಲ್ಯಾಟಿನ್ ಮತ್ತು ಇತರ ಅಭಿಜಾತ ಸಾಹಿತ್ಯಗಳ ಅಭ್ಯಾಸಕ್ಕಾಗಿ ತಾಯಿ ಅವನನ್ನು ರೌಯಿನ್ ಎನ್ನುವ ಸ್ಥಳದಲ್ಲಿ ಪ್ರೌಢ ವಿದ್ಯಾಭ್ಯಾಸಕ್ಕೆ ಹಾಕಿದಳು. ಆಗ ಮೊಪಾಸಾಗೆ ಹದಿಮೂರು ವರ್ಷ ವಯಸ್ಸು. ಕಡಲತಡಿಯಲ್ಲಿ ಅವನು ಸಮಯವನ್ನು ಆಗಾಗ ಕಳೆಯುತ್ತಿದ್ದ. ಅಂತಹ ಒಂದು ಸಂದರ್ಭದಲ್ಲಿಯೆ, ಮುಳುಗುತ್ತಿದ್ದ ಪ್ರಸಿದ್ಧ




ಕವಿ ಸ್ವಿನ್‌ಬರ್ನ್‌ನನ್ನು ಮೊಪಾಸಾ ರಕ್ಷಿಸಿದ. ಅವನ ಹದಿನೆಂಟನೆಯ ವಯಸ್ಸಿಯಲ್ಲಿ ಅವನ ಸಾಹಿತ್ಯ ಜೀವನದ ದಿಕ್ಕನ್ನೇ ಬದಲಾಯಿಸುವಂತಹ ಘಟನೆಯೊಂದು ನಡೆಯಿತು. ಅದೇ ಪ್ರಸಿದ್ಧ ಲೇಖಕ ಗುಸ್ತಾವ್ ಫ್ಲಾಬರ್ಟ್‌ನ ಕಣ್ಣಿಗೆ ಮೊಪಾಸಾ ಬಿದ್ದಿದ್ದು. ಮೊಪಾಸಾ ಕೂಡ ಫ್ಲಾಬರ್ಟ್‌ನ ಪ್ರಭಾವಕ್ಕೆ ಸಿಲುಕಿಬಿಟ್ಟ. ಮುಂದೆ ಮೊಪಾಸಾ ಅಲ್ಲಿ ಇಲ್ಲಿ ಓದುತ್ತಿದ್ದರು ಕೂಡ ಅವನ ತಲೆ ಹೊಕ್ಕಿದ ಸಾಹಿತ್ಯ ರಚನೆ ಅವನ ತಲೆಯನ್ನು ಹಗಲಿರುಳು ತಿನ್ನುತ್ತಿತ್ತು. ಯಾವತ್ತೊ ಎನ್ನುವ ಸ್ಥಳದಲ್ಲಿ ಕಾಲೇಜು ಕಲಿಯಲು ಹೋದವನು ಅದು ಇಷ್ಟವಾಗದೆ ಕಾಲೇಜಿನವರು ಹೊರ ಹಾಕುವ ಸನ್ನಿವೇಶವನ್ನು ತಾನೇ ಖುದ್ದಾಗಿ ಸೃಷ್ಟಿಸಿದ. ರೊಯಿನ್ ಪ್ರದೇಶದ ಲೈಸಿ-ಪೈರಿ-ಕಾರ್ನಿಲ್ ಕಾಲೇಜಿನಲ್ಲಿ ಮೊಪಾಸಾ ಗಂಭೀರವಾಗಿ ಕಾವ್ಯ ಮತ್ತು ನಾಟಕಗಳನ್ನು ಓದಿಕೊಂಡ.



ಸಾಹಸಮಯ ತಾರುಣ್ಯ

1870 ರ ಸುಮಾರಿಗೆ ಅವನು ಪದವಿ ಮುಗಿಸುವಷ್ಟರ ಹೊತ್ತಿಗೆ ಫ್ರಾನ್ಸ್- ಪ್ರಷ್ಯನ್ (ಫ್ರಾನ್ಸ್-ಜರ್ಮನ್) ಯುದ್ಧ ಪ್ರಾರಂಭವಾಗಿತ್ತು. ತರುಣ ಮೊಪಾಸಾನಲ್ಲಿ ದೇಶಪ್ರೇಮ ತುಂಬಿತುಳುಕುತ್ತಿತ್ತು. ಯುದ್ಧದಲ್ಲಿ ಸ್ವಯಂಸೇವಕನಾಗಿ ಸೇರಿಕೊಂಡು ಸೈನಿಕರಿಗೆ ನೆರವಾದ. ಬೇರೆ ಬೇರೆ ಸ್ಥಳಗಳಿಗೆ ಹೋಗಿ ಹೋರಾಡಿದ. ಒಂದು ವರ್ಷ ಯುದ್ಧದಲ್ಲಿ ಸೈನಿಕರಿಗೆ ಉತ್ಸಾಹ ತುಂಬಿದ ಅವನು 1871 ರಲ್ಲಿ ನಾರ್ಮಂಡಿಯನ್ನು ತ್ಯಜಿಸಿ ಪ್ಯಾರಿಸಿಗೆ ಹೋದ. ಅಲ್ಲಿ ಹತ್ತು ವರ್ಷಗಳ ಕಾಲ ನೌಕಾದಳದಲ್ಲಿ ಕಾರಕೂನನಾಗಿ ಕೆಲಸ ಮಾಡಿದ. ಬಿಡುವಿನ ವೇಳೆಯನ್ನು ಸಮುದ್ರದಲ್ಲಿ ವಿಹಾರದೋಣಿಗಳನ್ನು ನಡೆಸುವುದು, ನದಿಯಲ್ಲಿ ಒಬ್ಬನೆ ಹತ್ತಾರು ಮೈಲು ಈಜಾಡುವುದು ಮತ್ತು ಪತ್ರಿಕೆಗಳಿಗೆ ಬರೆಯುವುದನ್ನು ಮಾಡುತ್ತಿದ್ದ. ದೋಣಿಗಳನ್ನು ನಡೆಸುವ ಹುಚ್ಚು ಮೊಪಾಸಾಗೆ ಎಷ್ಟಿತ್ತೆಂದರೆ ತನ್ನ ಕಥೆ-ಕಾದಂಬರಿಗಳಿಂದ ಅವನು ಮುಂದೆ ಶ್ರೀಮಂತನಾದಾಗ ನಾಲ್ಕು ದೊಡ್ಡ ಕಟ್ಟಡಗಳನ್ನು, ಎರಡು ಸಮುದ್ರದ ಮೇಲಿನ ಓಡುದೋಣಿ (yatchs) ಗಳನ್ನು ಕೊಂಡುಕೊಂಡ. ಐವತ್ತು ಮೈಲಿಗಳಷ್ಟು ದೂರ ದೋಣಿಗೆ ಹುಟ್ಟು ಹಾಕುತ್ತಿದ್ದ. ಅಷ್ಟು ಬಲಾಢ್ಯನಾಗಿದ್ದ ವ್ಯಕ್ತಿಯನ್ನು ಸಿಫಿಲಿಸ್ ಎನ್ನುವ ಮಾರಣಾಂತಿಕ ರೋಗ ಅವನಿಗೆ ಗೊತ್ತಿಲ್ಲದಂತೆಯೆ ತಬ್ಬಿಕೊಂಡು ಕೊಂದಿತು.



ಬರವಣಿಗೆಯ ಮೊದಲ ದಿನಗಳು

ಫ್ಲಾಬರ್ಟ್‌ನ ಗರಡಿಯಲ್ಲಿ ಪಳಗಿದ ಮೊಪಾಸಾ ಎಮಿಲಿ ಜೋಲಾ, ಬಾಲ್ಜಾಕ್, ಹಿಪ್ಪೊಲಿಟ್ ತೇನ್ ಮತ್ತು ರಶಿಯನ್ ಕಾದಂಬರಿಕಾರ ಇವಾನ್ ತರ್ಜನೆವ್ ಅವರಿಂದ ಪ್ರೇರಣೆಗಳನ್ನು ಪಡೆದ. ವಾಸ್ತವವಾದಿ ಮತ್ತು ಸ್ವಾಭಾವಿಕ ಬರವಣಿಗೆಯಲ್ಲಿ ತನ್ನನ್ನು ತೆರೆದಿಡಬೇಕು ಎನ್ನುವ ಹಂಬಲ ಅವನಲ್ಲಿ ತೀವ್ರವಾಗಿ ಬೆಳೆಯುತ್ತಿತ್ತು. 1878 ರಲ್ಲಿ ನೌಕಾದಳದಿಂದ, ಶಿಕ್ಷಣ ಇಲಾಖೆಗೆ ಅವನನ್ನು ವರ್ಗ ಮಾಡಲಾಯಿತು. ಅದು ಅವನಿಗೆ ಒಂದು ರೀತಿಯಲ್ಲಿ ತುಂಬ ಅನುಕೂಲವೇ ಆಯಿತು. ಲೆ ಫಿಗಾರೊ, ಗಿಲ್ ಬ್ಲಾಸ್, ಲಾ ಎಕೊದ ಪ್ಯಾರಿಸ್ ಮುಂತಾದ ಪತ್ರಿಕೆಗಳ ಸಂಪಾದಕನಾಗಿ ದುಡಿದ. ತನ್ನ ಬಿಡುವಿನ ವೇಳೆಯಲ್ಲಿ ಹಗಲಿರುಳೆನ್ನದೆ ಕಥೆ, ಕಾದಂಬರಿಗಳನ್ನು ಗೀಚುತ್ತಿದ್ದ.

1880 ರಲ್ಲಿ ಅಂದರೆ ಅವನ ಮೂವತ್ತನೆಯ ವಯಸ್ಸಿನಲ್ಲಿ ಬೊಲ್ ದ ಸುಯಿಫ್ (Ball of Fat) ಎನ್ನುವ ನೀಳ್ಗತೆಯನ್ನು ಪ್ರಕಟಿಸುವ ಮೂಲಕ ರಾತ್ರಿ ಕಳೆದು ಬೆಳಗಾಗುವಷ್ಟರಲ್ಲಿ ಮೊಪಾಸಾ ವಿಶ್ವ ವಿಖ್ಯಾತ ಕಥೆಗಾರನಾಗಿಬಿಟ್ಟಿದ್ದ. ಫ್ರೆಂಚ್ ಮತ್ತು ಜರ್ಮನ್ನರ ನಡುವಿನ ಯುದ್ಧದ ಹಿನ್ನೆಲೆಯನ್ನಿಟ್ಟುಕೊಂಡು ಜನರ ಸೋಗಲಾಡಿತನವನ್ನು, ಹುಸಿ ದೇಶಪ್ರೇಮವನ್ನು, ಪ್ರತಿಷ್ಠಿತ ವ್ಯಕ್ತಿಗಳೆಂದು ಹೇಳಿಕೊಳ್ಳುವವರ ಬೂಟಾಟಿಕೆಯನ್ನು ಬಯಲು ಮಾಡುವ ಕಥಾನಕ ಒಮ್ಮಿಂದೊಮ್ಮೆಲೆ ಕಾಳ್ಗಿಚ್ಚಿನಂತೆ ಇಡೀ ಫ್ರಾನ್ಸ್ ದೇಶವನ್ನು ಆವರಿಸಿಕೊಂಡಿತು. ಇಂದಿಗೂ ಅವನ ಈ ನೀಳ್ಗತೆ ತುಂಬ ಪ್ರಸಿದ್ಧಿಯನ್ನು ಪಡೆದಿದೆ. ಸೂಳೆಯೊಬ್ಬಳನ್ನು ತಿರಸ್ಕಾರದಿಂದ ಕಾಣುವ ಜನರು ತೀರ ಅಗತ್ಯವೆನಿಸಿದಾಗ ಮಾತ್ರ ಅವಳನ್ನು ಹಾಡಿ ಹೊಗಳುವ, ಹಸಿವಿನಿಂದ ಸಾಯುತ್ತಿದ್ದಾಗ ಅವಳ ಬುತ್ತಿಯ ಗಂಟನ್ನು ಬಿಚ್ಚಿ ಉಣ್ಣುವ, ಜರ್ಮನ್ ಮಿಲಿಟರಿಯವರಿಂದ ಪಾರಾಗಲು ಅವಳನ್ನು ಅವನ ಜೊತೆ ಮಲಗಲು ಪುಸಲಾಯಿಸಿ ಕೊನೆಗೆ ಎಲ್ಲರೂ ಪಾರಾಗಿ ಹೋಗುವಾಗ ಅವಳನ್ನು ತುಂಬ ನಿಕೃಷ್ಟವಾಗಿ ಕಾಣುವ ಅಮಾನವೀಯ, ಕ್ರೂರ ಚಿತ್ರಣವನ್ನು ದಢೂತಿ ಸೂಳೆಯ ಕಥೆಯಲ್ಲಿ ಕಾಣಬಹುದಾಗಿದೆ. ಒಂದು ಸಲ ಅವನು ಪ್ರಸಿದ್ಧನಾಗಿದ್ದೇ ತಡ ಮೊಪಾಸಾ ವರ್ಷಕ್ಕೆ ಒಂದರಿಂದ ನಾಲ್ಕು ಕಥಾ ಪುಸ್ತಕಗಳನ್ನು ಬಿಡುಗಡೆ ಮಾಡುತ್ತ ಹೋದ. ಪ್ರತಿಭೆ ಮತ್ತು ವಿಪುಲವಾದ ಬರವಣಿಗೆ ಜಗತ್ತಿನಾದ್ಯಂತ ಅವನಿಗೆ ಬೇಡಿಕೆಯನ್ನು ಸೃಷ್ಟಿಸಿತು. 1883 ರಲ್ಲಿ 'ಒಂದು ಹೆಂಗಸಿನ ಜೀವನ' ಎನ್ನುವ ಅವನ ಕಾದಂಬರಿ ಬಿಡುಗಡೆಯಾದಾಗ ಒಂದು ವರ್ಷದಲ್ಲಿ 25,000 ಪ್ರತಿಗಳು ಮಾರಾಟವಾದವು. ಅವನ ಎರಡನೆಯ ಕಾದಂಬರಿ 'ಬೆಲಾಮಿ' ನಾಲ್ಕು ತಿಂಗಳಲ್ಲಿ ಮೂವತ್ತೇಳು ಮುದ್ರಣಗಳನ್ನು ಕಂಡಿತು.

ಮೊಪಾಸಾನ ವಿಶೇಷತೆ

ನಿರುಮ್ಮಳ ಭಾವದಿಂದ ಕಥೆ ಹೇಳುವ ಕಲೆ, ನಿರುದ್ವಿಗ್ನವಾದ ಶೈಲಿ, ನವಿರು ಹಾಸ್ಯ ದುರಂತ ಚಿತ್ರಣ, ವ್ಯಂಗ್ಯ ಪ್ರಣಯದ ಉತ್ಕಟತೆ, ಗಂಡು ಮತ್ತು ಹೆಣ್ಣಿನ ಮನಸ್ಸಿನಲ್ಲಿರುವ ನೂರಾರು ಮೋಸದ ತಂತ್ರಗಳು ಮೊಪಾಸಾನನ್ನು ಅದ್ವಿತೀಯ ಕತೆಗಾರನನ್ನಾಗಿ ಮಾಡಿದವು. ನಾರ್ಮಂಡಿ ಪ್ರದೇಶದ ರೈತರ ಬದುಕು, ಅಧಿಕಾರಿ ವರ್ಗದವರ ದರ್ಪ, ಅಧಿಕಾರಶಾಹಿ ಮನೋವೃತ್ತಿ ಎಲ್ಲ ವರ್ಗದ ಜನರ ಭಾವಾವೇಶ ಮುಂತಾದವುಗಳನ್ನು ಸೆರೆ ಹಿಡಿಯುವಲ್ಲಿ ಅವನ ಚಾಣಾಕ್ಷತೆಯಿದೆ. ಇದ್ದದ್ದನ್ನು ಇದ್ದಂತೆಯೆ ಕಾಣುವ ಮತ್ತು ನಿರೂಪಿಸುವ ಪ್ರವೃತ್ತಿಯನ್ನು ಅವನು ರೂಢಿಸಿಕೊಂಡಿದ್ದ. ಮನುಷ್ಯನ ಬದುಕನ್ನು ಯಥಾವತ್ತಾಗಿ ನಿರೂಪಿಸುವಲ್ಲಿಯೂ ಕೂಡ ಮೊಪಾಸಾ ಉಪಯೋಗಿಸಿಕೊಂಡ ಆಕರ್ಷಕ ವಿಧಾನಗಳು ಅವನನ್ನು ಓದುಗರ ಹತ್ತಿರ ಒಯ್ದವು. ಮೊಪಾಸಾ ಯಶಸ್ವಿಯಾಗಿದ್ದನ್ನು ಕಂಡು ಅವನ ಪ್ರಭಾವದಲ್ಲಿ ಬೆಳೆದ ಹಲವು ಲೇಖಕರು ಕೂಡ ಹೆಸರಾಂತ ಕಾದಂಬರಿಕಾರರಾದರು. ರೇಮಂಡ್ ಕಾರ್ವರ್, ಆ್ಯಂಟನ್ ಚೆಕಾಫ್, ಓ.ಹೆನ್ರಿ, ಹೆನ್ರಿ ಜೇಮ್ಸ್, ಎಚ್.ಪಿ. ಲವ್‌ಕ್ರಾಫ್ಟ್, ಸಾಮರಸೆಟ್ ಮಾಮ್ ಮುಂತಾದವರು ಮೊಪಾಸಾನ ಪ್ರಭಾವಕ್ಕೆ ಪ್ರತ್ಯಕ್ಷವಾಗಿಯೊ, ಪರೋಕ್ಷವಾಗಿಯೊ ಒಳಗಾಗಿದ್ದನ್ನು ಗುರುತಿಸಬಹುದಾಗಿದೆ.

ಗಂಡು-ಹೆಣ್ಣಿನ ವೈಚಾರಿಕತೆ, ಸ್ವತಂತ್ರ ಮನೋವೃತ್ತಿ ಲಂಪಟತನ, ಮನುಷ್ಯನ ಕ್ಷುದ್ರತೆ, ಹುಸಿ ದೇಶಪ್ರೇಮ, ಆಡಂಬರದ ಬದುಕುಗಳನ್ನು ಮೊಪಾಸಾ ಇನ್ನಿಲ್ಲದಂತೆ ನಿರೂಪಿಸಿದ. ಹೆಣ್ಣು ಗಂಡನ್ನು ಮೋಸಗೊಳಿಸುವ ಮತ್ತು ಬಲೆಗೆ ಹಾಕಿಕೊಳ್ಳುವ ನೂರಾರು ವಿಧಾನಗಳನ್ನು ಮೊಪಾಸಾ ತನ್ನ ಕಥೆಯಲ್ಲಿ ತೋರಿಸಿದ್ದಾನೆ. 'ತಿನ್ನಬಾರದ ಹಣ್ಣು' ಎನ್ನುವ ಕಥೆಯಲ್ಲಿ ತನ್ನ ಗಂಡನಿಗೆ ಬೇರೆ ಹೆಂಗಸರ ಜೊತೆಗೆ ಸಂಬಂಧವಿದೆಯೆಂಬುದನ್ನು ಚಾಣಾಕ್ಷತನದಿಂದ ಅವನಿಂದಲೇ ಬಾಯಿ ಬಿಡಿಸುವ ಹೆಣ್ಣೊಬ್ಬಳು ಬೇರೆ ಬೇರೆ ಹೆಣ್ಣುಗಳು ಗಂಡಿಗೆ ರುಚಿಯೆನಿಸುವದಾದರೆ ಹೆಣ್ಣಿಗೂ ಕೂಡ ಬೇರೆ ಬೇರೆ ಗಂಡು ರುಚಿಯೆನಿಸುವ ತಾರ್ಕಿಕತೆಗೆ ಬಂದು ನಿಲ್ಲುತ್ತಾಳೆ. ತಿನ್ನಬಾರದ ಹಣ್ಣಿಗಾಗಿ ಆಮಿಷವೆಂಬುದು ಹೇಗೆ ಪುಸಲಾಯಿಸುತ್ತದೆಯೆಂದು ಮೊಪಾಸಾ ಹೇಳುತ್ತಾನೆ. ಅವನ 'ನೆಕ್ಲೆಸ್' ಕಥೆ ಜಗತ್ಪ್ರಸಿದ್ಧವಾಗಿದೆ. ಅದರಲ್ಲಿ ಅಮೆರಿಕೆಯ ಬಂಡವಾಳಶಾಹಿಯನ್ನು ಟೀಕಿಸುವ ನೆಲೆಯಿದೆಯೆಂದು ಇತ್ತೀಚಿನ ಕೆಲ ಅಧ್ಯಯನಗಳಲ್ಲಿ ಹೇಳಲಾಗಿದೆ. 'ಒಂದು ಹೆಂಗಸಿನ ಜೀವನ' ಕಾದಂಬರಿಯು ಫ್ರೆಂಚ್ ಸಾಹಿತ್ಯ ಇತಿಹಾಸದಲ್ಲಿ 'ಲೆ ಮಿಜರೇಬಲ್ಸ್' ಕಾದಂಬರಿ ನಂತರ ಬಂದ ಉತ್ಕೃಷ್ಟ ಕಾದಂಬರಿಯೆಂದು ಟಾಲಸ್ಟಾಯ್ ಮೊಪಾಸಾನನ್ನು ಹೊಗಳಿದ್ದಾನೆ.

ನವನವೀನ ತಂತ್ರ, ವಸ್ತುಗಳಿಂದ ಸಮೃದ್ಧವಾಗಿರುವ ಇಂದಿನ ಕಥನ ಕ್ಷೇತ್ರವನ್ನು ಗಮನದಲ್ಲಿಟ್ಟುಕೊಂಡು ಮೊಪಾಸಾನ ಕಥೆಗಳನ್ನು 'ಇವೇನು ಮಹಾ?' ಎಂದು ಮೂಗು ಮುರಿಯುವವರು ಆಗಿನ ಕಥಾ ಬೆಳವಣಿಗೆಯ ಕಾಲವನ್ನು ಮರೆತು ಮಾತನಾಡುತ್ತಿದ್ದಾರೆ ಎಂದೆ ಅರ್ಥ. ಮನುಷ್ಯನ ಗುಣ -ಸ್ವಭಾವಗಳನ್ನು ವಾಸ್ತವಿಕತೆಯ ನೆಲೆಯಲ್ಲಿ ಮೊಪಾಸಾನಂತೆ ಹಿಡಿದಿಟ್ಟವರು ವಿರಳ. ಫ್ರೆಂಚ್ ಸಮಾಜದ ಆಗಿನ ವರ್ಗ ಸಂಘರ್ಷ ಮತ್ತು ಮೇಲು-ಕೀಳು ಭಾವನೆಯನ್ನು ಈ ಕಥೆಗಳು ಹೊರಹಾಕುತ್ತವೆ.

'ನಾನು ಈ ಜಗತ್ತಿಗೆ ಒಂದು ಸಣ್ಣ ಕಣವಾಗಿ ಬಂದಿದ್ದೇನೆ. ಆದರೆ ಸಾಯುವ ಮುನ್ನ ಸಿಡಿಲಾಗುತ್ತೇನೆ' ಎಂದು ಮೊಪಾಸಾ ಒಮ್ಮೆ ಹೇಳಿದ್ದುಂಟು. ಅದನ್ನು ನಿಜ ಮಾಡಲೆಂಬಂತೆ ಅವಿಶ್ರಾಂತ ದುಡಿಮೆಯಲ್ಲಿ ಅವನು ಹಣ್ಣಾದ. ತನ್ನ ಸ್ವಚ್ಛಂದ ಮತ್ತು ಲಂಪಟ ಎನ್ನಬಹುದಾದ ಬದುಕಿಗೆ ತಕ್ಕುದಾದ ಬೆಲೆಯನ್ನು ಕಥೆಗಾರನಾಗಿ ಅವನು ಕೊನೆಗೂ ತೆರಬೇಕಾಯಿತು. ಸಿಫಿಲಿಸ್ ಎನ್ನುವ ಲೈಂಗಿಕ ರೋಗ ಅವನನ್ನು ಕಿತ್ತು ತಿಂದಿತು. ಅವನು ಎಷ್ಟೆ ಪಾರಾಗಬೇಕೆಂದರೂ ಅದರಿಂದ ಗುಣಮುಖನಾಗಲಿಲ್ಲ. ತಲೆಗೆ ಭ್ರಾಂತಿ ಹಿಡಿಯಿತು. ಆತ್ಮಹತ್ಯೆಗೂ ಯತ್ನಿಸಿದ. ಕೊನೆಗೆ ಪ್ಯಾರಿಸ್ಸಿನ ಹುಚ್ಚಾಸ್ಪತ್ರೆಯೊಂದಕ್ಕೆ ಅವನನ್ನು ಸೇರಿಸಲಾಯಿತು. 1893 ಜುಲೈ 6 ರಂದು ಕೇವಲ ತನ್ನ ನಲವತ್ತೆರಡನೆಯ ವಯಸ್ಸಿನಲ್ಲಿ ಕಾದಂಬರಿ ಬರೆದಷ್ಟೆ ವೇಗದಲ್ಲಿ ತಿರುಗಿಬಾರದ ದಾರಿಯಲ್ಲಿ ಕಣ್ಮರೆಯಾದ. ಅವನ ವೈಯಕ್ತಿಕ ಜೀವನವೇನೆ ಇರಲಿ, ಅವನು ಸೃಷ್ಟಿಸಿದ ಕಥಾ ಪ್ರಪಂಚ ಮಾತ್ರ ಸಾವಿಲ್ಲದೆ ದಿನವೂ ಹೊಸ ರೀತಿಯಲ್ಲಿ ತೆರೆದುಕೊಳ್ಳುತ್ತದೆ. ಅದ್ಭುತ ಕಥೆಗಾರನೊಬ್ಬನನ್ನು ನೆನಪು ಮಾಡಿಕೊಡುತ್ತದೆ.



■

ಪಿ.ಲಂಕೇಶರ 77 ಹುಟ್ಟುಹಬ್ಬವನ್ನು ನಾವು ಮಾರ್ಚ್ 11ರಂದು ಮಂಗಳೂರಿನಲ್ಲಿ ಆಚರಿಸುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಮಂಗಳೂರನ್ನು ಕುರಿತು ಲಂಕೇಶರು ಬರೆದಿದ್ದ ಲೇಖನವನ್ನು ಓದುಗರಿಗಾಗಿ ಇಲ್ಲಿ ನೀಡುತ್ತಿದ್ದೇವೆ.

■

ಲಂಕೇಶ್ 77 ವಿಶೇಷಾಂಕ

ಮೋಹಕ ಮಂಗಳೂರು

...ಪಂಜುರ್ಲಿಯ ಭೂತ ಕುಣಿಯುತ್ತಲೇ ಇತ್ತು. ...ಲಿಗೆ ಕಡಗ ಕಟ್ಟಿ, ಮೈತುಂಬ ಹೊಳೆವ ಜಿನಾರಿ ...ಒಂಡು ಕೆಂಪು, ಕಪ್ಪು ಬಣ್ಣದ ಬಟ್ಟೆ, ತಲೆಗೆ ಕಿರೀಟ, ...ಕ್ಕೆ ಮುಖವಾಡದ ದಟ್ಟ ಬಣ್ಣ ಹಾಕಿದ್ದ ಪಂಜುರ್ಲಿ ... ಭೀಕರವಾಗಿತ್ತು; ಅದರ ಜೊತೆಗೆ ಪೂಜಾರಿ ಉರಿವ ...ಬು ಹಿಡಿದು ಕುಣಿತಕ್ಕೆ ನೆರವಾಗುತ್ತಿದ್ದ. ಸುತ್ತ ...ಕರು, ವರದಿಗಾರರು ಕೂತು ನೋಡಿ ನಗುತ್ತಿದ್ದರು. ... ರಾತ್ರಿಗಳಲ್ಲಿ ದಕ್ಷಿಣ ಕನ್ನಡದ ಜೀರುಂಡೆ, ಕಪ್ಪೆ ...ಕೋಳಗಳ ಸದ್ದುಗಳ ಹಿನ್ನೆಲೆಯಲ್ಲಿ ಸಹಸ್ರಾರು ಜನರ ...ಲೋಟಲೆಗಳನ್ನು ಕೇಳಿರಬಹುದಾದ ಪಂಜುರ್ಲಿ ...ತ್ತು ವಿದ್ಯುತ್ ದೀಪಗಳ ಸಂಜೆ ಸ್ವಲ್ಪ ತಮಾಷೆಯಾಗಿ ...ಯೂ ದಕ್ಷಿಣ ಕನ್ನಡ ಜಿಲ್ಲೆಯ ವಿಚಿತ್ರ ಕಲಸು ...ಮೋಗರಕ್ಕೆ ಹಿಡಿದ ಕನ್ನಡಿಯಂತಿದ್ದ.

...ಅವತ್ತು ನಾನು ಮಂಗಳೂರಲ್ಲಿದ್ದೆ. ಹೋದ ವರ್ಷ ...ಬರ್ 9 ಕ್ಕೆ ಶುರುವಾಗಿದ್ದ ವಡ್ಡರ್ಸೆ ರಘುರಾಮ ... 'ಮುಂಗಾರು' ದಿನಪತ್ರಿಕೆಯ ವಾರ್ಷಿಕ ಹಬ್ಬದಲ್ಲಿ ...ವಹಿಸಿದ್ದೆ. ನನ್ನ ಪಕ್ಕದಲ್ಲಿ ಕೂತಿದ್ದ ಶೆಟ್ಟರು ಪಂಜುರ್ಲಿ ...ಪದ ತುಳು ಸಂಭಾಷಣೆಯನ್ನು ನನಗೆ ತರ್ಜುಮೆ ... ಹೇಳುತ್ತಿದ್ದರು. ಭೂತವನ್ನು ಅದೇ ಮೊದಲು ...ಡುತ್ತಿದ್ದ ನನಗೆ ಅದರ ವೇಷ, ಭಾಷೆ, ಕುಣಿತ, ...ಡಿಸುವ ಚೀತ್ಕಾರ ಎಲ್ಲವೂ ಕುತೂಹಲಕರವಾಗಿತ್ತು; ...ರ್ಯೇ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಇಲ್ಲಿ ಬಂದು ...ದ ಕೆಳಗೆ ಪತ್ರಿಕೆಯೊಂದನ್ನು ಶುರುಮಡಿ ಬಹುಪಾಲು ...ಸ್ವಿಯಾಗಿ ನಡೆಸುತ್ತಿರುವ ರಘುರಾಮಶೆಟ್ಟರ ಸಾಹಸ ...

...ಈ ದಕ್ಷಿಣ ಕನ್ನಡದಂಥ ನಿಬ್ಬೆರಗುಗೊಳಿಸುವ ...ನ್ನೊಂದು ಜಿಲ್ಲೆಯನ್ನು ನೋಡಿದ್ದೀರಾ? ಪಶ್ಚಿಮ ಘಟ್ಟದ ...ನ ಈ ಜಾಗ ಅರಬ್ಬೀ ಸಮುದ್ರದಿಂದ ಚುಂಬಿಸಲ್ಪಡುತ್ತಿರುವ, ಸಸ್ಯ ಸಂಪತ್ತಿನಿಂದ ತುಂಬಿತುಳುಕುತ್ತಿರುವ, ಆದರೆ ನಾವು ನೀವೆಲ್ಲ ಬಲ್ಲ ಅರಣ್ಯವನ್ನು ಬಹಳ ಕಡಿಮೆ ಪ್ರಮಾಣದಲ್ಲಿ ಪಡೆದ, ಮೇಲುನೋಟಕ್ಕೆ ಪೂರ್ತಿ ಹಳ್ಳಿಗಾಡಿನ ಪ್ರದೇಶದಂತಿರುವ, ಆದರೆ ಬೆಂಗಳೂರು ಬಿಟ್ಟರೆ ಅತ್ಯಂತ ಹೆಚ್ಚು ಕೈಗಾರಿಕೆಯಲ್ಲಿ ತೊಡಗಿರುವ ಜಿಲ್ಲೆ. ನಾನು ಮಂಗಳೂರಿನ ಗುಡ್ಡದ ಮೇಲಿನ ಪ್ರವಾಸಿ ಮಂದಿರದ ಮುಂಗಟ್ಟಿನಲ್ಲಿ ನಿಂತು ಅಚ್ಚರಿಪಡುತ್ತೇನೆ; ಮೂರೂವರೆ ಲಕ್ಷ ಜನಸಂಖ್ಯೆಯ ಮಂಗಳೂರು ಬರೀ ತೆಂಗಿನ ಮರಗಳ ತೋಟದಂತೆ ಕಾಣುತ್ತಿದೆ; ಇಲ್ಲಿ ಮನೆಗಳನ್ನು ಕಟ್ಟಲು ಜಾಗವಿಲ್ಲ ಅಂದರೆ ಹೇಗೆ? ನನ್ನ ಪಕ್ಕದಲ್ಲಿ ನಿಂತು ನೋಡುತ್ತಿದ್ದ ಮಂಗಳೂರಿನ ಮಿತ್ರರು, "ತೆಂಗಿನ ಮರಗಳ ಕೆಳಗೆಲ್ಲ ಮನೆಗಳಿವೆ, ಅವು ನಮಗೆ ಕಾಣಿಸುವುದಿಲ್ಲ ಅಷ್ಟೆ" ಅಂದರು. ಅವರ ಮಾತು ನಿಜವಾಗಿತ್ತು. ಪಕ್ಕದ ಸಮುದ್ರದ ಅಲೆಗಳಂತೆಯೇ ಕಣ್ಣು ಓಡುವವರೆಗೆ ಹಬ್ಬಿದ ತೆಂಗಿನಮರಗಳು. ಸಣ್ಣಗೆ ಬೆವರಿಸುವ ಹವೆಯಲ್ಲಿ ಮಿತ್ರರು ಹೇಳುತ್ತಿದ್ದರು: "ಇಲ್ಲಿ ಒಂದು ಮನೆಯನ್ನು ಇಟ್ಟುಕೊಂಡೇ ಮಂಗಳೂರಿನ ಜನ ಮುಂಬೈ, ಮದ್ರಾಸು, ಇಂಗ್ಲೆಂಡು, ಅಮೆರಿಕಾಗಳಿಗೆಲ್ಲ ಹೋಗಿ ದುಡಿದು ಇಲ್ಲಿಗೆ ಹಣ ಕಳಿಸುತ್ತಾರೆ. ದುಡಿಮೆ ಬೇಸರ ತಂದಾಗ ಹಿಂದಿರುಗುತ್ತಾರೆ. ಕರ್ನಾಟಕದ ಎಲ್ಲ ಮುಖ್ಯ ಬ್ಯಾಂಕುಗಳನ್ನು ರೂಪಿಸಿರುವ ದಕ್ಷಿಣ ಕನ್ನಡದಲ್ಲಿ ಮಧ್ಯಮ ವರ್ಗ ಶಕ್ತಿಯುತವಾಗಿದೆ; ಕಡುಬಡತನದ ಜನ ಕೂಡ ಕಡಿಮೆ ಸಂಖ್ಯೆಯಲ್ಲಿದ್ದಾರೆ."

ಆದರೆ ಅವರ ಮಾತು ಪೂರ್ತಿ ನಿಜವಿರಲಿಕ್ಕಿಲ್ಲ. ಇದು ಚೋಮನನ್ನು ಸೃಷ್ಟಿಸಿದ ಸ್ಥಳ: ಒಂದು ಕಡೆ ಮಣಿಪಾಲದ ಪೈಗಳ ದರಬಾರು, ಮತ್ತೊಂದು ಕಡೆ ಧರ್ಮಸ್ಥಳದ ಹೆಗ್ಗಡೆಗಳ ಅವಾಂತರ, ಈ ನಡುವೆ ನೂರಾರು ಪಂಜುರ್ಲಿ ಭೂತಗಳ ಹಾವಳಿ. ಇಲ್ಲಿಯ ಬಡವ ದಿಕ್ಕೆಟ್ಟ ಚೋಮನ ಒಕ್ಕಲು. ಅಬ್ರಾಹ್ಮಣರ ಒಂದೇಒಂದು ಹೇಳಿಕೊಳ್ಳುವಂಥ ಪತ್ರಿಕೆಯನ್ನು ಪಡೆಯದ, ಬಡತನದ ಬೋನಿನಿಂದ ತಪ್ಪಿಸಿಕೊಳ್ಳಲು ಯಾವುದೇ ದಾರಿಯನ್ನು ಕಾಣದ ಸಹಸ್ರಾರು ಜನ ಶೂದ್ರರು ನೊಂದು ನರಳುತ್ತಿರುವ ಜಿಲ್ಲೆ ಕೂಡ ಇದು. ಪ್ರವಾಸಿ ಮಂದಿರದ ಅಂಗಳದಿಂದ ಕಾಣುತ್ತಿದ್ದ ತೆಂಗಿನ ಸಮುದ್ರ ಮನೆಗಳನ್ನು ಬಚ್ಚಿಟ್ಟಂತೆಯೇ ದಕ್ಷಿಣ ಕನ್ನಡದ ದಾರಿದ್ರ್ಯವನ್ನು ಇಲ್ಲಿಯ ಮಂಗಳ ಗಂಗೋತ್ರಿ, ಹೆಂಚು, ಬೀಡಿ, ಕತ್ತ, ಗೊಬ್ಬರದ ಕಾರ್ಖಾನೆಗಳು, ಮಣಿಪಾಲದ ಕಾಲೇಜು, ಬ್ಯಾಂಕು, ಪತ್ರಿಕೆಯ 'ಉದ್ಯಮ'ಗಳು ಮುಚ್ಚಿಟ್ಟುಕೊಂಡಿವೆ. ತುಂಬ ಉದ್ಯಮಶೀಲ ಜನರಾದ ಬಂಟರು ಹಣವಂತರಾದರೂ ಅವರಲ್ಲಿರುವ ವರದಕ್ಷಿಣೆಯ ಪಿಶಾಚಿಯೇ ದಕ್ಷಿಣ ಕನ್ನಡದ ಒಂದು ವಿಶಿಷ್ಟ ಕಾಯಿಲೆಗೆ ಸೂಚನೆಯಾಗಿದೆ: ಹಣವಿದ್ದವರಿಗೆ ಹಣದ ಧ್ಯಾನ, ಅದು ಇಲ್ಲದವರಿಗೂ ಅದೇ ಧ್ಯಾನ. ಈ ಸುಂದರ ಮಂಗಳೂರಲ್ಲಿ ಸರಳ ಜೀವನ, ಉನ್ನತ ಚಿಂತನೆಯ ಮಾತುಗಳೆಲ್ಲ ಹಾಸ್ಯಾಸ್ಪದವಾಗಿ ಕೇಳಿಸುತ್ತವೆ.

ಇಂಥ ಸ್ಥಳದಲ್ಲಿ ವಡ್ಡರ್ಸೆಯವರು "ಬಾಯಿಲ್ಲದವರಿಗೆ ಬಾಯಿ ಕೊಡಲು, ಇಡೀ ಜಿಲ್ಲೆ ಮತ್ತು ಅದರ ಸುತ್ತಮುತ್ತ ವೈಚಾರಿಕತೆಯ ಮಳೆಗರೆಯಲು" ಹೊರಟು 'ಮುಂಗಾರು' ದಿನಪತ್ರಿಕೆಯನ್ನು ಹೊರತರುತ್ತಿದ್ದಾರೆ. ಆ ಪತ್ರಿಕೆಯ ಒಂದೆರಡು ಸಂಚಿಕೆ ನೋಡಿದರೂ ಅನ್ನಿಸುತ್ತದೆ–ಇದು ಕಪ್ಪು, ಕಂದುಬಣ್ಣದ ಜನರ ಬದುಕನ್ನು ಬಿಂಬಿಸಲು ಹೊರಟ ಪತ್ರಿಕೆ; ಅವರ ದೃಷ್ಟಿಕೋನದಿಂದ ಜೀವನವನ್ನು ಕಾಣಬಯಸುವ ಪತ್ರಿಕೆ. ಶತಮಾನಗಳಿಂದ ಅಕ್ಷರದ ಮೂಲಕ ಜನರನ್ನು ಸುಲಿದ, ತುಳಿದ ಜನರ ಮರ್ಜಿಯಿಂದ ಹೊರಬಂದು ವೈಚಾರಿಕತೆಯನ್ನು ಹರಡಲು ಉದ್ದೇಶಿಸುವ ಪತ್ರಿಕೆ. 'ಮುಂಗಾರು'ವಿನ ವಾರ್ಷಿಕ ಹಬ್ಬದಲ್ಲಿ ನಾನು ಹೇಳಬೇಕೆಂದಿದ್ದುದೂ ಅದನ್ನೇ. ಆದರೆ ಆ ಮುಖ್ಯ ಅಂಶದೊಂದಿಗೆ ಇನ್ನೊಂದು ಮುಖ್ಯ ಅಂಶ ತಳುಕುಹಾಕಿಕೊಂಡಿತ್ತು. ವಡ್ಡರ್ಸೆ ರಘುರಾಮಶೆಟ್ಟರು ಕಪ್ಪು, ಕಂದುಬಣ್ಣದ ಹಿಂದುಳಿದ ಜನಾಂಗದ ಪ್ರತಿನಿಧಿಗಳಾಗಿ ಬಂಗಾರಪ್ಪ ಮೊಯ್ಲಿ, ಪೂಜಾರಿ ಇತ್ಯಾದಿ ಜನರನ್ನು ಹೊಗಳಿ



ಪ್ರೋತ್ಸಾಹಿಸುವುದು 'ಮುಂಗಾರು' ಸಂಚಿಕೆಗಳಿಂದ ಕಂಡುಬರುತ್ತಿತ್ತು; ಅವರೆಲ್ಲ ವಡ್ಡರ್ಸೆಯವರ ದೃಷ್ಟಿಯಲ್ಲಿ 'ನಮ್ಮವರು' ಆಗಿದ್ದರು.

ವಡ್ಡರ್ಸೆಯವರ ಈ ಧೋರಣೆಯನ್ನೇ ನಾನು ಕೇವಲ ಉದಾಹರಣೆಯಾಗಿ ಎತ್ತಿಕೊಂಡು ಪ್ರತಿಯೊಬ್ಬ ಶೂದ್ರ ಬುದ್ಧಿಜೀವಿಯೂ ಮಾಡುವ ತಪ್ಪನ್ನು ತೋರಿಸಲು ಯತ್ನಿಸಿದೆ. ಹರಿಜನ ಗಿರಿಜನರಿಗಾಗಲಿ, ಹಿಂದುಳಿದವರಿಗಾಗಲಿ ನೆರವಾಗಬೇಕೆಂದು ತೀರ್ಮಾನಿಸಿದವನು ಮಾಡಬೇಕಾದ ಮುಖ್ಯ ಕೆಲಸವೊಂದಿದೆ. ಅದೇನೆಂದರೆ, ನಾವು ಯಾವ ಬ್ರಾಹ್ಮಣರನ್ನು ಸೋಗಲಾಡಿತನ, ಗಿಲೀಟು ಇತ್ಯಾದಿಗಳಿಗಾಗಿ ಟೀಕಿಸು ತ್ತೇವೋ ಆ ಬ್ರಾಹ್ಮಣರಲ್ಲಿ ಪರಂಪರಾಗತವಾಗಿ ಕಂಡುಬರುವ ಶ್ರಾದ್ಧದ ಶ್ರದ್ಧೆ ಕಠೋರ ವಸ್ತುನಿಷ್ಠೆಯ ಒಂದಂಶವಾದರೂ ಶೂದ್ರ ಬುದ್ಧಿಜೀವಿಗಳಲ್ಲಿ ನೆಲಸಬೇಕು.

ಹಿಂದುಳಿದವರಿಗೆ ನಮ್ಮ ಪ್ರೀತಿ, ಕಾಳಜಿ, ಆರೈಕೆಗಳು ಎಷ್ಟು ಪ್ರಮಾಣದಲ್ಲಿ ಬೇಕೋ ಅಷ್ಟೇ ಪ್ರಮಾಣದಲ್ಲಿ ಅವರಿಗೆ ನಮ್ಮ ನಿಷ್ಠುರ ಟೀಕೆ, ಪ್ರಾಮಾಣಿಕ ವಿಮರ್ಶೆ ಬೇಕು. ಟೀಕೆ, ವಿಮರ್ಶೆಯನ್ನು ತುಚ್ಛವೆಂದೂ, ಶತ್ರು ಮಾತ್ರ ನೀಡುವ ಕಿರುಕುಳವೆಂದೂ ತಿಳಿದ ಈ ದೇಶದಲ್ಲಿ ಭಟ್ಟಂಗಿಗಳು, ವಂದಿಮಾಗಧರಿಂದ ಆಗಿರುವ ಅಪಾಯವೇ ಹೆಚ್ಚು. ಆದ್ದರಿಂದ ಪತ್ರಿಕೆಗಳನ್ನು ನಡೆಸುವವರು ನಮ್ಮ ಜನಸಮೂಹವನ್ನು ಮುನ್ನಡೆಸುವ ಒಂದು ಮಾರ್ಗ ಯಾವುದೆಂದರೆ, ಈ ಜನತೆಯ ಆಳದ ತಿಳಿವಳಿಕೆಯಿಂದ ಬಂದ ವಿಶ್ಲೇಷಣೆ, ವಿಮರ್ಶೆ, ಟೀಕೆ ಕೂಡ ಆ ಜನರಲ್ಲಿ ನಮಗಿರುವ ವಿಶ್ವಾಸವನ್ನು ತೋರುವಂತಿರಬೇಕು.

ಮೇಲಿನ ಅನ್ನಿಸಿಕೆಯಲ್ಲಿ ಎಷ್ಟು ಅವತ್ತಿನ ಸಭಿಕರನ್ನು ತಲುಪಿತೋ ಗೊತ್ತಿಲ್ಲ. ಬಹಳ ಕಾಲದ ಬಳಿಕ ಅವತ್ತು ಮಾತಾಡುತ್ತ ನಿಂತಿದ್ದೆ. ವೇದಿಕೆಯಲ್ಲಿ ಮಂತ್ರಿ ಎಚ್.ಡಿ. ದೇವೇಗೌಡರು ಇದ್ದರು. ನನಗೂ ದೇವೇಗೌಡರಿಗೂ ಮಾತಿನ ಚಕಮಕಿ, ವಿರಸ ಏನಾದರೂ ಆಗಬಹುದೆಂದು ಸಭಿಕರು ನಿರೀಕ್ಷಿಸಿದಂತಿತ್ತು. ಅವತ್ತಿನ ಯಾವ ಘಟ್ಟದಲ್ಲೂ ಸಣ್ಣತನದಿಂದ ವರ್ತಿಸದೆ ಇದ್ದ ದೇವೇಗೌಡರ ಬಗ್ಗೆ ನನಗೆ ವೈಯಕ್ತಿಕ ಮನಸ್ತಾಪ ಇರುವುದು ಸಾಧ್ಯವೇ ಇರಲಿಲ್ಲ; ಸಾರ್ವಜನಿಕವಾಗಿ ಕೂಡ ದೇವೇಗೌಡರು ಅನೇಕ ರಾಜಕಾರಣಿಗಳಿಗಿಂತ ಒಳ್ಳೆಯವರು. ಹಬ್ಬದ ವಾತಾವರಣವಿದ್ದ ಆ ಸಂದರ್ಭದಲ್ಲಿ ಜನರನ್ನು ಅಚ್ಚರಿಗೊಳಿಸಲು ದೇವೇಗೌಡರಿಗೆ ಒಂದು ಹೊಗಳಿಕೆಯ ಕಾಣಿಕೆ ಕೊಟ್ಟೆ: ನಿಮ್ಮ ಜನತಾ ಸರ್ಕಾರ ಏನೇ ಮಾಡಲಿ, ಏನೇ ಬಿಡಲಿ–ಗಾಂಧೀಜಿಯ ಒಂದು ಆಶಯವನ್ನು ನೆರವೇರಿಸಿದೆ: ಇವತ್ತು ನಮ್ಮ ಕಲ್ಪನೆಗೆ ಕೂಡ ನಿಲುಕದಂಥ ಕುಗ್ರಾಮಗಳಲ್ಲಿ ಕೂಡ ಜನಕ್ಕೆ ಕುಡಿಯುವ ನೀರು ಕೊಟ್ಟಿದ್ದೀರಿ. ನಜೀರ್ ಸಾಬ್ ಒಬ್ಬರೇ ಪ್ರಯತ್ನಿಸಿದ್ದರೆ ಅದು ಆಗುತ್ತಿರಲಿಲ್ಲ; ಅದಕ್ಕೆ ನೀವೆಲ್ಲ ಕಾರಣರು. ನೀವೆಲ್ಲ ತೀರಾ ಅಪಾಯದ ಕೆಲಸಗಳನ್ನು ಮಾಡದಿದ್ದರೆ ಈ ಒಂದು ಅಂಶವಾದರೂ ಚರಿತ್ರೆಯಲ್ಲಿ ದಾಖಲಾಗಲಿದೆ–ಅಂದೆ. ಜನರಿಗೆ ಈ ಮಾತಿನಿಂದ ಸಂತೋಷವಾದಂತೆ ಕಂಡಿತು.

ಅದು ನನ್ನ ಒಂದೇ ದಿನದ ಭೇಟಿಯಾಗಿತ್ತು. ನಾನು ಅನೇಕ ಸಲ ಮಂಗಳೂರಿಗೆ ಹೋಗಿದ್ದರೂ ನೇತ್ರಾವತಿ ನದಿಯನ್ನು ನೋಡಿರಲಿಲ್ಲ. ಕಾಸರಗೋಡು ತಲುಪುವ ರಸ್ತೆಯಲ್ಲಿ ಹೋಗುತ್ತ ನೇತ್ರಾವತಿಯನ್ನು ದಾಟಿ ಮಂಗಳ ಗಂಗೋತ್ರಿಗೆ ಹೋದೆವು. ವಿಸ್ತಾರವಾಗಿ ಹಬ್ಬಿದ ಗದ್ದೆ, ಬಯಲು ದಾಟಿ ಮೋಹಕವಾಗಿ ಬಳುಕುವ ರಸ್ತೆಯ ಅಂಚಿನಲ್ಲಿ ಗುಡ್ಡದ ಮೇಲೆ ಮಂಗಳ ಗಂಗೋತ್ರಿ ಇದೆ. ಮರುದಿನ ನಾನು ಊರು ತಲುಪುವವರೆಗೂ ಸಮುದ್ರಕ್ಕೆ ಸಂಗಮಿಸುವ ಅಗಲ ದೇಹದ ನೇತ್ರಾವತಿ ಮತ್ತು ಮರಗಳ ನಡುವೆ ಅವಿತು ನೆಮ್ಮದಿಯಾಗಿರುವ ಮನೆಗಳು, ವಿದ್ಯೆಯ ಬಗ್ಗೆ ಆಸೆಯುಳ್ಳವರಂತೆ ಕಂಡ ಮಂಗಳಗಂಗೋತ್ರಿಯ ಸುಂದರ ಮುಖಗಳು–ನನ್ನ ಮನದಲ್ಲಿ ನೆಲೆಸಿದ್ದವು.

–ಸೆಪ್ಟೆಂಬರ್ 22, 1985

ಲಂಕೇಶ್ 77

ಒಂದು ಅಪೂರ್ವ ನಾಟಕ

• ಬಿ. ಚಂದ್ರೇಗೌಡ



ಎಲ್ಲೇ ಪೌರಾಣಿಕ ನಾಟಕವಾಡಿದರೂ ಅಲ್ಲಿಗೆ ಹೋಗಿ ನೋಡಿಬರುವ ಚಟವೊಂದು ನನ್ನಲ್ಲಿ ರೂಪುಗೊಂಡಿತ್ತು. ಅದಕ್ಕೆ ಕಾರಣರಾದವರು ನನ್ನ ಜೊತೆ ಎರಡು ಪೌರಾಣಿಕ ನಾಟಕದಲ್ಲಿ ಪಾತ್ರಧಾರಿಗಳಾಗಿ ನಟಿಸಿದ್ದ ಅಪೂರ್ವ ಕಲಾನಿಧಿಗಳು. ಅವರನ್ನು ಯಾಕೆ ಕಲಾನಿಧಿಗಳು ಎಂದು ಕರೆಯುತ್ತೇನೆಂದರೆ ಅವರಲ್ಲಿ ಒಂದಿಬ್ಬರು ಹೊರತುಪಡಿಸಿ ಮಿಕ್ಕವರೆಲ್ಲ ಸೂರ್ಯೋದಯವನ್ನೇ ಕಾಣದವರು. ಅವರೆಲ್ಲ ರಾತ್ರಿ ಒಂದು ಗಂಟೆಯವರೆಗೂ ಕುಡಿದು, ಮಧ್ಯಾಹ್ನ ಹನ್ನೆರಡು ಗಂಟೆಗೆ ಎದ್ದು, ಸ್ನಾನ ಮಾಡಿ, ಸಾಧ್ಯವಾದರೆ ಊಟ ಮಾಡಿ, ಆನಂತರ ತಮ್ಮ ದಂಧೆಗಳನ್ನು ಆರಂಭಿಸುತ್ತಿದ್ದರು. ಇದನ್ನು ಅಣಕಿಸಿದರೆ ಅವರು "ನಾವು ಅಂಬರೀಷ್ ಸಂಬಂಧಿಗಳು" ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.

ಇಂತಹ ಕಲಾನಿಧಿಗಳಿಗೆ ಕಲೆಯ ಆರಾಧನೆಗಿಂತಲೂ ಕಂಠಪೂರ್ತಿ ಕುಡಿದು ನಾಟಕದ ಸ್ಟೇಜನ್ನು ದಾಟಿ, ರಂಗದ ಹಿಂಭಾಗಕ್ಕೆ ಹೋಗಿ, ಪಾತ್ರಧಾರಿಗಳನ್ನು ಅಭಿನಂದಿಸಿ, ಸಾಧ್ಯವಾದರೆ ಸ್ತ್ರೀ ಪಾತ್ರಗಳನ್ನು ಅಪ್ಪಿ ಮುದ್ದಾಡಿ, ಪುರಾಣದ ವಾಸನೆ ಹೊತ್ತು ಬರುವುದೇ ಒಂದು ರೋಮಾಂಚನ ಕ್ರಿಯೆಯಾಗಿತ್ತು. ಒಮ್ಮೆ ಈ ಕಲಾನಿಧಿಗಳ ಜೊತೆಗೆ ಭದ್ರಾವತಿಯ ರಬ್ಬರ್ ಕಾಡಿಗೆ ಹೋಗಿದ್ದೆ ಅಲ್ಲಿ ನಡೆಯುತ್ತಿದ್ದ ನಾಟಕದ ಪಾತ್ರಧಾರಿಗಳ ಊರುಕೇರಿ ಕೇಳಿದರೆ ಎಲ್ಲರೂ ನಾಗಮಂಗಲದ ಆಸುಪಾಸಿನವರೇ ಆಗಿದ್ದರು.

ದುರ್ಯೋಧನ ತನ್ನ ಸ್ವಂತ ಖರ್ಚಿನಲ್ಲಿ ನರ್ತಕಿಯನ್ನು ಕರೆಸಿದ್ದ. ಅಲ್ಲದೆ ಅವನಿಗೆ ಚಾವಲ ಬೀಸಲು ಇಬ್ಬರು ತರುಣಿಯರನ್ನೂ ಕರೆತಂದಿದ್ದ. ಇದೆಲ್ಲಾ ಸರಿ, ಆದರೆ ಕಿಡಿಯಾಗಿರಬೇಕಾಗಿದ್ದ ದುರ್ಯೋಧನನ ಕಣ್ಣು ಮಂಕಾಗಿದ್ದವು. ಒಮ್ಮೊಮ್ಮೆ ಅರೆಗಣ್ಣಾಗುತ್ತಿದ್ದವು. ಇದನ್ನು ಅಟ್ಟೈಶ್ವರ್ಯದಿಂದ ಮೆರೆಯುತ್ತಿರುವ, ಅಹಂಕಾರದ ಅಮಲುಗಣ್ಣು ಎಂದು ಹೇಳಲು ಬರುತ್ತಿರಲಿಲ್ಲ. ಏಕೆಂದರೆ, ದುರ್ಯೋಧನನ ಸುತ್ತ ಲೋಕಲ್ ಎಣ್ಣೆಯ ಘಾಟು ಅಡರಿತ್ತು. ಇದರಿಂದ ನಾಟಕ ನೋಡುವ ಉತ್ಸಾಹ ಕಳೆದುಕೊಂಡ ನಾನು, ದರ್ಬಾರಿನ ಸೀನು ಮುಗಿಯುವ ಮುನ್ನವೇ ನನ್ನ ದೈತ್ಯ ಕಲಾನಿಧಿ ಗೆಳೆಯರೊಂದಿಗೆ ವಾಪಸ್ಸು ಬಂದುಬಿಟ್ಟೆ.

ಇದಾದ ಸುಮಾರು ದಿನಗಳ ನಂತರ "ಶಿವಮೊಗ್ಗದ ಹಾಲಿನ ಡೈರಿ ಹಿಂಭಾಗದ ಯಾವುದೋ ಊರಿನಲ್ಲಿ ರಾಮಾಯಣ ನಾಟಕವಿದೆ. ಹೋಗಿ ನೋಡಿಬರೋಣ ಎಂದು ಗೆಳೆಯರು ಹುರಿದುಂಬಿಸಿದರು. "ಆ ಊರಲ್ಲಿ ಅಮ್ಮನ ಹಬ್ಬವೂ ಇದೆ. ಮಾಂಸ-ಮದ್ಯದ ಸಮಾರಾಧನೆಯೂ ನಡೆಯುತ್ತದೆ. ಅಕಸ್ಮಾತ್ ಮಾಂಸ-ಮದ್ಯ ಸಿಗದಿದ್ದರೆ ನಾವೇ ತೆಗೆದುಕೊಂಡು ಹೋಗಿ, ಮರದ ಕೆಳಗೋ ಹಳ್ಳದ ಸಾಲಲ್ಲೊ ಕುಡಿದು, ಅಲ್ಲಿಗೇ ಊಟ ತರಿಸಿಕೊಂಡು, ನಂತರ ನಾಟಕ ನೋಡಿ ಬರೋಣ ಎಂದು ಹೊರಟೇಬಿಟ್ಟರು.

ಸುದೈವಕ್ಕೆ ಇವರಿಗೆ ಅನುಕೂಲ ಮಾಡಿಕೊಡುವ ಗೆಳೆಯರೂ ಆ ಊರಿನಲ್ಲಿ ಸಿಕ್ಕರು. ಅವರ ಜೊತೆಗಿನ ಇವರ ಆತ್ಮೀಯ ಸಂಭಾಷಣೆಯನ್ನು ಕೇಳಿ ನಾನು ದಂಗುಬಡಿದೆ. ಏಕೆಂದರೆ ಎಷ್ಟೋ ವರ್ಷಗಳಿಂದ ಒಂದೇ ತಟ್ಟೆಯಲ್ಲಿ ಉಣ್ಣುತ್ತಿದ್ದವರಂತೆ ಅವರೆಲ್ಲ ಮಾತನಾಡತೊಡಗಿದರು. ಒಂದು ಪೊದೆಯ ಮರೆಯಲ್ಲಿ ಎಲ್ಲರೂ ಕುಳಿತರು.

ದೂರದಲ್ಲಿ ನಾಟಕದ ಸ್ಟೇಜು ಜಗಮಗಿಸುತ್ತಿತ್ತು. ಅದೆಂತಹ ಅಪೂರ್ವ ಸೀನರಿ ಎಂದರೆ ಸ್ಟೇಜಿನ ಎರಡೂ ಬದಿಯ ಮೇಲ್ಭಾಗದಲ್ಲಿ ನಾಲ್ಕು ಟ್ಯೂಬ್‌ಲೈಟ್ ಕಟ್ಟಿದ ಚಕ್ರಗಳು ತಿರುಗುತ್ತಿದ್ದವು. ಅವು ಗಾಡಿ ಚಕ್ರದಂತೆ ತಿರುಗುತ್ತಲೇ ಇದ್ದವು. ಇಂತಹ ಅಸಂಬದ್ಧ ಲೈಟಿನಿಂದ ಕಂಗೊಳಿಸುತ್ತಿದ್ದ ಸ್ಟೇಜಿನ ಹೊರಮೈ ನಾಟಕದ ಒಳಾಂಗಣವನ್ನೇ ಡಲ್ಲು ಮಾಡಿತ್ತು.

ನಮ್ಮ ಕಲಾನಿಧಿಗಳು ರೆಡಿಯಾಗುವಷ್ಟರಲ್ಲಿ ನಾಟಕ ಶುರುವಾಯಿತು. ನಾನು ಹೊರಡಲು ಅವಸರಿಸಿದೆ. ಸಾಮಾನ್ಯವಾಗಿ ಸಾಮೂಹಿಕವಾಗಿ ಕುಡಿಯುವಾಗ ಲೋಬಿ ಮನಸ್ಸಿನವರು, ತನಗೆ ಕಡಿಮೆ ಎಣ್ಣೆ ಸಿಗುತ್ತದೆಂದು ಜಾಸ್ತಿ ಕುಡಿದುಬಿಡುತ್ತಾರೆ. ಇಂಥವರು ಔಟಾದರೆ ಇಡೀ ಪಾರ್ಟಿಯ ಕತೆ ಮುಗಿದಂತೆಯೇ. ಹಾಗೆ ಕುಡಿದವನನ್ನು ಸಾಗಿಸುವುದೇ ಒಂದು ನರಕದ ಕೆಲಸವಾಗುತ್ತದೆ. ಇದರ ಅನುಭವವಿದ್ದ ನಾನು ಎಷ್ಟೇ ಎಚ್ಚರಿಕೆ ವಹಿಸಿದರೂ ಒಬ್ಬ ಗೆಳೆಯ ಎದ್ದು ಬರಲಾರದೆ ಆಹಿನಲ್ಲಿ ಹೂತು ಹೋದವನಂತೆ ನನ್ನನ್ನೇ ನೋಡತೊಡಗಿದ. ಆಗ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡ ಇನ್ನಿಬ್ಬರು ಆತನನ್ನು ಎತ್ತಿ ತಮ್ಮೆರಡೂ ಭುಜದ ಮೇಲೆ ಅವನ ತೋಳು ಹಿಡಿದು ನಡೆಸಿಕೊಂಡು ಬರತೊಡಗಿದರು. ನನಗೆ ತುಂಬಾ ಗೌರವ ಕೊಡುತ್ತ ಒಂದಿಷ್ಟು ಅಳುಕನ್ನಿಟ್ಟುಕೊಂಡಿದ್ದ ಆ ಗೆಳೆಯ "ಡೋಂಟ್ ವರಿ ಚಂದ್ರು, ನಾನು ಚೆನ್ನಾಗಿದ್ದೀನಿ. ನೀವು ನಾಟಕ ನೋಡಿ. ನಾವಿಲ್ಲೇ ಲಾಸ್ಟಲ್ಲಿ ಕುಂತಗಂಡು ನೋಡ್ತಿವಿ ಎಂದ. ನಾನು ಸಿಟ್ಟಿನಿಂದ ಸ್ಟೇಜಿನ ಕಡೆ ಹೊರಟೆ.

ರಂಗದ ಮೇಲೆ ದಶರಥನ ದರ್ಬಾರು ನಡೆಯುತ್ತಿತ್ತು. ಇಡೀ ಸ್ಟೇಜು ಒಂದು ಸಣ್ಣ ಭೂಕಂಪಕ್ಕೆ ಸಿಕ್ಕಂತೆ ವಾರೆಯಾಗಿತ್ತು. ಕಡಿಮೆ ದುಡ್ಡಿಗೆ ಇಂತಹ ಸೀನರಿಯೇ ಅಲ್ಲವೆ ಸಿಗುವುದು ಎಂದುಕೊಂಡು ಒಳಗೆ ಹೋದೆ. ಎಲ್ಲೇ ಹೋದರೂ ನಮ್ಮ ಊರವರು ಸಿಗುವಂತೆ ನಮ್ಮೂರ ಸಣ್ಣಪಾಪಣ್ಣನ ಮಗ ಪರದೆ ಎಳೆಯುತ್ತಿದ್ದ. ಅವನಿಗೆ ನನ್ನನ್ನು ನೋಡಿ ಬಹಳ ಖುಷಿಯಾಯಿತು. ಅದ್ಯಾರಿಗೋ ನನಗೆ ಕಾಫಿ ತಂದುಕೊಡಲು ಆರ್ಡರ್ ಮಾಡಿದ. ನಾನು ದಶರಥನ ಸಿಂಹಾಸನ ನೋಡಿದೆ. ಆ ಸಿಂಹಾಸನವನ್ನು ಇಬ್ಬರು ಆತು ಹಿಡಿದುಕೊಂಡಿದ್ದರು. ಅವರೇನಾದರೂ ಬಿಟ್ಟರೆ ದಶರಥ ಹಿಂದಕ್ಕೆ ಕುಸಿದು ಬೀಳುವುದರಲ್ಲಿ ಯಾವ ಅನುಮಾನವೂ ಇರಲಿಲ್ಲ. ದಶರಥ ಕೈಯೂರಿಕೊಂಡಿದ್ದ ದಿಂಬು ಅಗಾಧವಾಗಿದ್ದರಿಂದ ಆತ ಅದರೊಳಗೆ ಹೂತುಹೋದಂತೆ ಕಾಣುತ್ತಿದ್ದ. ಅಂತಹ ಸಿಂಹಾಸನವನ್ನು ಮಾಡಿದವನಿಗೆ ಅಭಿನಂದನೆ ಹೇಳುತ್ತ ಪಾತ್ರಧಾರಿಗಳನ್ನು ಮಾತನಾಡಿಸಲು ಒಳಗೆ ಹೋದೆ.



ಅಲ್ಲಿ ಒಂದು ರೀತಿಯ ಸೀನರಿ ಸುಗಂಧ ಮೂಗಿಗೆ ಅಡವಿ ರೋಮಾಂಚನವಾಯಿತು. ಈ ಪೌರಾಣಿಕ ಪಾತ್ರಧಾರಿಗಳಿಗೆ ಬಣ್ಣ ಹಚ್ಚಿ, ವೇಷ ಬಿಗಿದು ಕಳಿಸುತ್ತಿದ್ದವನು ಒಬ್ಬ ಮುಸ್ಲಿಮ್. ಅವರು ಈ ಹಿಂದೆ ಸೀನರಿ ಇಟ್ಟು ಲಾಸಾಗಿ ಈಗ ಪ್ರಸಾದನ ಕಾಯಕ ಹಿಡಿದಿದ್ದರು. ನನ್ನನ್ನು ನೋಡಿದ ಕೂಡಲೇ "ನಿಮ್ಮ ನಾಟಕದಲ್ಲಿ ಪಾತ್ರಧಾರಿಗಳಿಗೆ ಬಣ್ಣ ಹಚ್ಚಿ ಒಡವೆ ತೊಡಸಕ್ಕೆ ಖುಷಿಯಾಗದು. ಪಾಪ, ಈ ಹುಡುಗರ ನೋಡಿ ಯಂಗವೆ" ಎಂದು ನಕ್ಕ. ಅವನ ಸಿಟ್ಟೆಲ್ಲವೂ ಕೈಕೇಯಿ ಪಾತ್ರಧಾರಿಯ ಮೇಲೆ ಕೇಂದ್ರೀಕೃತವಾಗಿತ್ತು. "ಆದರೆ ಕೈಕೇಯಿ ಪಾತ್ರಧಾರಿಯ ತಪ್ಪೇನೂ ಇಲ್ಲ, ಅವನಿಗೆ ಆ ಪಾತ್ರ ಕೊಟ್ಟ ಮಾಸ್ತರನದೇ ತಪ್ಪು" ಎಂದು ಅವರು ದೂರು ಹೇಳುತ್ತಾ, ಪಾತ್ರಧಾರಿಗಳಿಗೆ ಬಣ್ಣ ಹಚ್ಚುತ್ತಿದ್ದರು.

ಅಷ್ಟರಲ್ಲಿ ಸ್ಟೇಜಿನ ಮೇಲೆ ತನ್ನ ಪಾತ್ರ ಮುಗಿಸಿ ಬಂದ ವ್ಯಕ್ತಿಯೊಂದು ಬರಬರನೆ ಸೀರೆ ಬಿಚ್ಚಿ ಎಸೆದು, ತಲೆಗೆ ಕೈಹಾಕಿ ವಿಗ್ ತೆಗೆದು ಪಕ್ಕಕ್ಕೆ ಮಡಗಿದ. ಬೋಳು ತಲೆ! ಬಿಗಿಯಾಗಿದ್ದ ರವಿಕೆಯಡಿಯ ಎದೆಯಿಂದ ಹಿಡಿದು ಹೊಕ್ಕಳಿಕ್ಕಿಂತ ಕೆಳಗೆ ಇಕ್ಕಿದ್ದ ಚೆಡ್ಡಿಯವರೆಗೂ ಅಗಾಧವಾಗಿ ಹರಡಿದ್ದ ಬಿಳಿ ಕೂದಲು! ಅವನನ್ನು ನೋಡಿ ನಗು ತಡೆದುಕೊಂಡ ನಾನು "ನಿಮ್ಮದು ಯಾವ ಪಾತ್ರ?"ಎಂದೆ. "ಕೈಕೇಯಿ ಪಾತ್ರ" ಎಂದ. ಮುಂದಿನ ಎರಡು ಹಲ್ಲಿರಲಿಲ್ಲ, ಮತ್ತೂ ನಗು ಬಂತು. ಅವನ ಕೈ ಮೇಲಿನ ರೋಮ ಕಾಣದಂತೆ ಬಣ್ಣ ಉಜ್ಜಿದ್ದರಿಂದ ಗರಿಕೆ ಮೇಲೆ ಬೂದಿ ಚೆಲ್ಲಿದಂತಾಗಿತ್ತು. ಇಂಥ ವ್ಯಕ್ತಿಗೆ ಅದು ಹೇಗೆ ಕೈಕೇಯಿ ಪಾತ್ರ ಕೊಟ್ಟ ಈ ಮಹಾನುಭಾವ ಎಂಬ ಯೋಚನೆಯಾಯಿತು. ಆ ಪಾತ್ರಧಾರಿಯನ್ನು ಹಾಗೇ ಗಮನಿಸಿದೆ. ಅವನಲ್ಲಿ ಒಂದಿಷ್ಟು ವೈಯಾರವಿತ್ತು. ಬಹುಶಃ ಅದಕ್ಕೇ ಆತನಿಗೆ ಕೈಕೇಯಿ ಪಾತ್ರ ಕೊಟ್ಟಿರಬೇಕು ಎಂದುಕೊಂಡೆ. ಶ್ರೀರಾಮಚಂದ್ರನನ್ನು ಕಾಡಿಗೆ ಕಳುಹಿಸುವಂತೆ ಹಠ ಹಿಡಿದ ಹೆಣ್ಣು ರಕ್ಕಸಿಯೇ ಇರಬೇಕೆಂದು ನಾಟಕದ ಮಾಸ್ತರು ಯೋಚಿಸಿದ್ದರೂ, ಮುದಿಯನಾದ ದಶರಥ ಕೈಕೇಯಿಗೆ ಒಲಿಯಬೇಕಾದರೆ ಆಕೆ ಸುಂದರಿಯಾಗಿರಬೇಕಲ್ಲವೆ ಎಂದು ನನಗನ್ನಿಸಿತು. ಎತ್ತಮುಂದಾಗಿ ಯೋಚಿಸಿದರೂ ಉತ್ತರ ಸಿಗದೆ, ಬಹುಶಃ ಊರಲ್ಲಿ ಕೈಕೇಯಿ ಪಾತ್ರ ಮಾಡಲು ಯಾರೂ ಮುಂದೆ ಬಾರದೆ ಈ ರೋಮರಾಶಿಯೇ ಮುಂದೆ ಬಂದಿರಬೇಕೆಂದುಕೊಂಡೆ.

ಇದೇ ನಾಟಕದಲ್ಲಿ ರಾಮ ಲಕ್ಷ್ಮಣರ ಪಾತ್ರಧಾರಿಗಳೂ ಅವಳಿಜವಳಿಯಂತಿದ್ದರು. ಅವರಿಬ್ಬರು ರೈತರ ಮಕ್ಕಳಾದ್ದರಿಂದ ದಗ್ಗರಿ ಮೂಳೆಯನ್ನು ಎಣಿಸಬಹುದಾಗಿತ್ತು. ರಟ್ಟೆರಿಂದ ದಗ್ಗರಿ ಮೂಳೆಯನ್ನು ಎಣಿಸಬಹುದಾಗಿತ್ತು. ಗಾತ್ರದ ಆ ಹುಡುಗರಿಗೆ ಅಗಾಧವಾದ ಹೂವಿನ ಹಾರ ಹಾಕಿದ್ದರು. ಅವುಗಳ ಭಾರಕ್ಕೆ ಆ ಹುಡುಗರು ಬೆನ್ನು ಗೂನಿಸಿದ್ದರು. ಸದಾ ಬೀಡಿ ಸೇದುವ ಆ ಹುಡುಗರು ಆ ದಿನ ಸಿಗರೇಟು ಸೇದುತ್ತಿದ್ದರು. ತನ್ನ ಸೀನು ಮುಗಿಸಿ ಬಂದಕೂಡಲೇ ಸಿಗರೇಟು ಹಚ್ಚಿದ ರಾಮ, ನನಗೂ ಒಂದು ಕೊಟ್ಟು, ನಾಟಕ ಕಲಿತ ಕಷ್ಟ ಹೇಳತೊಡಗಿದ. "ನೋಡಿ ಸಾರ್, ನಾಟಕದ ಪ್ರಾಕ್ಟೀಸು ಶುರುವಾದ ಹದಿನೈದೇ ದಿನಕ್ಕೆ ನಮ್ಮಪ್ಪ ಸತ್ತೋದ. ನಾಟಕಾನೆ ನಿಂತೋಗಿತ್ತು, ಕಡಿಗೆ ನಾನು ಬುಡಬಾರ್ದು ಅಂತ ತಿರಗ ಸುರು ಮಾಡಿಸ್ತೆ, ಇಲ್ದಿದ್ರೆ ನಾಟಗನೂ ಇಲ್ಲ ಏನೂ ಇಲ್ಲ" ಎಂದು ತನ್ನ ಸಾಹಸ ಹೇಳಿಕೊಂಡ. ಆ ರೈತ ಮಗನ ದೃಷ್ಟಿಯಲ್ಲಿ ಅದೊಂದು ಅಪೂರ್ವ ಸಾಧನೆಯಾಗಿತ್ತು. ಆದರ ಪರಿಣಾಮವೇ ಐಟಿಸಿ ಕಿಂಗು!

ನಂತರ ವೇದಿಕೆಯ ಎದುರು ಕುಳಿತು ನಾಟಕ ನೋಡುವ ಕುತೂಹಲದಿಂದ ಹಾರ್ಮೋನಿಯಂ ಮಾಸ್ತರ ಪಕ್ಕ ಕುಳಿತೆ. ಮಾಸ್ತರು ಬೆಳಗಿನ ಜಾವದವರೆಗೂ ಮೈಲೇಜ್ ಕೊಡುವಷ್ಟು ಎಣ್ಣೆ ತುಂಬಿಕೊಂಡು ತೂಗುತ್ತಿದ್ದರು. ಯಾಂತ್ರಿಕವಾಗಿ ಅವರ ಕೈಗಳು ಹಾರ್ಮೋನಿಯಂಅನ್ನು ನುಡಿಸುತ್ತಿದ್ದವು. ಅವರ ಪಕ್ಕದಲ್ಲಿ ಕೂತಿದ್ದ ನುರಿತ ವೈಯಲಿನ್, ಕ್ಲಾರಿಯೋನೆಟ್ ಮತ್ತು ಕ್ಯಾಸಿಯೋ ಕಲಾವಿದರು ಹಾರ್ಮೋನಿಯಂ ಮಾಸ್ತರ ಕೈಹಿಡಿದು ಮುನ್ನಡೆಸುತ್ತಿದ್ದರು.

ಲಂಕೇಶ್ 77 ವಿಶೇಷಾಂಕ

ಪಾತ್ರಧಾರಿಗಳ ಒತ್ತಾಯದ ಮೇರೆಗೆ ಎಲ್ಲರಿಗೂ ಹಾಡು ಹಾಕಿದ್ದರಿಂದ ಒಂದು ಮಾತಿನ ನಂತರ ಒಂದು ಹಾಡು - ಹೀಗೆ ನಾಟಕ ಶ್ಯಾಣೆ ಎಳೆಯುತ್ತಿತ್ತು. ರಾಮಾಯಣ ನಾಟಕದಲ್ಲಿ ಇರುವ ಎಲ್ಲಾ ಹಾಡುಗಳು ಮುಗಿದಿದ್ದವೋ ಏನೋ, ಅದಕ್ಕೆ ಸೀತೆ ಪಾತ್ರಧಾರಿಗೆ "ಚಂಗುಚಂಗೆಂದು ಹಾರುವಾ ರಂಗುರಂಗಿನ ಈ ಜಿಂಕೆ" ಎಂಬ ಸಿನಿಮಾ ಹಾಡನ್ನು ಬಾಯಿಪಾಠ ಮಾಡಿಸಿದ್ದರು. ಇಂತಹ ಹಾಡನ್ನು ಸುಮ್ಮನೆ ಹಾಡುವುದಲ್ಲಾ ಎಂದು ಸೀತೆಗೆ ಡ್ಯಾನ್ಸ್ ಕೂಡ ಹೇಳಿಕೊಟ್ಟಿದ್ದ. ಅದರ ಫಲವಾಗಿ ಸೀತೆ ಎರಡು ಬಾರಿ ಚಂಗುಚಂಗೆದು ಹಾರಿ ಹಾಡು ಶುರು ಮಾಡುತ್ತಿದ್ದ.

ಇದನ್ನು ಸಹಿಸಲಾಗದೆ ನಾನು ಸೀತೆ ಗಂಭೀರವಾಗಿರಬೇಕೆಂದು ಹೇಳಿಕೊಡಲು ಎದ್ದು ಒಳಗೆಹೋದೆ. ಅಷ್ಟರಲ್ಲಿ ಶೂರ್ಪನಖಿ ಪಾತ್ರಧಾರಿ ಬಂದು ಮರೆಯಲ್ಲಿ ನಿಂತಿದ್ದ. ಆತನ ಕೃತಕ ಸ್ತನಗಳನ್ನು ಊರಿನ ಕುಡುಮಿಗಳು ಮುಟ್ಟಿ ಮುಟ್ಟಿ ಖುಷಿಪಡುತ್ತಿದ್ದರು. ಅವನೂ ಅದಕ್ಕೆ ಅವಕಾಶ ಮಾಡಿಕೊಡುತ್ತ ಶೂರ್ಪನಖಿ ಪಾತ್ರಕ್ಕೆ ಸರಿಯಾದ ನ್ಯಾಯ ಒದಗಿಸುತ್ತಿದ್ದ. ಪಾತ್ರಧಾರಿಗಳು ಪರಿಪೂರ್ಣವಾಗಿ ತಯಾರಾಗಿದ್ದರಿಂದ ಈ ಸಮಯದಲ್ಲಿ ಯಾರಿಗೆ ಏನನ್ನೂ ಹೇಳಿಕೊಡಬಾರದೆಂಬ ವಿವೇಕ ಎಚ್ಚರಿಸಿದ್ದರಿಂದ ನಾನು ಸುಮ್ಮನಾದೆ.

ರಂಗದ ಮೇಲೆ ಶೂರ್ಪನಖಿ ಲಕ್ಷ್ಮಣನನ್ನು ಪೀಡಿಸತೊಡಗಿದಳು. ಅದಕ್ಕೆ ಪ್ರತ್ಯುತ್ತರವಾಗಿ ಮಾಸ್ತರು ಲಕ್ಷ್ಮಣನಿಗೆ ಏನನ್ನೂ ಹೇಳಿಕೊಟ್ಟಿರಲಿಲ್ಲವೇನೊ. ಲಕ್ಷ್ಮಣ ದನಗದರಿದಂತೆ 'ಏಯ್' ಎಂದು ಕೈ ಕೊಸರುತ್ತಿದ್ದ. ಪರದೆ ಹಿಂದಿದ್ದವರು, ಸೈಡಲಿದ್ದವರೆಲ್ಲಾ ಎರಡೂ ಪಾತ್ರಧಾರಿಗಳನ್ನು ಪುಸಲಾಯಿಸುತ್ತ ಕೇಕೆ ಹಾಕುತ್ತಿದ್ದರು. ಇದರಿಂದ ಹೊರಗಿನ ಪ್ರೇಕ್ಷಕರಿಗೆ ತೊಂದರೆಯಾಗಬಹುದೆಂಬ ಅರಿವೇ ಅವರಿಗಿರಲಿಲ್ಲ.

ಸಾಮಾನ್ಯವಾಗಿ ಪ್ರೇಕ್ಷಕರು ರಾಮಾಯಣ ನಾಟಕದಲ್ಲಿ ಕಾಯುವುದು ಆಂಜನೇಯನಿಗಾಗಿ. ಏಕೆಂದರೆ ಅವನು ಸಂಗೀತಗಾರ. ಈ ಪಾತ್ರಕ್ಕೆ ಚೆನ್ನಾಗಿ ಹಾಡಲು ಬರುವ ಪಾತ್ರಧಾರಿಯನ್ನೇ ಆರಿಸುತ್ತಾರೆಂದು ಆಂಜನೇಯನನ್ನು ನೋಡಲು ನಾಟಕ ಪ್ರೇಮಿಗಳು ಕಾದಿರುತ್ತಾರೆ. ಆದರಲ್ಲೂ ಆತ ರಾಮಲಕ್ಷ್ಮಣರು ಕಾಣಿಸಿಕೊಂಡಾಗ ಹಾಡುವ ರಾಗ ಮಾಲಿಕೆ ರಂಗಭೂಮಿಯಲ್ಲಿ ತುಂಬ ಹೆಸರು ಮಾಡಿರುವ ಹಾಡು. ಆ ಪ್ರಥಮ ಹಾಡಿನಲ್ಲೇ ಆಂಜನೇಯನ ಹಾಡುಗಾರಿಕೆ ಪತ್ತೆಯಾಗಿಬಿಡುತ್ತದೆ.

ರಂಗದ ಮೇಲೆ ನಮ್ಮ ಈ ಆಂಜನೇಯ ರಾಮ ಲಕ್ಷ್ಮಣರನ್ನು ಭೇಟಿಯಾಗಲು ನಿಂತಿದ್ದ. ರಾಗಮಾಲಿಕೆ ಇವನಿಗಿರಲಿ ಈತನ ಮಾಸ್ತರಿಗೂ ಬರುತ್ತಿರಲಿಲ್ಲವೇನೊ. ರಾಮ ಲಕ್ಷ್ಮಣರು ಇದ್ದಲ್ಲಿಗೆ ಈ ಆಂಜನೇಯ "ಜೈ ರಘುವೀರ ಸಮರ್ಥ ಎಂದು ನೆಗೆದುಬಿಟ್ಟ. ಆಗ ಅವನ ಕಾಲಿಗೆ ಸಿಕ್ಕ ವೈರು ಕಿತ್ತು ಹೋಗಿ ಬಣ್ಣದ ಬೆಳಕು ನೀಡುವ ಬಲ್ಬು ಆರಿಹೋಯಿತು. ಅದನ್ನು ಸರಿಮಾಡಲು ಬಂದ ಒಬ್ಬ ಲೈಟಾಗಿ ಕರೆಂಟ್ ಹೊಡೆಸಿಕೊಂಡು ಥೇಟ್ ಕೋತಿಯಂತಾಡಿದ.

ರಾಮಲಕ್ಷ್ಮಣರನ್ನು ಕಂಡ ಆಂಜನೇಯ ತನ್ನ ಸಂಭ್ರಮದ ಜೊತೆಗೆ ವಿಪರೀತ ಮೈಕೈ ಕೆರೆದುಕೊಳ್ಳುತ್ತಿದ್ದ. ಆತ ಪಾತ್ರ ಮುಗಿಸಿ ಇತ್ತ ಬಂದಾಗ "ನೋಡಪ್ಪ ಆಂಜನೇಯ ಉಳಿದ ಕೋತಿಗಳಂತೆ ಮೈಕೈ ಕೆರೆದುಕೊಳ್ಳುತ್ತಿರಲಿಲ್ಲ. ಆತ ಗಂಭೀರ ವ್ಯಕ್ತಿ. ನೀನು ಒಂದು ಸೆಕೆಂಡೂ ಬಿಡುವಿಲ್ಲದಂತೆ ಬಾಲದ ಸಮೇತ ಮೈ ಕೆರೆಕೋತಿಯಲ್ಲಾ, ಅದ ಬುಡಪ್ಪ" ಎಂದೆ. "ಬುಡಂಗಿಲ್ಲ ಸಾ, ಮೇಷ್ಟ್ರ ಬೈತರೆ" ಎಂದ.

ಆಂಜನೇಯ ಬಂದಾಗ ಅರ್ಧ ರಾತ್ರಿ ಮೀರಿದ್ದರಿಂದ ಪ್ರೇಕ್ಷಕರ ಕಡೆ ನೋಡಿದೆ. ಆಶ್ಚರ್ಯ! ರಾಮಾಯಣ ಯುದ್ಧದಲ್ಲಿ ಮಡಿದವರಂತೆ ಇಡೀ ಊರೇ ಅಸ್ತವ್ಯಸ್ತವಾಗಿ ಮಲಗಿಬಿಟ್ಟಿತ್ತು! ಗಾಯಾಳುಗಳಂತೆ ಅಲ್ಲಲ್ಲಿ ಕೆಲವರು ಕುಳಿತಿದ್ದರು. ನನ್ನ ಜೊತೆ ಬಂದವರನ್ನು ಹುಡುಕಿ ಏಳಿಸಿಕೊಂಡು ಬೆಳಗಿನ ಜಾವಕ್ಕೆ ಶಿವಮೊಗ್ಗ ಸೇರಿಕೊಂಡೆ.

ಒಂದೆರಡು ದಿನಗಳ ನಂತರ, ಶಿವಮೊಗ್ಗದ ಎಸ್ಪಿ ದೊರೆಸ್ವಾಮಿ ನಾಯಕ್ ಅವರು ನನಗೆ ಬರಹೇಳಿ ಕಳುಹಿಸಿದರು. ಈ ಸಾಹೇಬರು ನಮ್ಮ ನಾಟಕದ ಉದ್ಘಾಟನೆಗೆ ಬಂದಿದ್ದಾಗ ಕರ್ಣನ ಹಾಡು ಹೇಳಿ ನಮ್ಮಲ್ಲಿ ಅಚ್ಚರಿ ಮೂಡಿಸಿದ್ದರು. ಆ ಕಾರಣಕ್ಕೆ ಅಳುಕದೆ ಅವರಲ್ಲಿಗೆ ಹೋದಾಗ "ಬನ್ನಿ ಚಂದ್ರೇಗೌಡ್ರೆ, ನಾವೊಂದು ನಾಟಕ ಆಡೋಣ. ದಾನಶೂರ ಕರ್ಣ. ನಾನು ಕರ್ಣನ ಪಾತ್ರ ಮಾಡ್ತಿನಿ ನೀವು ಕೃಷ್ಣನ ಪಾತ್ರ ಮಾಡಿ. ಅಭಿಮನ್ಯುವಿನ ಸಾವು ಮತ್ತು ಕರ್ಣನ ಸಾವು - ಎರಡೇ ಮುಖ್ಯವಾದ ಘಟನೆ ಮೇಲೆ ನಾಟಕ ಇರಲಿ. ಪ್ಲಾಟನ್ನೂ ತರಿಸಿದ್ದಿನಿ ಎಂದು ಅದನ್ನು ನನ್ನ ಕೈಗಿತ್ತರು.


"ನಾಟಕದ ಮೇಷ್ಟ್ರು ಯಾರು ಸಾರ್?" ಎಂದೆ. ಅವರು ಹೇಳಿದರು. ನಾನು ಬೆಚ್ಚಬಿದ್ದೆ. ಕಳೆದ ವಾರವಷ್ಟೇ ಆ ನಾಟಕದ ಮೇಷ್ಟ್ರೆ ಕಲಿಸಿದ್ದ ರಾಮಾಯಣ ನಾಟಕ ನೋಡಿ ಬಂದಿದ್ದ ನಾನು ಅದರಿಂದ ಇನ್ನೂ ಸುಧಾರಿಸಿಕೊಳ್ಳುತ್ತಿದ್ದೆ. ಅದಕ್ಕೆ ನಾನು "ಆತ ತುಂಬಾ ಕುಡಿತಾನೆ ಸಾರ್. ಸಂಗೀತನೂ ಇಲ್ಲ" ಎಂದೆ. "ಕಲಾವಿದರು ಕುಡಿಯದೇನು ತಪ್ಪಲ್ಲ. ಪಾಪ ಕುಡಿದುಕೊಳ್ಳಲಿ ಬಿಡಿ. ಆತನತ್ರ ಸಂಗೀತ ಇಲ್ಲ ಅಂದ್ರೆ ನಾವೇ ಹಾಡುಗಳನ್ನು ಸೇರಿಸಿಕೊಳ್ಳೋಣ. ನಮ್ಮ ಇಲಾಖೇಲೂ ಒಳ್ಳೆ ಕಲಾವಿದರಿದ್ದಾರೆ. ಎಲ್ಲಾ ಸೇರಿಕೊಂಡು ನಾಟಕ ಶುರುಮಾಡೋಣ" ಎಂದ ದೊರೆಸ್ವಾಮಿ ನಾಯಕ್ ಅವರು ನಾಟಕ ಆಡಲು ರೆಡಿಯಾಗಿಯೇಬಿಟ್ಟರು. ಅಲ್ಲದೆ ಅಭಿಮನ್ಯು ಮತ್ತು ಕರ್ಣರೆ ಪ್ರಧಾನವಾಗಿರುವ ಹೊಸ ಪ್ಲಾಟು ರೆಡಿಮಾಡುವ ಜವಾಬ್ದಾರಿಯನ್ನು ನನ್ನ ಮೇಲೆ ಹಾಕಿದರು.

ನಾನು ಪೊಲೀಸರೊಟ್ಟಿಗೆ ಸೇರಿ ನಾಟಕ ಆಡುವ ಪರಿಸ್ಥಿತಿಯನ್ನು ನೆನೆದು, ಅದಕ್ಕೆ ಸಮಾಜ ಮತ್ತು ಪತ್ರಕರ್ತರಿಂದ ಬರುವ ಪ್ರತಿಕ್ರಿಯೆಯನ್ನು ಅಂದಾಜಿಸಿ ಅಂಜಿಕೊಂಡು ಒದ್ದಾಡುತ್ತಿದ್ದಾಗ ಎಸ್ಪಿ ದೊರೆಸ್ವಾಮಿ ನಾಯಕರಿಗೆ ದಿಢೀರ್ ವರ್ಗಾವಣೆಯಾಗಿಬಿಟ್ಟಿತು.

ನಾನು ಕರ್ಣನನ್ನು ಬೀಳ್ಕೊಟ್ಟ ಕೃಷ್ಣನಂತೆ ಸಮಾಧಾನದ ನಿಟ್ಟುಸಿರುಬಿಟ್ಟೆ!

ವಿಲಾಸಿ ಪ್ರವೃತ್ತಿಯ ವಿಜಯ 'ಮಲೀನ'ವಾಗಿದ್ದು

ವಿಜಯ ಮಲ್ಯನ ಹೆಸರನ್ನು ಹಿಂದಿ-ಇಂಗ್ಲಿಷ್ ಟಿವಿಯವರು ಯಾವಾಗಲೂ 'ಮಲೀಯಾ' ಎಂದು ತಪ್ಪಾಗಿ ಉಚ್ಚರಿಸುತ್ತಿದ್ದದ್ದು ಈಗ ಸರಿಯೆನಿಸುತ್ತಿದೆ. ಮಲ್ಯ ಎಂಬ ಹೆಸರು ಮಲೀನವಾಗಿದೆ. ಯಾವುದೇ ಉದ್ಯಮಿಯು ಹೊಸದಾಗಿ ವಿಮಾನ ಯಾನ ಕಂಪೆನಿ ಸ್ಥಾಪಿಸುವಾಗ ಮೊಟ್ಟಮೊದಲಿಗೆ ಆರಿಸುವುದು ಆ ಕ್ಷೇತ್ರದ ಆರ್ಥಿಕ ತಜ್ಞರನ್ನು. ಎರಡನೆಯದಾಗಿ ಆರಿಸುವುದು ತಾಂತ್ರಿಕ ತಜ್ಞರನ್ನು. ನಂತರ ನೇಮಿಸುವುದು ಪಾಯ್‌ಲೆಟ್‌ಗಳನ್ನು, ಕಮರ್ಷಿಯಲ್ ಪರಿಣತರನ್ನು ಹಾಗೂ ಗ್ರೌಂಡ್ ಸಿಬ್ಬಂದಿ. ಕೊಟ್ಟಕೊನೆಯದಾಗಿ ಆರಿಸುವುದು ಫ್ಲೈಟ್ ಅಟೆಂಡೆಂಟ್ಸ್ ಹಾಗೂ ಏರ್-ಹಾಸ್ಟೆಸ್‌ಗಳನ್ನು.



ಆದರೆ ವಿಜಯ ಮಲ್ಯ ಮೊಟ್ಟಮೊದಲಿಗೆ ಆರಿಸಿದ್ದು ಡಜನ್‌ಗಟ್ಟಲೆ ಏರ್-ಹಾಸ್ಟೆಸ್‌ಗಳನ್ನು. ಅವರ ಸೊಂಟಕ್ಕೆ ಕೈಹಾಕಿ ಫೋಟೋ ತೆಗೆಸಿ ಬಿಜಿನೆಸ್ ಪತ್ರಿಕೆಗಳಲ್ಲೆಲ್ಲಾ ಹಾಕಿಸಿಕೊಂಡಿದ್ದು ಇದೇ ಮಲ್ಯ. ಮಲ್ಯನ ಇಂತಹ ವಿಲಾಸಿಪ್ರವೃತ್ತಿ ಕಂಡು ಒಂಬತ್ತು ವರ್ಷಗಳ ಹಿಂದೆ ಈತ ವಿಮಾನಯಾನ ಕಂಪೆನಿ ಸ್ಥಾಪಿಸುವಾಗಲೇ ಪರಿಣತರು ಹೇಳಿದ್ದರು - 'ವಾಯುಯಾನ ಉದ್ಯಮವು ಶರಾಬು ಮಾರಿ, ರೇಸ್ ಕುದುರೆ ಓಡಿಸಿದ್ದಷ್ಟು ಸುಲಭವಲ್ಲ, ಕೋಕಿಲಾಲ ಶರಾಬು 'ಮಲ್ಲ' ಬೇಗದಲ್ಲೇ ಸಂಕಟದಲ್ಲಿ ಸಿಲುಕುತ್ತಾನೆ' ಎಂದು.

ವಿಜಯ ಮಲ್ಯನ ಪ್ರದರ್ಶನಕಾರಿ ಬುದ್ಧಿ ಹಾಗೂ ಈತನ ತಂದೆ ವಿಠ್ಠಲ್ ಮಲ್ಯರ ಸಾತ್ವಿಕತೆ ಕುರಿತು ಒಂದು ಒಳ್ಳೆಯ ಕತೆಯಿದೆ. ವಿಜಯ ಮಲ್ಯ ಇಪ್ಪತ್ತರ ಹರೆಯದಲ್ಲಿದ್ದಾಗ ಒಮ್ಮೆ ಮಂಗಳೂರಿನ ಹತ್ತಿರ ಅವರ ಹಿರಿಯರ ಊರಿನಲ್ಲಿದ್ದ ವೆಂಕಟರಮಣ ದೇವಸ್ಥಾನಕ್ಕೆ ತನ್ನ ತಂದೆಯೊಂದಿಗೆ ಭೇಟಿ ಕೊಟ್ಟಿದ್ದ. ಆಗ ಅಲ್ಲಿಯ ಪುರೋಹಿತರು ದೇವಸ್ಥಾನದ ಹಳೇ ಘಂಟೆ ಒಡೆದುಹೋಗಿದ್ದು ಒಂದು ಹೊಸ ಘಂಟೆ ದಾನ ಮಾಡಬೇಕೆಂದು ವಿಠ್ಠಲ್ ಮಲ್ಯರನ್ನು ಕೇಳಿಕೊಂಡರಂತೆ. ತಕ್ಷಣವೇ ನಡುವೆ ಬಾಯಿ ಹಾಕಿದ ವಿಜಯ ಮಲ್ಯ ಅಲ್ಲೇ ಇದ್ದ ತನ್ನ ಸೆಕ್ರೆಟರಿಯನ್ನು ಕರೆದು ದೇವಸ್ಥಾನಕ್ಕೆ ನೂರು ಘಂಟೆ ದಾನ ಮಾಡಲು ಹೇಳಿದನಂತೆ. ಆಗ ಅವನ ತಂದೆ ವಿಠ್ಠಲ್ ಮಲ್ಯರು ಹೇಳಿದರಂತೆ - 'ಮಗನೇ ನಿನಗೆ ನೂರು ಘಂಟೆ ಕೊಡುವ ಶಕ್ತಿಯಿದೆ ನಿಜ. ಆದರೆ ಈ ದೇವಸ್ಥಾನದ ಛಾವಣಿಯಲ್ಲಿ ಅಷ್ಟೊಂದು ಘಂಟೆ ನೇತಾಡಿಸಲು ಸ್ಥಳ ಇದೆಯೇ? ಮೇಲಾಗಿ ಅರ್ಚಕರು ಕೇಳಿದ್ದು ಮತ್ತು ದೇವಸ್ಥಾನಕ್ಕೆ ಬೇಕಿರುವುದು ಒಂದು ಘಂಟೆ ಮಾತ್ರ. ಎಲ್ಲಿಯೇ ಆಗಲಿ ಎಷ್ಟು ಅಗತ್ಯವಿದೆಯೋ ಅಷ್ಟನ್ನು ಮಾತ್ರ ಮಾಡಬೇಕು, ಅದು ದೇವಸ್ಥಾನವಿರಲಿ, ಮನೆಯಿರಲಿ ಅಥವಾ ಉದ್ಯಮವೇ ಆಗಿರಲಿ. ದೇವಸ್ಥಾನಗಳು ಭಕ್ತಿ ಕೇಂದ್ರವೇ ಹೊರತು ವಾಣಿಜ್ಯ ಮಳಿಗೆಗಳಲ್ಲ, ಇಲ್ಲಿ ನಮ್ಮ ಸಂಪತ್ತಿನ ಅನಗತ್ಯ ಪ್ರದರ್ಶನ ಬೇಕಿಲ್ಲ"



ವಿಠ್ಠಲ್ ಮಲ್ಯರು ಅಂದು ಹೇಳಿದ ಎರಡು ವಿಷಯಗಳು ಇಂದು ನಿಜವಾಗಿವೆ. ಒಂದನೆಯದಾಗಿ ವಿಜಯಮಲ್ಯನ ಶೋ ಬಾಜಿ ಹಾಗೂ ದೂರದೃಷ್ಟಿ ಕೊರತೆಯಿಂದಾಗಿ ಕಿಂಗ್‌ಫಿಷರ್‌ನ ರೆಕ್ಕೆ ಮುರಿದಿದೆ. ಎರಡನೆಯದಾಗಿ ಆತನ ತವರು ದಕ್ಷಿಣ ಕನ್ನಡ ಜಿಲ್ಲೆಯ ಧಾರ್ಮಿಕ ಕ್ಷೇತ್ರಗಳು ಸಂಪೂರ್ಣವಾಗಿ ಮುಂಬೈಯ ಉದ್ಯಮಿಗಳ ಕಪ್ಪು ಹಣದ ಪ್ರದರ್ಶನದ ವಾಣಿಜ್ಯ ಮಳಿಗೆಗಳಾಗಿ ಪರಿವರ್ತಿತವಾಗಿವೆ. ಹಾಗೆಯೇ ಇಲ್ಲಿಯ ಪುರೋಹಿತರು ಹಾಗೂ ಸ್ವಾಮೀಜಿಗಳೆಲ್ಲಾ ಅತ್ಯಂತ ಯಶಸ್ವಿ ಸೇಲ್ಸ್‌ಮನ್‌ಗಳಾಗಿದ್ದಾರೆ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಪಿಡಿಎಫ್ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.


ಮಲ್ಯನ ಶರಾಬಿನ ನಶೆಗಿಂತ ಧಾರ್ಮಿಕ ಗುರುಗಳು, ಮುಲ್ಲಾಗಳು ಹಬ್ಬಿಸುವ ಧರ್ಮದ ಅಮಲು ಸಮಾಜಕ್ಕೆ ಹೆಚ್ಚು ಹಾನಿಕಾರಕ ಎಂದು 'ಲಂಕೇಶ್'ನಲ್ಲಿ ಇಸ್ಮತ್ ಫಜೀರ್‌ರ ಪತ್ರ ಓದಿದಾಗ ಅರ್ಥವಾಗುತ್ತದೆ. ಭಾರತದ ಎಲ್ಲಾ ನಗರಗಳಲ್ಲೂ ಬೀದಿ ವ್ಯಾಪಾರಿಗಳಲ್ಲಿ ಶೇ.30ಕ್ಕೂ ಹೆಚ್ಚು ಇರುವುದು ಬಡ ಮುಸ್ಲಿಮರು. ದಾರುಲ್ ಉಲೂಮ್ ದೇವ್‌ಬಂದ್‌ನ ಮುಲ್ಲಾಗಳ 'ಬೀದಿ ವ್ಯಾಪಾರ ಹರಾಂ' ಎಂಬ ಹುಕುಂ, ಬಡವರ ಅನ್ನವನ್ನೇ ಕಸಿಯುತ್ತದೆ. ಬಡವರ ವಿರುದ್ಧದ ಯಾವುದೇ ಫತ್ವಾ ದೇವರ ವಿರುದ್ಧದ ಫತ್ವಾ ಎಂದೇ ಪರಿಗಣಿತವಾಗುತ್ತದೆ. 'ಎಲ್ಲಾ ಧರ್ಮಗಳಲ್ಲಿ ಇಸ್ಲಾಂ ಅತ್ಯುತ್ತಮ ಧರ್ಮ. ಆದರೆ ಅದರ ಹೆಚ್ಚಿನ ಅನುಯಾಯಿಗಳಿಂದ ಅತಿ ತಪ್ಪಾಗಿ ಅರ್ಥೈಸಲಾಗಿರುವ ಧರ್ಮ' ಎಂಬ ಹಳೇ ಅಪವಾದ ಈಗಲೂ ನಿಜವೆನಿಸಲು ಇಂತಹ ಹೃದಯಹೀನ ಫತ್ವಾಗಳೇ ಕಾರಣ.

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಕೋಮು ಸೌಹಾರ್ದಕ್ಕೆ ಹೆಸರಾದ ಅವಿಭಜಿತ ದ.ಕ.ಜಿಲ್ಲೆಯ ಶಾಂತಿ ಕೆಡಿಸುವಲ್ಲಿ ಪ್ರಮುಖ ಪಾತ್ರಧಾರಿ ಕಲ್ಲಡ್ಕದ 'ಕಾರ್' ಶೇಕ್‌ಡಾ(ನ್) ಪ್ರಭಾಕರ ಭಟ್ಟ. ಇಂತಹ ಕೋಮುವಾದಿ ಕಾಳಿಂಗ ಸರ್ಪಕ್ಕೆ ಫಂಡ್ ರೈಸರ್ ನಾಗರಾಜ ಶೆಟ್ಟಿ, ಧನಂಜಯ ಕುಮಾರ್, ಕೃಷ್ಣ ಪಾಲೇಮಾರ್, ನಳಿನ್‌ಕುಮಾರ್ ಕಟೀಲ್ ಹಾಗೂ ರಘುಪತಿ ಭಟ್ಟ.

ಈ ಕೀಚಕನ ಗೂಂಡಾಪಡೆಯಲ್ಲಿ ಪ್ರಮುಖರೆಂದರೆ ಭಜರಂಗದಳದ ಶರಣ್ ಪಂಪವೆಲ್, ಸೀತಾರಾಮ, ವಿಎಚ್‌ಪಿಯ ಜಗದೀಶ್ ಶೇಣಾವ, ಪ್ರಸಾದ್ ಅತ್ತಾವರ...

ಆರೆಸ್ಸೆಸ್ ಡಾನ್ ಕಲ್ಲಡ್ಕ ಪ್ರಭಾಕರ ಭಟ್ಟ ಒಬ್ಬ ಕೋಮುವಾದಿ. ಈತನೊಂದಿಗೆ ಇರುವ ನಾಗರಾಜ, ಧನಂಜಯ, ಪಾಲೇಮಾರ್ ಮತ್ತು ರಘುಪತಿ ಸಂಘಪರಿವಾರದ ಲಂಗಾ ಪ್ರಿಯರು!



ಪ್ರಭಾಕರ ಭಟ್ಟನ ಸಂಸ್ಕೃತಿಯೆಂದರೆ 'ಹಿಂದೂ' ಮಾತೆಗೆ 'ಕಾರ್' ಸೇವೆ! ಭೂತದ ಬಾಯಲ್ಲಿ ಭಗವದ್ಗೀತೆ! ಅಯ್ಯೋ ರಾಮ... ಆಗ ರಾಮನ ಹೆಸರಲ್ಲಿ ಇಟ್ಟಿಗೆ ಮಾರಿ ದುಡ್ಡು; ಈಗ ರಾಮನ ಹೆಸರಲ್ಲಿ ಶಾಲೆಕಟ್ಟಿ ಪಂಗನಾಮ!

- ಎಸ್.ಮಂಜುನಾಥ್, ಬಂಟ್ವಾಳ

ಮಾರ್ಚ್ **8** ಲಂಕೇಶರ ಹುಟ್ಟಿದ ಹಬ್ಬ. ಪತ್ರಿಕಾ ರಂಗಕ್ಕೆ, ಸಾಹಿತ್ಯ ರಂಗಕ್ಕೆ, ಸಿನಿಮಾರಂಗಕ್ಕೆ ಅವರ ಕೊಡುಗೆ ಅನನ್ಯ. ಇಂದಿರಾರವರು ಒಳ್ಳೆ ತಾಯಿಯಾಗಿ, ಲಂಕೇಶರು ಒಳ್ಳೆ ತಂದೆಯಾಗಿ ಮಕ್ಕಳಿಗೆ ಒಳ್ಳೆ ಶಿಕ್ಷಣ ಕೊಡಿಸಿ ಹಿಮಾಲಯದ ಎತ್ತರಕ್ಕೆ ಬೆಳೆಸಿದವರು. 'ಪಲ್ಲವಿ', 'ಎಲ್ಲಿಂದಲೋ ಬಂದವರು', 'ಖಂಡವಿದೆಕೋ ಮಾಂಸವಿದೆಕೋ', 'ಅನುರೂಪ' ಹೀಗೆ ಮಾನವೀಯ ಸಂಬಂಧಗಳನ್ನು ಕುರಿತ ಹಲವಾರು ಸಿನಿಮಾಗಳನ್ನಲ್ಲದೆ, ಜನರ ಮನಮುಟ್ಟುವಂತೆ ಪತ್ರಿಕೆ ಮಾಡಿದ ಲಂಕೇಶರಿಗೆ ನನ್ನ ನಮನ ಹಾಗೂ ಹುಟ್ಟುಹಬ್ಬದ ಶುಭಾಶಯಗಳು.

ಇದಿನಬ್ಬರವರು ತೀರಿಕೊಂಡಾಗ ಲಂಕೇಶರು 'ಜವರಾಯ ಬರ್‍ತಾನೆ ಗುಲಾಬಿ ಗಿಡಗಳನ್ನು ಕತ್ತರಿಸುತ್ತಾ ಜಾಲಿಕಂಟಿಗಳನ್ನು ಬಿಡುತ್ತಾನೆ' ಎಂದು ಹೇಳಿದ್ದರು. ಇವತ್ತು ಜಾಲಿಕಂಟಿಗಳು ವಿಧಾನಸೌಧದಲ್ಲಿ ಇವೆ.

ಇಂದಿರಾ ಲಂಕೇಶರು ಬರೆಯುತ್ತಿರುವ 'ಹುಳಿಮಾವು ಮತ್ತು ನಾನು' ಪುಸ್ತಕ ರೂಪದಲ್ಲಿ ಬರಲಿ. ಲಂಕೇಶರನ್ನು ಇನ್ನು ಹತ್ತಿಪ್ಪತ್ತು ವರ್ಷ ಬದುಕಲು ಬಿಟ್ಟಿದ್ದರೆ ಯಮನಗಂಟ ಹೋಗುತ್ತಿದ್ದಿಲ್ಲ.

ಹುಸನ್‌ಸಯಿಂ ಸುರಕೋಡ್‌ರವರು ನಮ್ಮ ಊರಿನವರು. ಅವರು ಕನ್ನಡಕ್ಕೆ ಅನುವಾದ ಮಾಡಿದ ಇಂಜಿನಿಯರ್ ಅವರ ಸಂದರ್ಶನ ಚಿಂತನೆಗೆ ಹಚ್ಚಿತು.

ದರ್ಶನ್‌ಗೆ ಈ ಜನ್ಮದಲ್ಲಿ ಬುದ್ಧಿ ಬರುವುದಿಲ್ಲ.

- ತಾರಗಲ್ಲ ಉಮೇಶ್, ರಾಮದುರ್ಗ




ಆರುಂಧತಿಯವರ ಅಂದರ್-ಬಾಹರ್!

ಶಿವರಾಜ್‌ಕುಮಾರ್ ಮತ್ತು ಆರುಂಧತಿ ನಾಗ್ ಮತ್ತೊಮ್ಮೆ ಕನ್ನಡ ಸಿನಿಮಾದಲ್ಲಿ ಜೊತೆಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಚಿತ್ರದ ಹೆಸರು 'ಅಂದರ್ ಬಾಹರ್'. ಈ ಚಿತ್ರವನ್ನು ಹೊಸಬ ಫಣೀಂದ್ರ ಎಂಬ ಯುವಕ ನಿರ್ದೇಶಿಸುತ್ತಿದ್ದಾರೆ. 'ಜೋಗಿ' ಚಿತ್ರ ಬಿಡುಗಡೆಯಾದ ನಂತರ ಕಳೆದ ಆರು ವರ್ಷಗಳಲ್ಲಿ ಶಿವಣ್ಣ-ಆರು ಜೋಡಿಯನ್ನು ಮತ್ತೊಮ್ಮೆ ತೋರಿಸಲು ಅನೇಕ ನಿರ್ಮಾಪಕರು ಮತ್ತು ನಿರ್ದೇಶಕರು ಪ್ರಯತ್ನಿಸಿದ್ದರು. ಆದರೆ ಅವರಲ್ಲಿ ಯಾರೂ ಯಶಸ್ವಿಯಾಗಿರಲಿಲ್ಲ.

ಸಾಧಾರಣವಾಗಿ ಸಿನಿಮಾ ಒಂದರ ನಾಯಕ-ನಾಯಕಿ ಜೋಡಿಯನ್ನು ಮತ್ತೆ ಮತ್ತೆ ನೋಡುವ ಆಶೆಯನ್ನು ಅಭಿಮಾನಿಗಳು ವ್ಯಕ್ತಪಡಿಸುತ್ತಾರೆ. ಆದರೆ 'ಜೋಗಿ'ಯ ನಂತರ ಆ ಚಿತ್ರದ ನಾಯಕ-ನಾಯಕಿಗಿಂತಲೂ ಅದರಲ್ಲಿ ತಾಯಿ- ಮಗನಾಗಿ ಕಾಣಿಸಿಕೊಂಡಿದ್ದ ಶಿವಣ್ಣ-ಆರು ಜೋಡಿ ಜನಮನವನ್ನು ಗೆದ್ದಿತ್ತಲ್ಲದೆ ಅವರಿಬ್ಬರನ್ನು ತೆರೆಯ ಮೇಲೆ ಜೊತೆಯಾಗಿ ನೋಡಬೇಕೆಂದು ಶಿವಣ್ಣನ ಅಭಿಮಾನಿಗಳು ಆಶಿಸಿದ್ದರು.

ಶಿವಣ್ಣ-ಆರು ತರಹದ ಪ್ರಬುದ್ಧ ಕಲಾವಿದರನ್ನು ಹೊಸ ನಿರ್ದೇಶಕ ಹೇಗೆ ಬಳಸಿಕೊಳ್ಳುತ್ತಾರೆ ಎಂಬ ಪ್ರಶ್ನೆ ಈಗ ಎಲ್ಲರನ್ನು ಕಾಡುತ್ತಿದೆ. ಅದೇನೇ ಇರಲಿ, ಒಬ್ಬ ಹೊಸ ನಿರ್ದೇಶಕನಿಗೆ ಯಾವುದೇ ಅಂಜಿಕೆ ಮತ್ತು ಆತಂಕವಿಲ್ಲದೆ ಇವರಿಬ್ಬರು ತಮ್ಮ ಕಾಲ್‌ಶೀಟ್ ನೀಡಿದ್ದನ್ನು ಮೆಚ್ಚಬೇಕು.

ಆರು ವರ್ಷಗಳ ಹಿಂದೆ ಪುನೀತ್ ರಾಜ್‌ಕುಮಾರ್ 'ಮಯೂರ' ಎಂಬ ಚಿತ್ರದಲ್ಲಿ ನಟಿಸಬೇಕಾಗಿತ್ತು. ಆ ಚಿತ್ರದ ಜಾಹೀರಾತುಗಳು ಪ್ರಕಟಗೊಂಡಿದ್ದವಲ್ಲದೆ ಅದರ ಮುಹೂರ್ತವೂ ಭರ್ಜರಿಯಾಗಿ ನಡೆದಿತ್ತು. ಆದರೆ ಆ ಮುಹೂರ್ತದ ಬೆನ್ನಲ್ಲೇ ಆ ಚಿತ್ರದ ನಿರ್ದೇಶಕ ನಿಧನ ಹೊಂದಿದ್ದರಿಂದ ಆ ಪ್ರಾಜೆಕ್ಟನ್ನು ಪುನೀತ್ ರಾಜ್‌ಕುಮಾರ್ ಕೈಬಿಟ್ಟಿದ್ದರು. ಇದರಿಂದ ಮುಖ್ಯವಾಗಿ ನಷ್ಟವಾಗಿದ್ದು ನಿರ್ಮಾಪಕ ಕನಕಪುರ ಶ್ರೀನಿವಾಸ್ ಅವರಿಗೆ.




ಇದೀಗ ಆರು ವರ್ಷಗಳ ನಂತರ ಕನಕಪುರ ಶ್ರೀನಿವಾಸ್ ಅವರಿಗೆ ಮತ್ತೆ ಪವರ್‌ಸ್ಟಾರ್ ಕಾಲ್‌ಶೀಟ್ ದೊರೆತಿದೆ. ಇವರ ನಿರ್ಮಾಣದ ಚಿತ್ರವನ್ನು 'ಆಪ್ತಮಿತ್ರ' ಖ್ಯಾತಿಯ ಪಿ.ವಾಸು ನಿರ್ದೇಶಿಸಲಿದ್ದಾರೆ. ಕನಕಪುರ ಶ್ರೀನಿವಾಸ್-ಪುನೀತ್- ವಾಸು ಸಮಾಗಮದ ಈ ಚಿತ್ರ ಅದ್ದೂರಿಯ ಚಿತ್ರವಾಗಲಿದೆ ಎಂದು ಸುಲಭವಾಗಿ ಊಹಿಸಬಹುದು.

ಪುನೀತ್ ಮತ್ತು ಪಿ.ವಾಸು ಇದೇ ಮೊದಲ ಬಾರಿಗೆ ಜೊತೆಯಾಗಿ ಕೆಲಸ ಮಾಡುತ್ತಿರುವುದರಿಂದ ಈ ಚಿತ್ರದ ಬಗ್ಗೆ ಒಂದಿಷ್ಟು ಹೆಚ್ಚಿನ ನಿರೀಕ್ಷೆ ಇದ್ದೇ ಇರುತ್ತದೆ. ಆರಂಭದಲ್ಲಿ ವಿಷ್ಣುವರ್ಧನ್ ಚಿತ್ರಗಳನ್ನು ನಿರ್ದೇಶಿಸುತ್ತಿದ್ದ ವಾಸು ವಿಷ್ಣು ನಿಧನದ ನಂತರ ಮೊನ್ನೆ ಉಪೇಂದ್ರ ನಾಯಕನಾಗಿ ನಟಿಸಿದ್ದ 'ಆರಕ್ಷಕ' ಎಂಬ ಚಿತ್ರವನ್ನು ನಿರ್ದೇಶಿಸಿದರು. ಆ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲದಿದ್ದರೂ ವಾಸು ಅವರ ತಾರಾಮೌಲ್ಯಕ್ಕೇನು ತೊಂದರೆಯಾಗಲಿಲ್ಲ. ದಕ್ಷಿಣ ಭಾರತದ ದೊಡ್ಡ ದೊಡ್ಡ ತಾರೆಗಳ ಚಿತ್ರಗಳನ್ನು ನಿರ್ದೇಶಿಸಿರುವ ವಾಸು ಆಯಾ ಹೀರೋಗಳ ಇಮೇಜಿಗೆ ತಕ್ಕಂತೆ ಚಿತ್ರಕಥೆ ಬರೆಯುವುದರಲ್ಲಿ ನಿಸ್ಸೀಮರು. ಹೀಗಾಗಿ ಪುನೀತ್ ಅವರ ಫೈಟಿಂಗ್ ಮತ್ತು ಡ್ಯಾನ್ಸಿಂಗ್ ಟ್ಯಾಲೆಂಟನ್ನು ವಾಸು ಸಂಪೂರ್ಣವಾಗಿ ಬಳಸಿಕೊಂಡರೆ ಅಚ್ಚರಿ ಇಲ್ಲ.

ಅದೇನೇ ಇರಲಿ, ಇಷ್ಟು ದಿನ ಪುನೀತ್ ಅವರ ಕಾಲ್‌ಶೀಟ್‌ಗಾಗಿ ಕಾಯುತ್ತ ಕುಳಿತಿದ್ದ ಕನಕಪುರ ಶ್ರೀನಿವಾಸ್ ಈಗ ನಿಟ್ಟುಸಿರುಬಿಡುತ್ತಿರಬೇಕು.

ರವಿಚಂದ್ರನ್ 'ಟ್ರಾಫಿಕ್' ಎಂಬ ಮಲಯಾಳಂ ಚಿತ್ರದ ಕನ್ನಡ ಅವತರಣಿಕೆಯಲ್ಲಿ ನಟಿಸುತ್ತಿದ್ದಾರೆ. ಅಂದಹಾಗೆ, ಮಲಯಾಳಂನಲ್ಲಿ ಜಯಭೇರಿ ಭಾರಿಸಿದ್ದ ಈ ಚಿತ್ರವನ್ನು ಕನ್ನಡಕ್ಕೆ ಭಟ್ಟಿ ಇಳಿಸುವ ಜವಾಬ್ದಾರಿಯನ್ನು - ಅಂದರೆ ನಿರ್ದೇಶಿಸುವುದನ್ನು - ರವಿಚಂದ್ರನ್ ಅವರೇ ವಹಿಸಿಕೊಂಡಿದ್ದಾರೆ. ಈ ಚಿತ್ರಕ್ಕೆ 'ಕ್ರೇಜಿಸ್ಟಾರ್' ಎಂದು ನಾಮಕಾರಣ ಮಾಡಿದ್ದಾರೆ ರವಿ. ಮೊನ್ನೆ ತಾನೆ ಕವಿತಾ ಲಂಕೇಶ್ ನಿರ್ದೇಶನದ 'ಕ್ರೇಜಿ ಲೋಕ' ಚಿತ್ರದ ಕೆಲಸವನ್ನು ಮುಗಿಸಿರುವ ರವಿಚಂದ್ರನ್ 'ಕ್ರೇಜಿಸ್ಟಾರ್' ಎಂಬ ಹೊಸ ಚಿತ್ರವನ್ನು ಕೈಗೆತ್ತಿಕೊಂಡಿರುವುದು ಕಾಕತಾಳೀಯ.



ಶ್ರೀನಿ ಟೋಪಿ ಉಪ್ಪಿ ತಲೆಗೆ!



ಉಪೇಂದ್ರ ನಾಯಕ ನಟನಾಗಿ ನಟಿಸಲಿರುವ ಹೊಸ ಚಿತ್ರ 'ಟೋಪಿವಾಲಾ' ಸದ್ಯದಲ್ಲೇ ಸೆಟ್ಟೇರಲಿದೆ. ಈ ಚಿತ್ರವನ್ನು ರೇಡಿಯೋ ಜಾಕಿ ಆಗಿರುವ ಶ್ರೀನಿವಾಸ್ ಎಂಬುವವರು ನಿರ್ದೇಶಿಸಲಿದ್ದಾರೆ. ಈ ಚಿತ್ರಕ್ಕೆ ಶ್ರೀನಿವಾಸ್ ಅವರೇ ಕತೆ ಮತ್ತು ಚಿತ್ರಕತೆಯನ್ನು ಬರೆದಿದ್ದರೂ ಸಂಭಾಷಣಾ ಜವಾಬ್ದಾರಿಯನ್ನು ಸ್ವತಃ ಉಪ್ಪಿ ವಹಿಸಿಕೊಂಡಿದ್ದಾರೆ.

ಉಪ್ಪಿ ಹೀಗೆ ಮಾಡುತ್ತಿರುವುದು ಇದೇ ಮೊದಲಲ್ಲ. ಈ ಹಿಂದೆ ಅನೇಕ ಚಿತ್ರಗಳಿಗೆ ಉಪ್ಪಿ ತಾವೇ ಚಿತ್ರಕಥೆ, ಸಂಭಾಷಣೆ ಬರೆದಿದ್ದರೂ ನಿರ್ದೇಶನದ ಜವಾಬ್ದಾರಿಯನ್ನು ಹೊಸಬರಿಗೆ ನೀಡಿದ್ದುಂಟು. ಸಾಧಾರಣವಾಗಿ ಹೊಸ ನಿರ್ದೇಶಕ ಎಂದರೆ ಅದರಲ್ಲಿ ಉಪ್ಪಿಯ ಹಸ್ತಕ್ಷೇಪ ಇದ್ದೇ ಇರುತ್ತದೆ. ಅಂತಹ ಚಿತ್ರ ಬಾಕ್ಸ್‌ಆಫೀಸ್‌ನಲ್ಲಿ ಮುಗ್ಗರಿಸಿದರೆ ಅದಕ್ಕೆ ಕಾರಣ ನಿರ್ದೇಶಕ ಎಂದೂ, ಗೆದ್ದರೆ ಅದರ ಸಂಪೂರ್ಣ ಕ್ರೆಡಿಟ್ ತನಗೆ ಎಂದೂ ಉಪ್ಪಿ ವರ್ತಿಸಿದ್ದೂ ಉಂಟು.

ಅದೇನೇ ಇರಲಿ, ಈ ಹೊಸ ಚಿತ್ರ 'ಟೋಪಿವಾಲಾ' ನಿರ್ಮಾಪಕರಿಗೆ ಟೋಪಿ ಹಾಕದಂತಿರಲಿ ಎಂಬುದೇ ನಮ್ಮ ಹಾರೈಕೆ.

Registered No.KA/RNP/BGS/2036/2011-13 Posted at : GPO, Bangalore-01, Fri/Saturday R B P LANKESH, Kannada Weekly Price Rs. 14/- 21-03-2012 RNI No. KARKAN2005/1464



ಪ್ಯಾರ್‌ಗೇ ಆಗ್ಬಿಟ್ಟೈತೆ

"ಪ್ಯಾರ್‌ಗೇ ಆಗ್ಬಿಟ್ಟೈತೆ ನಮ್ಗುಕ್ಕೆ ಪ್ಯಾರ್‌ಗೇ ಆಗ್ಬಿಟ್ಟೈತೆ..." ಎಂಬ ಹಾಡು ಭಯಂಕರ ಹಿಟ್ ಆಗಿರೋದು ಗೊತ್ತಲ್ಲ? ಕೋಮಲ್ ನಟಿಸಿರುವ 'ಗೋವಿಂದಾಯನಮಃ' ಚಿತ್ರದ ಈ ಹಾಡನ್ನು ಬರೆದಿರುವುದು ಆ ಚಿತ್ರದ ನಿರ್ದೇಶಕ ಪವನ್ ಒಡೆಯರ್.

ಪವನ್ ಇನ್ನೂ 25ರ ಯುವಕ. ಬಿ.ಕಾಂ. ಓದಿದ ಪವನ್ ಫೆಡಿಲಿಟಿ ಇನ್‌ವೆಸ್ಟ್‌ಮೆಂಟ್ಸ್ ಎಂಬ ಲಂಡನ್ ಮೂಲದ ಕಂಪನಿಯಲ್ಲಿ ಒಂದಿಷ್ಟು ದಿನ ಕೆಲಸ ಮಾಡಿದರು. ಶಾಲಾ ಮತ್ತು ಕಾಲೇಜು ದಿನಗಳಲ್ಲೇ ರಂಗಭೂಮಿಯಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದ ಪವನ್ ತನ್ನ ಸ್ನೇಹಿತರೊಂದಿಗೆ ಒಂದು ತಂಡವನ್ನು ಕಟ್ಟಿಕೊಂಡು 'ಆಗ ಪಜೀತಿ', 'ನಾವು ಕಳ್ಳರು', 'ಆರಲ್ಲ ಒಂಬತ್ತು', 'ಹೊಡೀತು ಲಾಟರಿ' ಮುಂತಾದ ನಾಟಕಗಳ ಪ್ರದರ್ಶನ ನೀಡಿದ್ದರು.

ರಂಗಭೂಮಿಯಲ್ಲಿ ಪವನ್‌ಗೆ ಆಸಕ್ತಿ ಹುಟ್ಟಲು ಒಂದು ಕಾರಣವೂ ಇತ್ತು, ರಾಜ್ಯ ಪ್ರಶಸ್ತಿ ವಿಜೇತ 'ಗಜಾನನ ನಾಟಕ ಮಂಡಳಿ, ಜಮಖಂಡಿ' ಎಂಬ ರಂಗಸಂಸ್ಥೆಯ ಸ್ಥಾಪಕ ಡಿ.ಎನ್.ಒಡೆಯರ್ ಪವನ್‌ನ ಅಜ್ಜ. ವೃತ್ತಿ ರಂಗಭೂಮಿಯಲ್ಲಿ ಹಲವು ದಶಕಗಳ ಕಾಲ ಈ ಗಜಾನನ ನಾಟಕ ಮಂಡಲಿ ಸೇವೆ ಸಲ್ಲಿಸಿತ್ತು. ಸಾಹಸಸಿಂಹ ವಿಷ್ಣುವರ್ಧನ್ ಅವರ ತಂದೆ ಹೆಚ್.ಎಲ್. ನಾರಾಯಣ್‌ರಾವ್ ತರಹದವರು ಇದೇ ಸಂಸ್ಥೆಯಲ್ಲಿ ಸ್ಕ್ರಿಪ್ಟ್ ರೈಟರ್ ಆಗಿದ್ದರು. ನಾರಾಯಣ ರಾವ್ ಅವರು ಬರೆದಿದ್ದ 'ಸತ್ಯನಾರಾಯಣ ವ್ರತಮಹಿಮೆ' ಎಂಬ ನಾಟಕ ಆ ಕಾಲಕ್ಕೇ ಒಂದು ಸಾವಿರ ಪ್ರದರ್ಶನ ನೀಡಿ ದಾಖಲೆ ನಿರ್ಮಿಸಿತ್ತು. ಧೀರೇಂದ್ರ ಗೋಪಾಲ್ ಎಂಬ ದೈತ್ಯ ಕಲಾವಿದ ಬೆಳಕಿಗೆ ಬಂದಿದ್ದೂ ಗಜಾನನ ನಾಟಕ ಮಂಡಳಿಯಿಂದಲೇ.

ಆದರೆ ಪವನ್ ತಂದೆ ಗಜಾನನ ಒಡೆಯರ್ ಬ್ಯಾಂಕ್ ಉದ್ಯೋಗಿ. ಈ ವಂಶದ ಮೂಲ ಜಮಖಂಡಿಯಾದರೂ ಗಜಾನನ ಒಡೆಯರ್ ಅವರ ಸಂಸಾರ ನೆಲೆಸಿದ್ದು ಕುಣಿಗಲ್‌ನಲ್ಲಿ. ಕಾಲೇಜು ಮುಗಿದ ಮೇಲೆ ಪವನ್ ಫೆಡಿಲಿಟಿ ಇನ್‌ವೆಸ್ಟ್‌ಮೆಂಟ್ಸ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದರೂ ಚಿತ್ರರಂಗಕ್ಕೆ ಬರಬೇಕು ಎಂಬ ತುಡಿತ ಆತನಲ್ಲಿ ದಿನೇದಿನೇ ಹೆಚ್ಚಾಗಲಾರಂಭಿಸಿತು. ಒಮ್ಮೆ ಪವನ್‌ಗೆ ಅಮೆರಿಕದ ನರ್ದನ್ ಟ್ರಸ್ಟ್ ಎಂಬ ಸಂಸ್ಥೆಯಿಂದ ಇಂಟರ್‌ವ್ಯೂ ಕರೆಬಂದಿತ್ತು. ಸಂದರ್ಶನಕ್ಕೆ ಹೋಗಬೇಕಿದ್ದ ಪವನ್ 'ನನ್ನ ಸ್ನೇಹಿತನಿಗೆ ಸಿಕ್ಕಾಪಟ್ಟೆ ಹುಷಾರಿಲ್ಲ' ಎಂದು ಸುಳ್ಳು ನೆಪಹೇಳಿ ತಪ್ಪಿಸಿಕೊಂಡ.

ಅದೇ ಹೊತ್ತಿಗೆ ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ನೂರು ಜನ್ಮಕು' ಚಿತ್ರದಲ್ಲಿ ಒಂದು ಸಣ್ಣ ಛಾನ್ಸು ಇದೆ ಎಂದು ಯಾರೋ ಹೇಳಿದರು. ಇಂಟರ್‌ವ್ಯೂಗೆ ಚಕ್ಕರ್ ಹೊಡೆದ ಪವನ್ ಸೀದಾ ನಾಗತಿಹಳ್ಳಿ ಸಿನಿಮಾದ ಶೂಟಿಂಗ್ ನಡೆಯುತ್ತಿದ್ದ ಜಾಗಕ್ಕೆ ಹೋದ. ಆದರೆ ಅಲ್ಲಿ ಇದ್ದದ್ದು ಸಣ್ಣ ಪಾತ್ರವಲ್ಲ, ಬದಲಾಗಿ ಹೀರೋ ಹಿಂದೆ ನಿಂತುಕೊಳ್ಳುವ ಜೂನಿಯರ್ ಆರ್ಟಿಸ್ಟ್ ಪಾತ್ರ.

ಇತ್ತ ಸಿನಿಮಾದಲ್ಲಿ ನಟಿಸುವ ಅವಕಾಶವೂ ಇಲ್ಲದೆ, ಅತ್ತ ಇಂಟರ್‌ವ್ಯೂಗೆ ಚಕ್ಕರ್ ಹೊಡೆಯುವ ಮೂಲಕ ಅಮೆರಿಕಕ್ಕೆ ಹೋಗುವ ಛಾನ್ಸನ್ನೂ ಕಳೆದುಕೊಂಡು ಕೂತಿದ್ದ ಪವನ್‌ಗೆ ಅದು ಹೇಗೋ ನಿರ್ದೇಶಕ ಯೋಗರಾಜ್ ಭಟ್ ಅವರ ಫೋನ್ ನಂಬರ್ ಸಿಕ್ಕಿತು. ಕೂಡಲೇ ಆತ ಭಟ್ಟರಿಗೆ ಫೋನ್ ಮಾಡಿದ. ಭಟ್ಟರ ಅಸಡಾ ಬಸಡಾ ಮೂಡು ಅಂದು ಹೇಗಿತ್ತೋ "ನಾಳೆ ಬೆಳಿಗ್ಗೆ ಮನೆಗೆ ಬಾ"' ಎಂದರು. ಮಾರನೇ ದಿನ ಹನುಮಂತ ನಗರದಲ್ಲಿರುವ ಭಟ್ಟರ ಮನೆಮುಂದೆ ಪವನ್ ಹಾಜರ್. ಅಷ್ಟೇ ಅಲ್ಲ, ತಾನು ಬರೆದು ತಂದಿದ್ದ ಸಿನಿಮಾ ಒಂದರ ಸಿನಾಪ್ಸಿಸ್‌ಅನ್ನು ಭಟ್ಟರ ಕೈಗಿಟ್ಟ. ಅದನ್ನು ನೋಡುವ ಗೋಜಿಗೆ ಹೋಗದ ಭಟ್ಟರು ತಮ್ಮ 'ಪಂಚರಂಗಿ' ಚಿತ್ರದಲ್ಲಿ ಪವನ್‌ಗೆ ಅಸಿಸ್ಟೆಂಟ್ ಡೈರೆಕ್ಟರ್ ಕೆಲಸ ಕೊಟ್ಟರು.

ಪಾಯಿಂಟ್ ಬ್ಲಾಂಕ್ ಟೆನ್

1. ನಿಮ್ಗುಕೆ ಯಾರ ಜೊತೆಯಾದರೂ ಪ್ಯಾರ್‌ಗೆ ಆಗುಬುಟ್ಟೈತಾ?
   * ಏನೋ ಗೊತ್ತಿಲ್ಲ
2. ಈ ಹಾಡಿನ ಜನಪ್ರಿಯತೆ ನೋಡಿ ಅನ್ನಿಸಿದ್ದು...
   * ಚಾನ್ಸ್‌ಗೆ ಹೋಗ್‌ಬಿಟ್ಟೈತೆ
3. ಒಡೆಯರ್ ಅಂದ ತಕ್ಷಣ ನೆನಪಾಗುವುದು...
   * ಮೈಸೂರು.
4. ಬಹಳ ಇಷ್ಟವಾದ ಸಿನಿಮಾ?
   * 'ನಮ್ಮೂರ ಮಂದಾರ ಹೂವೆ'.
5. ಬಹಳ ಇಷ್ಟವಾದ ಪುಸ್ತಕ?
   * 'ಉತ್ತರ ಭೂಪ' (beechi)
6. ಮಾಯಾವತಿ, ಸೋನಿಯಾ ಗಾಂಧಿ, ಜಯಲಲಿತಾ -ಯಾರು ಉತ್ತಮರು?
   * ಜಯಲಲಿತಾ... ನಮ್ಮೂರವ್ರೆ ಅಲ್ವಾ.....!
7. ಬ್ಲೂಫಿಲಂ ಪಕ್ಷ ಅಂದರೆ?
   * ಈಗ ಅಧಿಕಾರದಲ್ಲಿರೋದು ಯಾವ ಪಕ್ಷ ಅನ್ಕೊಂಡಿದೀರಿ?
8. ಕ್ರಿಕೆಟ್ ಅಂದರೆ?
   * ಪ್ರಾಣ, ಸೋಮಾರಿಗಳ ತಾಣ!
9. ಯಡಿಯೂರಪ್ಪ ಮತ್ತು ಶೋಭಾ ಕರಂದ್ಲಾಜೆಯನ್ನು ಜೊತೆಗೆ ನೋಡಿದಾಗ?
   * ನಕ್ಕೂ... ನಕ್ಕೊ.....
10. ಕರ್ನಾಟಕ ಗುಜರಾತ್ ಆಗಬೇಕೆ?
   * Oh... ಇನ್ನೂ ಆಗಿಲ್ವ.....!

ಭಟ್ಟರೊಂದಿಗೆ ಆ ಒಂದು ಚಿತ್ರದಲ್ಲಿ ಕೆಲಸ ಮಾಡಿದ ಪವನ್ ಆನಂತರ ಎರಡು ತಿಂಗಳ ಕಾಲ ಕೂತು 'ಗೋವಿಂದಾಯನಮಃ' ಚಿತ್ರದ ಕಥೆ, ಚಿತ್ರಕಥೆ ಬರೆದು ನಿರ್ಮಾಪಕರ ಭೇಟಿಗೆ ನಿಂತ. ಪವನ್‌ನ ಸಿದ್ಧತೆ, ಕಥೆಯಲ್ಲಿದ್ದ ಹೊಸತನವನ್ನು ನೋಡಿದ ನಿರ್ಮಾಪಕ ಸುರೇಶ್ ಒಂದೇ ಏಟಿಗೆ ಗ್ರೀನ್‌ಸಿಗ್ನಲ್ ಕೊಟ್ಟೇಬಿಟ್ಟರು. ಈಗ ಸಿನಿಮಾ ತೆರೆಗೆ ಸಿದ್ಧವಾಗಿದೆ. ಗೆಲುವಿನ ಮೊದಲ ಹೆಜ್ಜೆಯೆಂಬಂತೆ ಆ ಚಿತ್ರದ ಒಂದು ಹಾಡು ಸೂಪರ್ ಹಿಟ್ಟ್ ಆಗಿದೆ.

"ಗೆಲುವು ಹೆಣ ಇದ್ದಂತೆ. ಅದನ್ನು ಹೆಗಲ ಮೇಲೆ ಹೆಚ್ಚು ಕಾಲ ಹೊತ್ತು ಇರೋಕ್ಕಾಗಲ್ಲ" ಎಂದು ಅರಿತಿರುವ ಪವನ್ ಮುಂದಿನ ಚಿತ್ರದ ಕನಸಿನಲ್ಲಿದ್ದಾನೆ. ಈ ಯುವಕನಿಗೆ ಒಳ್ಳೆಯದಾಗಲಿ...

ಗೋವಿಂದಾಯನಮಃ!


• ಅರುಣ್.ಜಿ

ಕೋಟ್ಯಾಧಿಪತಿ ಪುನೀತ್



ಕೋಟ್ಯಾಧಿಪತಿ' ಎಂಬ ಹೊಸ ಟಿ.ವಿ. ಕಾರ್ಯಕ್ರಮವನ್ನು ಪುನೀತ್ ರಾಜ್‌ಕುಮಾರ್ ನಡೆಸಿಕೊಡಲಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಈ ಕಾರ್ಯಕ್ರಮವನ್ನು ಒಪ್ಪಿಕೊಳ್ಳಲು ಮುಖ್ಯ ಕಾರಣ ಅವರ ಅಪ್ಪಾಜಿ ಎಂದರೆ ನಿಮಗೆ ಆಶ್ಚರ್ಯವಾದೀತು. ಅಮಿತಾಬ್ ಬಚ್ಚನ್ ನಡೆಸಿಕೊಡುತ್ತಿದ್ದ 'ಕೌನ್ ಬನೇಗಾ ಕರೋಡ್‌ಪತಿ' ಕಾರ್ಯಕ್ರಮವನ್ನು ರಾಜ್ ಕುಮಾರ್ ತುಂಬಾ ಇಷ್ಟಪಟ್ಟಿದ್ದರಂತೆ. "ಆದುದರಿಂದ ಅಪ್ಪಾಜಿಗೆ ಇಷ್ಟವಾದ ಈ ಕಾರ್ಯಕ್ರಮವನ್ನು ಶ್ರದ್ಧಾಂಜಲಿ ರೂಪದಲ್ಲಿ ಮಾಡುತ್ತಿದ್ದೇನೆ" ಎಂದು ಪುನೀತ್ ಮೊನ್ನೆ ಹೇಳಿದರು.

"ಅಮಿತಾಬ್ ಬಚ್ಚನ್ ವಿದ್ಯಾವಂತ ಕುಟುಂಬದಿಂದ ಬಂದವರು ಮಾತ್ರವಲ್ಲ, ಅತ್ಯಂತ ಪ್ರತಿಷ್ಠೆಯ ಶಾಲೆಗಳಲ್ಲಿ ವಿದ್ಯೆ ಪಡೆದವರು. ಹೀಗಾಗಿ ಅವರು ನಡೆಸಿಕೊಟ್ಟ ಸಾಮಾನ್ಯ ಜ್ಞಾನ ಬಗೆಗಿನ ಆ ಕಾರ್ಯಕ್ರಮಕ್ಕೆ ಅದರದ್ದೇ ಆದ ವೈಶಿಷ್ಟ್ಯವಿತ್ತು. ಆದರೆ ನೀವು ನಡೆಸಿಕೊಡುವ ಈ ಸಾಮಾನ್ಯ ಜ್ಞಾನ ಕಾರ್ಯಕ್ರಮದ ವೈಶಿಷ್ಟ್ಯ ಏನಿರುತ್ತದೆ?" ಎಂದು ಪ್ರಶ್ನಿಸಿದರೆ ಪುನೀತ್ ಹಿಂದಿ ಚಿತ್ರರಂಗದ ಲಂಬೂ ತರಹವೇ ಸೌಜನ್ಯದಿಂದ ಉತ್ತರಿಸಿದ್ದು ಹೀಗೆ:



"ನಿಜ, ನಾನು ವಿದ್ಯಾವಂತನಲ್ಲ, ಆದರೆ ಈ ಕಾರ್ಯಕ್ರಮ ಅಮಿತಾಬ್ ಬಚ್ಚನ್ ನಡೆಸಿಕೊಡುತ್ತಿದ್ದಾಗ ಅಪ್ಪಾಜಿಯವರು ಬಹಳ ಇಷ್ಟಪಟ್ಟಿದ್ದರು. ಹೀಗಾಗಿ ನಾನು ಇದನ್ನು ಒಪ್ಪಿಕೊಂಡೆ. ಈ ಕಾರ್ಯಕ್ರಮದಿಂದ ಯಾರು ಕೋಟ್ಯಾಧಿಪತಿ ಆಗುತ್ತಾರೋ ಇಲ್ಲವೋ ನನಗಂತೂ ಗೊತ್ತಿಲ್ಲ, ಆದರೆ ನಾನಂತೂ ಕೋಟ್ಯಾಧಿಪತಿ ಆಗುತ್ತೇನೆ. ಏಕೆಂದರೆ ಸಮಾಜದ ವಿವಿಧ ವರ್ಗದ ಜನರನ್ನು ಹತ್ತಿರದಿಂದ ಮಾತನಾಡಿಸುವ ಸೌಭಾಗ್ಯ ನನಗೆ ದೊರಕಿದೆ. ಅಷ್ಟೇ ಅಲ್ಲ, ಟಿ.ವಿ. ಮಾಧ್ಯಮದ ಮುಖಾಂತರ ನಾನು ಕೋಟ್ಯಾಂತರ ಜನರ ಮನೆಮನೆಗೆ ತಲುಪುತ್ತೇನೆ. ಅದೇ ನನ್ನ ಪಾಲಿನ ಲಾಭ."

ಅಪ್ಪು ನಡೆಸಿಕೊಡಲಿರುವ ಈ ಕಾರ್ಯಕ್ರಮವನ್ನು ಕನ್ನಡದ ಪ್ರೇಕ್ಷಕ ಯಾವ ರೀತಿಯಲ್ಲಿ ಸ್ವೀಕರಿಸುತ್ತಾನೆ ಎಂಬ ಕುತೂಹಲ ಟಿ.ವಿ. ಚಾನಲ್‌ಗಳಲ್ಲಿ ಮಾತ್ರವಲ್ಲ, ಉದ್ಯಮದ ಅನೇಕರಿಗೆ ಇದೆ. ಒಂದು ವೇಳೆ ಈ ಸಾಹಸದಲ್ಲಿ ಅಪ್ಪು ಗೆದ್ದಿದ್ದೇ ಆದಲ್ಲಿ ಮುಂಬರುವ ದಿನಗಳಲ್ಲಿ ಇನ್ನೂ ಅನೇಕ ಸಿನಿಮಾ ನಟರು ಟಿ.ವಿ.ಗೆ ದಾಳಿಯಿಡುವುದು ಗ್ಯಾರಂಟಿ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com